ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ವಿಶೇಷ ಸಂಚಿಕೆ

ಸಂಪುಟ 27
ಸಂಚಿಕೆ 19
ಮೇ 08. 2005

ಮೇ ದಿನ ಕೆಂಪು ನಮನ



ಇತರೆ ವಿಶೇಷ ಲೇಖನಗಳು

ಮೇ ದಿನದ ಕ್ರಾಂತಿಕಾರಿ ಸಂಕಲ್ಪ

ಶುಭಾಶಯಗಳೊಂದಿಗೆ





ಆರ್. ರೋಷನ್ ಬೇಗ್

ಮಾಜಿ ಸಚಿವರು, ಶಾಸಕರು

ಬೆಂಗಳೂರು

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ

ವಿಶೇಷ ಸಂಚಿಕೆ

ಸಂಪುಟ 27 ಸಂಚಿಕೆ 19

ಮೇ 08, 2005 ಬೆಲೆ ರೂ. 5.00

ಮೇ ದಿನ - ಕೆಂಪು ನಮನ




ಮೇ ದಿನದ ಕ್ರಾಂತಿಕಾರಿ ಸಂಕಲ್ಪ

ಸಂಪಾದಕೀಯ ಕಛೇರಿ :

12, 18ನೇ ಅಡ್ಡರಸ್ತೆ,
ಸಂಪಂಗಿರಾಮ ನಗರ,
ಬೆಂಗಳೂರು - 27
ದೂರವಾಣಿ : 22234319
ಟೆಲಿಫ್ಯಾಕ್ಸ್ : 22236462
e-mail : eikyaranga@vsnl.com

ಒಳಪುಟಗಳಲ್ಲಿ....



















ಸಂಪಾದಕೀಯ.....

ಕ್ರಾಂತಿಕಾರಿ ಸಂಕಲ್ಪ ಮತ್ತು ಕಾರ್ಯಾಚರಣೆಯತ್ತ....

ಕಾರ್ಮಿಕ ವರ್ಗ ತನ್ನ ಹಕ್ಕುಗಳಿಗಾಗಿ ತ್ಯಾಗ, ಬಲಿದಾನಗಳ ಹೋರಾಟದ ಪರಂಪರೆಯ ಪ್ರತೀಕ, ಸಂಕೇತದ ದಿನ ಈ ಮೇ ದಿನ. ಬಂಡವಾಳಶಾಹಿ ವರ್ಗ ಶೋಷಣೆಯನ್ನು ಇನ್ನೆಂದೂ ಇನ್ನಷ್ಟೂ ಸಹಿಸಲಾರೆವು ಎಂದು ವಿಮೋಚನೆಯ ಸಮರ ಸಾರಿ, ವಿಜಯದ ಅಜೇಯ ಶಕ್ತಿ ಎಂದು ಸಾಬೀತುಪಡಿಸಿ, ಸಮಾನತೆಯ ಸಮಾಜ ವ್ಯವಸ್ಥೆ ಸ್ಥಾಪನೆ ದುಡಿವ ವರ್ಗದಿಂದಲೇ ಸಾಧ್ಯ ಎಂದು ದೃಢಪಡಿಸಿದ ಇತಿಹಾಸ ಸಾಕ್ಷಿ - ನೆನಪಿಸುವ ಸ್ಫೂರ್ತಿ-ಸಂಕಲ್ಪದ ದಿನ ಈ ಮೇ ದಿನ.



ಮೇ ದಿನದ ಆಚರಣೆ ದುಡಿವ ಜನತೆಯ ಪಾಲಿಗೆ ಒಂದು ಯಾಂತ್ರಿಕವಲ್ಲ. ವರ್ತಮಾನದ ಸವಾಲನ್ನು ಗುರುತಿಸಿ ಉತ್ತಮ ಭವಿಷ್ಯತ್ತಿಗಾಗಿ ಹೋರಾಡುವ - ಮುನ್ನಡೆವ ರೂಪು-ರೇಷೆಗಳನ್ನು ಪುನರ್‌ಮನನ ಮಾಡಿಕೊಳ್ಳುವ, ಈ ಸಂಘರ್ಷದಲ್ಲಿ ದುಡಿವ ಜನತೆಯ ಒಗ್ಗಟ್ಟು ಇನ್ನಷ್ಟು ಬೆಸೆಯುವ ಸಂದರ್ಭ. ಇಡೀ ವಿಶ್ವದ ಮೇಲೆ ಅಧಿಪತ್ಯ ಸಾಧಿಸಲು ದಶ ದಿಕ್ಕುಗಳಲ್ಲಿ ಹೊಸ ತಂತ್ರ-ಕುತಂತ್ರಗಳ ಮೂಲಕ ಸಾಮ್ರಾಜ್ಯಶಾಹಿ ಹೂಂಕರಿಸುತ್ತಿದೆ. ಸಮಾಜವಾದಿ ವ್ಯವಸ್ಥೆಯ ವಿರುದ್ಧ ಕತ್ತಿ ಮಸೆಯುತ್ತಿದೆ. ಮೂರನೆಯ ಜಗತ್ತಿನ ರಾಷ್ಟ್ರಗಳನ್ನು ನುಂಗಲು ಹೊರಟಿದೆ. ಪ್ರತಿರೋಧಿಸಿದ ಶಕ್ತಿಗಳನ್ನು ನಾಶ ಪಡಿಸಲು ಯುದ್ಧ ಸಾರಿದೆ. ಹಾಗೆಯೇ ಭಾರತದ ಆಳುವ ವರ್ಗಗಳು ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ಮೂಲಕ ತನ್ನ ಸುಲಿಗೆ ತೀವ್ರಗೊಳಿಸಲು ಮುಂದಾಗಿವೆ. ಇದನ್ನು ರಕ್ಷಿಸಲು ಮತಾಂಧ-ಕೋಮುವಾದಿ ಶಕ್ತಿಗಳು, ಪ್ರತಿಗಾಮಿಗಳು ತಮ್ಮ ಕೈಮೇಳೈಸಿವೆ. ದುಡಿವ ಜನತೆಯನ್ನು ಜಾತಿ-ಧರ್ಮ-ಭಾಷೆ-ಗಡಿಗಳ ಮೂಲಕ ವಿಭಜನೆ ತರಲು ಹವಣಿಸುತ್ತಿವೆ.

ಇಂತಹ ಯತ್ನಗಳ ವಿರುದ್ಧ ಪ್ರತಿರೋಧವೂ ಬೆಳೆದಿದೆ. ಇನ್ನೂ ಪ್ರಬಲವಾಗಿ ವಿಸ್ತಾರಗೊಂಡು ಬೆಳೆಯಬೇಕಿದೆ.

ಇಂತಹ ಸನ್ನಿವೇಶದಲ್ಲಿ ಕೇವಲ ಕಾರ್ಮಿಕವರ್ಗ ದೈನಂದಿನ ಬೇಡಿಕೆಗಳಿಗಾಗಿ ಮಾತ್ರ ಹೋರಾಟದೇ ಸಮಸ್ತ ಸಮಾಜದ ವಿಮೋಚನೆಯ, ರಾಜಕೀಯ ಮುಂಚೂಣಿಯ ಶಕ್ತಿಯಾಗಿ ಹೆಚ್ಚುಹೆಚ್ಚು ಕ್ರಿಯಾಶೀಲವಾಗಬೇಕಿದೆ. ಈ ಸಂದರ್ಭದಲ್ಲಿ ದುಡಿವಜನರ ಪ್ರಾಣ ಮಿತ್ರ ಐಕ್ಯರಂಗ ವಿಶೇಷ ಲೇಖನಗಳ ಸಂಚಿಕೆ ತರುತ್ತಿದೆ. ಓದುಗರು ಎಂದಿನಂತೆ ಸ್ವಾಗತಿಸುವಿರೆಂದು ನಿರೀಕ್ಷಿಸುತ್ತೇವೆ.

- ಸಂ



ಮೇ ದಿನದ ಗುರಿ


"ಇದುವರೆಗೆ ತಿಳಿದಿರುವ ಸಮಾಜದ ಇತಿಹಾಸ ವರ್ಗ ಹೋರಾಟಗಳ ಇತಿಹಾಸ" ಈ ವಾಕ್ಯದಿಂದ ಕಮ್ಯೂನಿಸ್ಟ್ ಪ್ರಣಾಳಿಕೆ ಆರಂಭವಾಗುತ್ತದೆ. ಇತಿಹಾಸದ ಭೌತವಾದಿ ವ್ಯಾಖ್ಯೆಯ ಇಡೀ ಆಯಾಮದ ಸಾರಾಂಶವನ್ನು ಇದು ಕೊಡುತ್ತದೆ.

ಸಮಾಜದ ಬೆಳವಣಿಗೆಯನ್ನು ಮುಂದೊತ್ತುವ ವರ್ಗಹೋರಾಟ ಅವಿಶ್ರಾಂತವಾದುದು. ಆದರೆ ವರ್ಗಗಳ ಸಿದ್ಧತೆ ಮತ್ತು ಮಧ್ಯಪ್ರವೇಶ ಈ ಪ್ರಕ್ರಿಯೆಯನ್ನು ತ್ವರಿತಗೊಳಿಸಬಹುದು ಅಥವಾ ನಿಧಾನಗೊಳಿಸಬಹುದು.

ಕಳೆದ ಶತಮಾನದ ಇತಿಹಾಸವನ್ನು 'ಜನತೆಯ ಶತಮಾನ' ಎನ್ನಲಾಗುತ್ತದೆ. ಮಹಾನ್ ಅಕ್ಟೋಬರ್ ಕ್ರಾಂತಿ ವಿಶ್ವ ಇತಿಹಾಸದಲ್ಲಿ ಹೊಸ ಯುಗವನ್ನು ಆರಂಭಿಸಿತು. ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಪರಿವರ್ತನೆಯ ಯುಗ. ಆ ಶತಮಾನದಲ್ಲಿ ಎರಡು ಮಹಾಯುದ್ದಗಳು ನಡೆದವು. ಹಲವು ರಾಷ್ಟ್ರೀಯ ಜನತಾ ಪ್ರಜಾಪ್ರಭುತ್ವ ಕ್ರಾಂತಿಗಳು ಭುಗಿಲೆದ್ದವು. ರಷ್ಯಾ, ಕೋರಿಯಾ, ಪೂರ್ವಯುರೋಪ್ ಮತ್ತು ಅಂತಿಮವಾಗಿ ಇಂಡೋ-ಚೀನಾ ಸಮಾಜವಾದಿಯಾದವು. ಕ್ಯೂಬಾದಲ್ಲೇ ತನ್ನ ಕ್ರಾಂತಿಯನ್ನು ಸಾಧಿಸಿತು. ಇವೆಲ್ಲಾ ಆಯಾಯ ದೇಶಗಳ ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆದವು.

ಈ ಶತಮಾನದಲ್ಲಿ ಹಲವು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಅವಸಾಹತೀಕರಣ ನಡೆಯಿತು. ವಸಾಹತುಗಳನ್ನು ಕಳಚಿ ಹಾಕುವ ಪ್ರಕ್ರಿಯೆ ಎರಡನೆ ಮಹಾಯುದ್ಧ ಮುಗಿದ ಕೂಡಲೇ ಭಾರತದಿಂದಲೇ ಆರಂಭವಾಯಿತು. ಈ ಪ್ರಕ್ರಿಯೆ ಅಂದರೆ ಸ್ವಾತಂತ್ರ್ಯ ಆಂದೋಲನಗಳು ರಾಷ್ಟ್ರೀಯ ಬೂರ್ಜ್ವಾ ವರ್ಗಗಳ ನೇತೃತ್ವದಲ್ಲಿ ನಡೆದವು. ಕಾರ್ಮಿಕ ವರ್ಗವೂ ಈ ಹೋರಾಟಗಳಲ್ಲಿ ಭಾಗವಹಿಸಿತು.

ಕಳೆದ ಶತಮಾನದ ಅಂತ್ಯದ ವೇಳೆಗೆ ಸೋವಿಯತ್ ಒಕ್ಕೂಟ ಪತನಗೊಂಡಿತು. ಮೊದಲು ಹಲವು ಪೂರ್ವ ಯುರೋಪಿನ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯಾಯಿತು.



ವಿ.ಜೆ.ಕೆ.ನಾಯರ್

ಚೀನಾ ಈ ಒತ್ತಡವನ್ನು ಎದುರಿಸಿ ನಿಂತು ಒಂದು ಹೊಸ ದಾರಿಯನ್ನು ಕಂಡುಕೊಂಡಿತು. ಅದು ವಿಶ್ವಕ್ಕೆ ತೆರೆದುಕೊಂಡು ಅಪಾರ ಸಾಧನೆಗಳನ್ನು ಆರಂಭಿಸಿತು.

ಈಗ ಹೊಸ ಶತಮಾನದಲ್ಲಿ ಜಾಗತೀಕರಣವೆಂಬುದು ಕಾಡುತ್ತಿರುವ ಪ್ರವೃತ್ತಿ. ಇದಕ್ಕೆ ಚಾಲನೆ ಸಿಗುತ್ತಿರುವುದು ಇಡೀ ವಿಶ್ವದ ಬೂರ್ಜ್ವಾ ವರ್ಗಕ್ಕೆ ವಿಶ್ವ ಹಣಕಾಸು ಬಂಡವಾಳ ನೇತೃತ್ವದಲ್ಲಿ. ಜಾಗತೀಕರಣದ ಶಕ್ತಿಗಳಿಗೆ ಪ್ರತಿರೋಧ ಒಡ್ಡುತ್ತಿರುವ ಜನತೆ, ಕಾರ್ಮಿಕ ವರ್ಗವೂ ತನ್ನ ಪ್ರತಿಭಟನೆಗಳನ್ನು ದಾಖಲಿಸುತ್ತಿದೆ.

ಇಡೀ ಜನತೆ ಒಟ್ಟಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನ ಒಟ್ಟುಗೂಡಿ ಕಾರ್ಯಾಚರಣೆಗಿಳಿದಾಗ ಮಾತ್ರ ಪರಿಹರಿಸಲು ಸಾಧ್ಯ.

ವಾಸ್ತವವಾಗಿ ಮೇ ದಿನದ ಕರೆಯ ಆಶಯ ಇದೇ. ವಿಶ್ವ ಕಾರ್ಮಿಕ ಆಂದೋಲನವನ್ನು ಕ್ರೋಢೀಕರಿಸಬೇಕು ಎಂಬುದು.

ಅಂತರ್ರಾಷ್ಟ್ರೀಯ ಸೌಹಾರ್ದತೆಯ ಚೌಕಟ್ಟಿನೊಳಗೆ ಪ್ರತಿಯೊಂದು ದೇಶದ ಕಾರ್ಮಿಕ ವರ್ಗ ತಮ್ಮದೇ ಆಳುವ ವರ್ಗಗಳ ವಿರುದ್ಧ ನಿರ್ಣಾಯಕವಾದ ಕಾರ್ಯಾಚರಣೆ ನಡೆಸಬೇಕು.

ಈ ಮೇ ದಿನ ಇಂತಹ ಮಧ್ಯಪ್ರವೇಶಕ್ಕೂ ಕರೆ ನೀಡುತ್ತದೆ.

ನಮ್ಮ ರಾಜ್ಯದಲ್ಲೂ ನಾವು ಸರಕಾರದ ವಿರುದ್ಧ ನಮ್ಮದೇ ಆದ ಕಾರ್ಯಾಚರಣೆಗಳನ್ನು ಯೋಜಿಸುತ್ತಿದ್ದೇವೆ. ಪ್ರಭುತ್ವದ ವಿರುದ್ಧ ಇಂತಹ ಹೋರಾಟಗಳನ್ನು ಮುನ್ನಡೆಸಿದರೆ ಮಾತ್ರವೇ ಕಾರ್ಮಿಕ ವರ್ಗಕ್ಕೆ ಪ್ರಭುತ್ವದ ವರ್ಗ ನಿಲುವಿನ ಬಗ್ಗೆ ಕಲಿತುಕೊಳ್ಳಲು ಸಾಧ್ಯವಾಗುತ್ತದೆ.

ಇಂತಹ ಕಾರ್ಯಾಚರಣೆಗಳ ಮೇಲೆ ಗಮನ ಕೇಂದ್ರೀಕರಿಸಿ ಕಾರ್ಮಿಕ ವರ್ಗ ತನಗೊಂದು ರಾಜಕೀಯ ಸಂಘಟನೆ ಕಟ್ಟಿಕೊಳ್ಳಬೇಕು. ಹೀಗೆ ಇಡೀ ಜನತೆಗೆ ನೇತೃತ್ವ ನೀಡುವ ಕಾರ್ಮಿಕ ವರ್ಗದ ಪಕ್ಷ ಸಾಮಾಜಿಕ ಬದಲಾವಣೆಯನ್ನು ಸಾಧಿಸುತ್ತದೆ. ಇದು ಮೇ ದಿನವನ್ನು ಸಂಘಟಿಸುವ ಉದ್ದೇಶ. ○

ಈ ಮೇ ದಿನದಂದು ದೇಶದ ದುಡಿಯುವ ಜನತೆ ಎಲ್ಲಾ ಶ್ರಮಜೀವಿ ಜನಸಮೂಹಗಳ ಐಕ್ಯತೆಯನ್ನು ಇನ್ನಷ್ಟು ಬಲಗೊಳಿಸಬೇಕು, ಕ್ರೋಢೀಕರಿಸ ಬೇಕು ಮತ್ತು ಸಾಮ್ರಾಜ್ಯಶಾಹೀ ಧಾಳಿಗಳ ವಿರುದ್ಧ, ಆಳುವ ವರ್ಗಗಳ ಆಕ್ರಮಣಗಳ ವಿರುದ್ಧ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಹಾಗೂ ಕೋಮುವಾದ ಮತ್ತು ಜಾತಿವಾದದ ವಿಭಜನಕಾರಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಇನ್ನಷ್ಟು ಬಲಿಷ್ಠ ಹೋರಾಟಗಳನ್ನು ಹರಿಯ ಬಿಡಬೇಕು.



ಮೇ ದಿನದ ಪ್ರಣಾಳಿಕೆ

ಭಾರತೀಯ ಕಾರ್ಮಿಕ ಸಂಘಗಳ ಕೇಂದ್ರ, ಸಿಐಟಿಯು ವಿಶ್ವಾದ್ಯಂತ ಕಾರ್ಮಿಕ ವರ್ಗದ ಬಂಧುಗಳಿಗೆ ದುಡಿಯುವ ಜನಗಳ ಅಂತರ್ರಾಷ್ಟ್ರೀಯ ಸೌಹಾರ್ದದ ಈ ಚಾರಿತ್ರಿಕ ಮೇ ದಿನದಂದು ತನ್ನ ಕ್ರಾಂತಿಕಾರಿ ಶುಭಾಶಯಗಳನ್ನು ವ್ಯಕ್ತಪಡಿಸುತ್ತದೆ.

ಸಿಐಟಿಯು, ಸಮಾಜವಾದಿ ದೇಶಗಳ ದುಡಿಯುವ ವರ್ಗ ಮತ್ತು ಜನತೆಯನ್ನು ಸಮಾಜವಾದದ ಬಾವುಟವನ್ನು ಅವಿಚ್ಛಿನ್ನವಾಗಿ ಎತ್ತಿ ಹಿಡಿದಿರುವುದಕ್ಕೆ ಅವರಿಗೆ ಶುಭಾಶಯ ವ್ಯಕ್ತಪಡಿಸುತ್ತದೆ.

ಸಿಐಟಿಯು, ಸಾಮ್ರಾಜ್ಯಶಾಹೀ ಜಾಗತೀಕರಣದ ನೀತಿಗಳಿಗೆ ಪ್ರತಿರೋಧದ ಬಾವುಟವನ್ನೆತ್ತಿ ಹಿಡಿದು ಬಂಡವಾಳಶಾಹಿಯ ವಿರುದ್ಧ ಸ್ಫೂರ್ತಿದಾಯಕ ಹಾಗಾ ಸಮರಶೀಲ ಹೋರಾಟಗಳನ್ನು ನಡೆಸುತ್ತಿರುವ ಮುಂದುವರೆದ ಬಂಡವಾಳಶಾಹಿ ದೇಶಗಳ ಕಾರ್ಮಿಕವರ್ಗ ಮತ್ತು ಜನತೆಗೆ ಶುಭಾಶಯ ವ್ಯಕ್ತಪಡಿಸುತ್ತದೆ.

ಸಿಐಟಿಯು, ಒಂದೆಡೆ ಸಾಮ್ರಾಜ್ಯಶಾಹಿ ಧಾಳಿಗಳನ್ನು ಹಿಮ್ಮೆಟ್ಟಿಸುವಲ್ಲಿ, ಇನ್ನೊಂದೆಡೆ ಆಳುವವರ್ಗಗಳ ಆಕ್ರಮಣಗಳನ್ನು ಹಿಮ್ಮೆಟ್ಟಿಸುವಲ್ಲಿ ನಿರತರಾಗಿರುವ ಅಭಿವೃದ್ಧಿಶೀಲ ದೇಶಗಳ ದುಡಿಯುವ ಜನಗಳಿಗೆ ಹಾರ್ದಿಕ ಶುಭಾಶಯಗಳನ್ನರ್ಪಿಸುತ್ತಾ ಅವರೊಂದಿಗೆ ಸೌಹಾರ್ದದ ಪ್ರತಿಜ್ಞೆಗೈಯುತ್ತದೆ.

II

ಅಮೆರಿಕನ್ ಸಾಮ್ರಾಜ್ಯಶಾಹಿಗಳು, ಇಂಗ್ಲೆಂಡಿನ ಟೋನಿಬ್ಲೇರ್ ಆಡಳಿತದ ನೆರವು ಮತ್ತು ಒತ್ತಾಸೆಯೊಂದಿಗೆ ವಿಶ್ವಾದ್ಯಂತ ಬಹುಪಾಲು ಸಾರ್ವಜನಿಕ ಅಭಿಪ್ರಾಯವನ್ನು ತಮ್ಮದ್ದೇ ದೇಶಗಳೊಳಗೆ ಹೆಚ್ಚುತ್ತಿರುವ ವಿರೋಧವನ್ನು ಲೆಕ್ಕಿಸದೆ ಇರಾಕಿನಲ್ಲಿ ತಮ್ಮ ಅತಿಕ್ರಮಣವನ್ನು ಮುಂದುವರೆಸುತ್ತಿದ್ದಾರೆ. ಈ ಆಕ್ರಮಣ ಆ ದೇಶವನ್ನು ಧ್ವಂಸಗೊಳಿಸಿದೆಯಷ್ಟೇ ಅಲ್ಲ 1,50,000 ಕ್ಕಿಂತಲೂ ಹೆಚ್ಚು ಇರಾಕಿಗಳನ್ನು ಕೊಲೆಗೈಯಲಾಗಿದೆ. ಈ ಅತಿಕ್ರಮಣದ ಸೇನೆಗಳಿಗೆ ಇರಾಕಿನ ಎಲ್ಲಾ ಜನವಿಭಾಗಗಳಿಂದ ಬರುತ್ತಿರುವ ಹೆಚ್ಚೆಚ್ಚು ಪ್ರತಿರೋಧ ಈಗಾಗಲೇ ಅಮೆರಿಕನ್ ಪಡೆಗಳಲ್ಲಿ ಅಪಾರ ಸಾವು-ನೋವು ಉಂಟು ಮಾಡಿದೆ ಹಾಗೂ ಈ ಅತಿಕ್ರಮಣದ ಕಾನೂನು ಬಾಹಿರತೆಯನ್ನು ಬಯಲಿಗೆಳೆದಿದೆ. ಅಮೆರಿಕಾ ನೇತೃತ್ವದ ಯುದ್ಧಕೂಟಕ್ಕೆ ಕೂಡಾ ಹಿನ್ನಡೆ ಉಂಟಾಗಿದೆ; ಹಲವು ದೇಶಗಳು ಇರಾಕಿನಿಂದ ತಮ್ಮ ಪಡೆಗಳನ್ನು ಹಿಂದಕ್ಕೆ ಪಡೆದಿವೆ. ಸಾಮ್ರಾಜ್ಯಶಾಹಿಗಳ ಆಸರೆಯಲ್ಲಿ ನಿಂತ ಕೈಗೊಂಬೆ ಸರ್ಕಾರ ಹಾಗೂ ಸೋಗಿನ ಚುನಾವಣೆಗಳ ನಂತರ ಅಲ್ಲಿ ಬೆಸೆದ ಹೊಸ ಸಮ್ಮಿಶ್ರ ಕೂಟಕ್ಕೆ ಇರಾಕಿನ ಜನತೆಯ ಬೆಂಬಲ ಇಲ್ಲ. ಈ ನಗ್ನ ಆಕ್ರಮಣವನ್ನು ಬಳಸಿಕೊಂಡು ಅಮೆರಿಕನ್ ಆಡಳಿತ ಇರಾಕಿನ ತೈಲ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದೆ ಹಾಗೂ ಅಮೆರಿಕನ್ ಸಾಮ್ರಾಜ್ಯಶಾಹಿಯ ಜಾಗತಿಕ ಯಜಮಾನಿಕೆಯನ್ನು ಗಟ್ಟಿಗೊಳಿಸುತ್ತಿದೆ. ಇರಾಕಿನಿಂದ ಅಮೆರಿಕನ್ ನೇತೃತ್ವದ ಎಲ್ಲಾ ಅತಿಕ್ರಮಣ ಪಡೆಗಳನ್ನು ತಕ್ಷಣವೇ ಮತ್ತು ಬೇಷರತ್ತಾಗಿ ಹಿಂದಕ್ಕೆ ಪಡೆಯಬೇಕು ಹಾಗೂ ಎಲ್ಲಾ ಇರಾಕೀ ಬಂಧಿಗಳನ್ನು ಬಿಡುಗಡೆ ಮಾಡಬೇಕು ಎಂದು ಸಿಐಟಿಯು ಆಗ್ರಹಿಸುತ್ತದೆ. ಸಿಐಟಿಯು ಇರಾಕೀ ಜನತೆಯೊಂದಿಗೆ ಸೌಹಾರ್ದದ ಪ್ರತಿಜ್ಞೆ ಮಾಡುತ್ತದೆ.

ಪಶ್ಚಿಮ ಏಷ್ಯಾದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಪ್ಯಾಲೆಸ್ಟೇನಿಯನ್ನರ ವಿರುದ್ಧ ಇಸ್ರೇಲಿ ಆಕ್ರಮಣಗಳಲ್ಲಿ ಭಾಗಿಯಾಗದೆ ಅಲ್ಲಿ ಏರಿಯಲ್ ಶರೋನ್ ಆಡಳಿತ ಪ್ಯಾಲೆಸ್ಟೇನಿಯನ್ ಮಣ್ಣಲ್ಲಿ ಕಾನೂನು ಬಾಹಿರ ಇಸ್ರೇಲೀ ವಸತಿಪ್ರದೇಶಗಳನ್ನು ನೆಲೆಗೊಳಿಸುವ ಕೆಲಸವನ್ನು ಮುಂದುವರೆಸುತ್ತಿದೆ ಹಾಗೂ ಪ್ಯಾಲೆಸ್ಟೇನಿಯನ್ ಜನಗಳನ್ನೇ ಪರಸ್ಪರದಿಂದ ಬೇರ್ಪಡಿಸುವ .. ಗೋಡೆಗಳನ್ನು ನಿರ್ಮಿಸುತ್ತಿದೆ. ಅವರು ಜೊತೆಗೂಡಿ ಜನತೆಯ ಇಚ್ಛೆಗೆ ವಿರುದ್ಧವಾಗಿ ಪ್ಯಾಲೆಸ್ಟೇನ್ ಪ್ರಶ್ನೆಯ ಅನ್ಯಾಯಪೂರ್ಣ ಇತ್ಯರ್ಥವನ್ನು ಹೇರಲು ಪ್ರಯತ್ನಿಸುತ್ತಿದ್ದಾರೆ. ಸಿಐಟಿಯು ತಕ್ಷಣವೇ ಪ್ಯಾಲೇಸ್ಟೇನ್‌ನಿಂದ ಇಸ್ರೇಲಿ ಕಾನೂನುಬಾಹಿರ ಅತಿಕ್ರಮಣವನ್ನು ಕೊನೆಗೊಳಿಸಬೇಕು ಎಂದು ಆಗ್ರಹಿಸುತ್ತದೆ ಹಾಗಾ ಒಂದು ಸಾರ್ವಭೌಮ ಪ್ಯಾಲೆಸ್ಟೇನ್ ಪ್ರಭುತ್ವದ ಸ್ಥಾಪನೆಗಾಗಿ ಪ್ಯಾಲೆಸ್ಟೇನ್ ಜನತೆ ನಡೆಸಿರುವ ಹೋರಾಟಕ್ಕೆ ಸೌಹಾರ್ದದ ಪ್ರತಿಜ್ಞೆ ಮಾಡುತ್ತದೆ.

ಅಮೆರಿಕಾವು ತನ್ನ ಮುಂದಿನ ಧಾಳಿಗಳಿಗೆ ಸಿರಿಯಾ, ಉತ್ತರ ಕೊರಿಯದಂತಹ ದೇಶಗಳ ಮೇಲೂ ಗುರಿಯಿಟ್ಟಿದೆ, ಅದನ್ನು ಮುಂಬರುವ ಅವಧಿಯಲ್ಲಿ ಇನ್ನಷ್ಟು ಹೆಚ್ಚಿಸುವ ಪ್ರಯತ್ನದಲ್ಲಿದೆ.

ಸಿಐಟಿಯು ಭಾರತದೊಳಗೆ ಒಂದು ಸತತ ಯುದ್ಧ-ವಿರೋಧಿ ಪ್ರಚಾರ ನಡೆಸಿಕೊಂಡು ಹೋಗಬೇಕು ಹಾಗೂ

ವಿಶ್ವಾದ್ಯಂತ ಸಾಮ್ರಾಜ್ಯಶಾಹಿ ಯುದ್ಧ ತಂತ್ರಗಳ ವಿರುದ್ಧ ಹೋರಾಟದಲ್ಲಿ ಭಾಗಿಯಾಗಬೇಕು ಎಂದು ದೇಶದ ದುಡಿಯುವ ಜನತೆಗೆ ಕರೆ ನೀಡುತ್ತದೆ.

III

ಸಾಮ್ರಾಜ್ಯಶಾಹೀ, ಪ್ರಾಬಲ್ಯದ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಹಾಗೂ ವ್ಯಾಪಾರ ಸಂಸ್ಥೆಗಳಾದ ವಿಶ್ವಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹಾಗೂ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯೂಟಿಓ) ಪರಸ್ಪರ ಕೈಜೋಡಿಸಿ ಮೂರನೇ ಜಗತ್ತಿನ ದೇಶಗಳ ಮೇಲೆ ಉದಾರೀಕರಣ ಮತ್ತು ಜಾಗತೀಕರಣದ ಅಜೆಂಡಾವನ್ನು ಹೇರಲು ಮುಂದಾಗಿವೆ. ಇದರ ವಿನಾಶಕಾರಿ ಪರಿಣಾಮಗಳು ಹೆಚ್ಚೆಚ್ಚಾಗಿ ಜನರ ಅನುಭವಕ್ಕೆ ಬರುತ್ತಿವೆ. ಆರ್ಥಿಕರಂಗದಲ್ಲಿ ಸಾಮ್ರಾಜ್ಯಶಾಹಿಯ ಈ ಧಾಳಿಗಳು ವಿಶ್ವಾದ್ಯಂತ ಅದರ ಆಕ್ರಮಣಕಾರೀ ಮಿಲಿಟರೀ ಮಧ್ಯಪ್ರವೇಶಗಳ ಜತೆ ಜತೆಗೆ ಸಾಗಿದೆ. ಈ ಸಾಮ್ರಾಜ್ಯ ಶಾಹೀ ಆಕ್ರಮಣಗಳ ವಿರುದ್ಧ ಪ್ರತಿರೋಧ ಶಕ್ತಿಗೂಡಿಸಿಕೊಳ್ಳುತ್ತಿದ್ದರೂ ಈ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಬೇರೆ ಪರ್ಯಾಯವಿಲ್ಲ ಎಂಬ ಪರಿಕಲ್ಪನೆಯನ್ನು ಘೋಷಿಸುತ್ತಾ ಈ ಪ್ರತಿರೋಧವನ್ನು ಮೊಟಕು ಮಾಡುವ ಪ್ರಯತ್ನಗಳು ನಡೆದಿವೆ. ಇದು ನವಉದಾರವಾದಿ ಧೋರಣೆಯ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳಲು ನೆವವಲ್ಲದೆ ಇನ್ನೇನೂ ಅಲ್ಲ. ಈ ಸಾಮ್ರಾಜ್ಯಾಹಿ ಧಾಳಿಗಳ ವಿರುದ್ಧ ಜನಸಮೂಹಗಳ ಸಾಧ್ಯವಾದಷ್ಟು ವಿಶಾಲ ವಿಭಾಗಗಳನ್ನು ಅಣಿನೆರಸಿ ಒಂದು ನಿರಂತರ ಹೋರಾಟವನ್ನು ನಡೆಸುವುದು ಭಾರತದಲ್ಲಿ ಕಾರ್ಮಿಕ ವರ್ಗದ ಪ್ರಾಥಮಿಕ ಕರ್ತವ್ಯ.

ಸಾಮ್ರಾಜ್ಯಶಾಹಿ ನಡೆಸುತ್ತಿರುವ ನವಉದಾರವಾದಿ ಜಾಗತೀಕರಣಕ್ಕೆ ಪರ್ಯಾಯವೇನೂ ಇಲ್ಲ ಎಂದು ಸುಧಾರಣಾ-ಪರ ಲಾಬಿಗಳು ಜಗತ್ತನ್ನು ನಂಬಿಸಲು ಎಷ್ಟೇ ಪ್ರಯತ್ನಿಸಿದರೂ ವಿಶ್ವಾದ್ಯಂತ ಜನರು ಪ್ರತಿರೋಧ ಹೋರಾಟಗಳಲ್ಲಿ ಸಾಮೂಹಿಕವಾಗಿ ಭಾಗವಹಿಸುತ್ತಿದ್ದಾರೆ. ಸಮರಶೀಲ ಪ್ರತಿಭಟನೆಗಳು, ಅಪಾರ ಸಂಖ್ಯೆಯಲ್ಲಿ ಇದರಲ್ಲಿ ಜನಗಳ ಭಾಗವಹಿಸುವಿಕೆ, ಬ್ರೆಟನ್‌ವುಡ್ ಸಂಸ್ಥೆಗಳು ಹೇರಿರುವ ತಥಾಕಥಿತ ಆರ್ಥಿಕ ಸುಧಾರಣೆಗಳು ಅನಿವಾರ್ಯವೆಂದು ಮಿಥ್ಯೆಯನ್ನು ನಿರಾಕರಿಸಿದೆ.

2004ರಲ್ಲಿ ಭಾರತದಲ್ಲಿ ಹಾಗೂ ಈ ವರ್ಷ ಪೋರ್ಟೋ ಅಲೆಗ್ರೆಯಲ್ಲಿ ನಡೆದ 'ವಿಶ್ವ ಸಾಮಾಜಿಕ ವೇದಿಕೆ'ಯ ಆವೃತ್ತಿಗಳು ಹಾಗೂ ಪ್ರತಿವರ್ಷ ನಡೆಯುವ ಅದರ ಯುರೋಪಿಯನ್ ಮತ್ತು ಏಷ್ಯಾನ್ ಆವೃತ್ತಿಗಳು 'ಇನ್ನೊಂದು ವಿಶ್ವ ಸಾಧ್ಯ'



ಹಾಗೂ 'ಸಮಾಜವಾದವೇ ಪರ್ಯಾಯ' ಎಂಬುದನ್ನು ಒತ್ತಿ ಒತ್ತಿ ಸಾರಿವೆ

ಅಂತರ್ರಾಷ್ಟ್ರೀಯವಾಗಿ ನವ ಉದಾರವಾದಿ ಜಾಗತೀಕರಣದ ವಿರುದ್ಧ ಆಂದೋಲನ ಡಬ್ಲ್ಯೂಟಿಓದ ಮಂತ್ರಿಮಟ್ಟದ ದೋಹಾಸುತ್ತಿನ ಮಾತುಕತೆಗಳ ನಂತರ ಅಭಿವೃದ್ಧಶೀಲ ದೇಶಗಳ ಮೇಲೆ ಇನ್ನಷ್ಟು ಪ್ರತಿಕೂಲ ಶರತ್ತುಗಳನ್ನು ಹೇರುವ ಪ್ರಯತ್ನಗಳ ವಿರುದ್ಧ ತೀವ್ರವಾಗಿ ಪ್ರತಿಭಟನೆ ನಡೆಸುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳು ಡಬ್ಲ್ಯೂಟಿಓ ವನ್ನು ಹಾಗೂ ಜೊತೆಗೆ ಹಲವಾರು ಪ್ರಾದೇಶಿಕ ಹಾಗೂ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಬಳಸುತ್ತಿದ್ದಾರೆ. ಅವು ನಮ್ಮ ಆರ್ಥಿಕಗಳ ಮೇಲೆ ಸವಾರಿ ಮಾಡಿ ನಮ್ಮ ಸಮಾಜಗಳನ್ನು ಬಡತನಕ್ಕೆ ತಳ್ಳುವ ಒಂದು ಬೆಳವಣಿಗೆ ಮಾದರಿಯನ್ನು ಹೇರುತ್ತಿದ್ದಾರೆ. ವ್ಯಾಪಾರ ಉದಾರೀಕರಣದ ಹೆಸರಿನಲ್ಲಿ ಜೀವ ಮತ್ತು ಪ್ರಕೃತಿಯ ಪ್ರತಿಯೊಂದು ಅವಕಾಶವನ್ನು ಮಾರಾಟಕ್ಕೆ ಇಡಲಾಗಿದೆ ಹಾಗೂ ಜನತೆಗೆ ಅವರ ಮೂಲಭೂತ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ನಮ್ಮ ದೇಶವೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳನ್ನು ಎಂದೂ ಮುಗಿಯದ ಸಾಲದ ಚಕ್ರದಲ್ಲಿ ಸಿಲುಕಿಸಿ, ತಮ್ಮ ಮಾರುಕಟ್ಟೆಗಳನ್ನು ತೆರೆಯಲು ಹಾಗೂ ತಮ್ಮ ಸಂಪತ್ತನ್ನು ರಫ್ತು ಮಾಡಲು ಬಲವಂತ ಮಾಡಲಾಗುತ್ತಿದೆ.

ಕೃಷಿ, ನೀರು, ವಿದ್ಯುತ್, ಸಾರ್ವಜನಿಕ ಸೇವೆಗಳು ಹಾಗೂ ಹೂಡಿಕೆಗಳಲ್ಲಿ ಉದಾರೀಕರಣವನ್ನು ಹಿಮ್ಮೆಟ್ಟಿಸಲು ಹಾಗೂ ನಿಲ್ಲಿಸಲು ಹಾಗೂ ತಮ್ಮ ಸಮಾಜಗಳು, ತಮ್ಮ ಸಂಪನ್ಮೂಲಗಳು, ತಮ್ಮ ಸಂಸ್ಕೃತಿಗಳು ಹಾಗೂ ಜ್ಞಾನ ಹಾಗೂ ತಮ್ಮ ಆರ್ಥಿಕಗಳ ಮೇಲೆ ಜನಗಳ ಸಾರ್ವಭೌಮತೆಯನ್ನು ಎತ್ತಿ ಹಿಡಿಯಲು ವಿಶ್ವಾದ್ಯಂತ ಪ್ರಚಾರ ಬಲಗೂಡಿಸಿಕೊಳ್ಳುತ್ತಾ ಸಾಗಿದೆ.

ದೇಶದಲ್ಲಿ ನವಉದಾರವಾದಿ ಆರ್ಥಿಕ ನೀತಿಗಳ ಅನುಸರಣೆಯ ಎಲ್ಲ ಅಂಶಗಳ ವಿರುದ್ಧ ಹಾಗೂ ಆಳಗೊಳ್ಳುತ್ತಿರುವ ಬಡತನ, ಉಲ್ಬಣಗೊಳ್ಳುತ್ತಿರುವ ನಿರುದ್ಯೋಗ, ಹೆಚ್ಚುತ್ತಿರುವ ಉದ್ಯೋಗ ಹೀನತೆ ಇತ್ಯಾದಿಗಳ ರೂಪದಲ್ಲಿ ಬರುವ ಅದರ ವಿನಾಶಕಾರೀ ಪರಿಣಾಮಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಸಿಐಟಿಯು ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ. ಕಾರ್ಮಿಕ ಆಂದೋಲನ ಕೆಲಸದ ಹಕ್ಕನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿ ಪ್ರತಿಷ್ಠಾಪಿಸಬೇಕು ಎಂಬ ಒಂದು ದೇಶವ್ಯಾಪಿ ಆಂದೋಲನವನ್ನು ಕಟ್ಟುವಲ್ಲಿ ಜನಗಳನ್ನು ಅಣಿನೆರೆಸಬೇಕು, ಒಂದುಗೂಡಿಸಬೇಕು ಎಂದು ಕರೆ ನೀಡುತ್ತದೆ.

ಡಬ್ಲ್ಯೂಟಿಓ, ವಿಶ್ವಬ್ಯಾಂಕ್ ಮತ್ತು ಐಎಂಎಫ್ ಮೂಲಕ ನಡೆಸುತ್ತಿರುವ ಸಾಮ್ರಾಜ್ಯಶಾಹೀಯ ಜಾಗತಿಕ ಆರ್ಥಿಕ ಪ್ರಾಬಲ್ಯದ ವಿರುದ್ಧ ಹೋರಾಟವನ್ನು ಇನ್ನಷ್ಟು ಪ್ರಬಲಗೊಳಿಸಲು ಇತರ ಶ್ರಮಜೀವಿ ಜನವಿಭಾಗಗಳನ್ನು ಒಟ್ಟಿಗೆ ತರಬೇಕು ಎಂದು ಸಿಐಟಿಯು ಕಾರ್ಮಿಕವರ್ಗವನ್ನು ಪ್ರೇರೇಪಿಸುತ್ತದೆ.

IV

ಭಾರತದಲ್ಲಿ ಈಗ ಕೇಂದ್ರದಲ್ಲಿ ಕಳೆದ ವರ್ಷ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸೋಲಿನ ನಂತರ ಯುಪಿಎ ಸರ್ಕಾರ ಅಧಿಕಾರದಲ್ಲಿದೆ. ತಾನು ಅಧಿಕಾರದಲ್ಲಿ ಮುಂದುವರೆಯಲು ಎಡಪಕ್ಷಗಳನ್ನು ಅವಲಂಬಿಸಿರುವ ಈ ಯುಪಿಎ ಆಡಳಿತ ಜನಗಳಿಗೆ ಪ್ರಯೋಜನ ಒದಗಿಸುವ ಕೆಲವು ಸಕಾರಾತ್ಮಕ ಅಂಶಗಳನ್ನು ಒಳಗೊಂಡ ಒಂದು 'ರಾಷ್ಟ್ರೀಯ ಸಮಾನ ಕನಿಷ್ಠ ಕಾರ್ಯಕ್ರಮ'ವನ್ನು ಅಂಗೀಕರಿಸ ಬೇಕಾಗಿ ಬಂದಿದೆ.

ಆದರೆ ಯುಪಿಎದ ಕಳೆದ ಹನ್ನೊಂದು ತಿಂಗಳ ಆಡಳಿತಕಾಲದಲ್ಲಿ ಈ ಕಾರ್ಯಕ್ರಮದಲ್ಲಿನ ಜನಪರ ಕ್ರಮಗಳ ಅನುಷ್ಠಾನದ ಬಗ್ಗೆ ಅದು ಒಂದು ಉದಾಸೀನತೆಯ ನಿಲುವನ್ನು ಪ್ರದರ್ಶಿಸುತ್ತಿರುವುದನ್ನು ನಾವು ನೋಡಿದ್ದೇವೆ. ಅದು ಹಿಂದಿನ ಎನ್‌ಡಿಎ ಆಡಳಿತದಲ್ಲಿ ಇಡೀ ಆರ್ಥಿಕವನ್ನು ಹಳಿ ತಪ್ಪಿಸಿದ ಆರ್ಥಿಕ ಸುಧಾರಣೆಗಳ ವಿನಾಶಕಾರೀ ನೀತಿಗಳನ್ನೇ ಅನುಸರಿಸಲು ಯತ್ನಿಸುತ್ತಿದೆ. ಬಳಕೆದಾರ ಶುಲ್ಕ ಹಾಕುವ, ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳುವ, ಶೇರು ಮಾರಾಟದ ಮೂಲಕ ಹಿಂಬಾಗಿಲಿನ ಖಾಸಗೀಕರಣದ ಅದೇ ನೀತಿಗಳನ್ನು, ಯಾವ ನೀತಿಗಳನ್ನು ಜನತೆ ನಿರ್ಣಾಯಕವಾಗಿ ತಿರಸ್ಕರಿಸಿದರೋ ಆ ನೀತಿಗಳನ್ನು ಮುಂದೊತ್ತುತ್ತಿದೆ. ವಿದೇಶೀ ಹೂಡಿಕೆಗಳ ಮೂಲಕ ಬೆಳವಣಿಗೆಯ ಬಿಸಿಲುಕುದುರೆಯ ಬೆನ್ನು ಹತ್ತುವ ಹಾಗೂ ಬಹುರಾಷ್ಟ್ರೀಯ ಕಂಪನಿಗಳನ್ನು ಸಂತೃಪ್ತಗೊಳಿಸಲು ಕಸರತ್ತು ಮಾಡುವ ಅವೇ ಪ್ರಯತ್ನಗಳು ಮುಂದುವರೆಯುತ್ತಿವೆ. ಈ ಉದ್ಯೋಗಹೀನ ಬೆಳವಣಿಗೆಯ ಚೌಕಟ್ಟಿನಿಂದ ತಾರತಮ್ಯಗಳು ಹೆಚ್ಚಿವೆ, ಹೆಚ್ಚೆಚ್ಚು ಜನವಿಭಾಗಗಳ ದಾರಿದ್ರ್ಯ ಹೆಚ್ಚುತ್ತಿವೆ ಎಂಬುದು ಈಗ ಸುಸ್ಪಷ್ಟವಾಗಿದೆ. ನಮ್ಮ ಉದ್ದಿಮೆಯ, ಕೃಷಿಯ ಹಾಗೂ ಜನತೆಯ ಹಿತಾಸಕ್ತಿಗಳನ್ನು ಉಪೇಕ್ಷಿಸಿ ಸುಗ್ರೀವಾಜ್ಞೆಯ ದಾರಿ ಹಿಡಿದು ಪೇಟೆಂಟ್ ಕಾನೂನಿಗೆ ಮೂರನೇ ತಿದ್ದುಪಡಿಯನ್ನು ತರಲಾಗಿದೆ. ಏಕೆಂದರೆ ಸಂಸತ್ತಿನಲ್ಲಿ ಈ ಮಸೂದೆಯನ್ನು ಪಾಸು ಮಾಡಿಸಿಕೊಳ್ಳುವ ಮೊದಲು ಹಲವು ಮಹತ್ವದ ತಿದ್ದುಪಡಿಗಳನ್ನು ಸೇರಿಸಬೇಕಾಯಿತು. ಬ್ಯಾಂಕುಗಳು, ವಿಮೆ, ದೂರಸಂಪರ್ಕ ಹಾಗೂ ನಾಗರಿಕ ವಿಮಾನಯಾನದಲ್ಲಿ ಎಫ್‌ಡಿಐ ಏರಿಕೆಗೆ ನಿರ್ಧಾರ ಖಾಸಗಿ ವಿಮಾನ ಸಾರಿಗೆ ಸಂಸ್ಥೆಗಳಿಗೆ ಅಂತರ್ರಾಷ್ಟ್ರೀಯ ಹಾರಾಟಗಳನ್ನು ನಡೆಸಲು, ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸಲು ಇತ್ಯಾದಿಗಳಿಗೆ ಹಸಿರು ನಿಶಾನೆ ತೋರಿಸಿರುವುದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ದೇಶೀ-ವಿದೇಶೀ ದೊಡ್ಡ ವ್ಯಾಪಾರಸ್ಥರ ಲಾಬಿಯ ಒತ್ತಡಗಳಿಗೆ ಬಲಿಯಾಗುತ್ತಿರುವ ಪ್ರವೃತ್ತಿ ಹಾಗೇಯೇ ಉಳಿದಿರುವುದಕ್ಕೆ ಸಾಕ್ಷಿ.



ಕಾರ್ಮಿಕರ ಹಾಗೂ ಸರ್ಕಾರಿ ನೌಕರರ ಮುಷ್ಕರದ ಹಕ್ಕಿನ ವಿರುದ್ಧ ಸುಪ್ರೀಂ ಕೋರ್ಟಿನ ದುಷ್ಪರಿಣಾಮಗಳನ್ನು ನಿವಾರಿಸಬೇಕು ಎಂದು ಇಡೀ ಕಾರ್ಮಿಕರ ಆಂದೋಲನ ಮತ್ತೆ ಮತ್ತೆ ಬೇಡಿಕೆಯಿತ್ತರೂ ಸರ್ಕಾರ ಯಾವುದೇ ಪ್ರಯತ್ನ ನಡೆಸಿಲ್ಲ. ಬದಲಿಗೆ, ಸರ್ಕಾರದ ಆರ್ಥಿಕ ಸರ್ವೇಕ್ಷಣೆ "ಶ್ರಮ ಮಾರುಕಟ್ಟೆಯ ಕಾಠಿಣ್ಯವನ್ನು ನಿವಾರಿಸುವುದು", 'ಪ್ರವೇಶ ಮತ್ತು ನಿರ್ಗಮನ ತಡೆ'ಗಳನ್ನ ತೆಗೆದು ಹಾಕುವುದು ಇತ್ಯಾದಿಗಳ ಬಗ್ಗೆ ಮಾತನಾಡಿದೆ. ಈ ಮೂಲಕ ಕಾರ್ಮಿಕರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ಕಾರ್ಮಿಕ ಕಾನೂನುಗಳನ್ನು ಬದಲಿಸುವ ಹಳೆಯ ರಾಗವನ್ನು ಪುನರುಜ್ಜೀವನ ಗೊಳಿಸಲಾಗುತ್ತಿದೆ.

ಪ್ರಸಕ್ತ ಬಜೆಟ್ಟಿನಲ್ಲಿ ಗಣಿಗಾರಿಕೆ, ವ್ಯಾಪಾರ ಮತ್ತು ಪೆನ್ಷನ್ ವಿಭಾಗಗಳಲ್ಲಿ ಎಫ್‌ಡಿಐ ಬರುವ ಸೂಚನೆಗಳಿವೆ. ಇವು ಕೂಡಾ ದೇಶದ ಆರ್ಥಿಕ ಮತ್ತು ಜನತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ನೌಕರರ ಭವಿಷ್ಯ ನಿಧಿಯ ಮೇಲೆ ಬಡ್ಡಿಯನ್ನು ಮತ್ತು ಶೇ.9.5ಕ್ಕೆ ತರುವುದಾಗಿ ಪ್ರಕಟಣೆ ನೀಡಿದರೂ ಅದು ವಾಸ್ತವ ಕ್ರಮವಾಗಿ ಇನ್ನೂ ಪರಿವರ್ತನೆಗೊಂಡಿಲ್ಲ. ಅಲ್ಲದೆ ಸರ್ಕಾರ ಲೋಕಸಭೆಯಲ್ಲಿ ಪೆನ್ಷನ್ ಫಂಡ್ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನು ಮಂಡಿಸಿದೆ. ಈ ಬಗ್ಗೆ ಈ ಹಿಂದೆ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಈಗ ಈ ಮಸೂದೆಯನ್ನು ಸ್ಥಾಯೀ ಸಮಿತಿಗೆ ಒಪ್ಪಿಸಿದರೂ ಅವಸರದಲ್ಲಿ ಅದನ್ನು ಮುಂದೊತ್ತುವ ಪ್ರಯತ್ನಗಳು ಸಾಗಿವೆ. ಈ ರೀತಿ ಪೆನ್ಷನ್‌ನ ಖಾಸಗೀಕರಣದ ಭಯ, ಅದರ ನಿಧಿಯನ್ನು ಶೇರು ಮಾರುಕಟ್ಟೆಗೆ ಹಾಕುವ ಬೆದರಿಕೆ ಈಗಲೂ ಇದೆ.

ಈ ಎಲ್ಲಾ ದುಷ್ಟ ಪ್ರಯತ್ನಗಳು ಹಾಗೂ ವಂಚಕ ತಂತ್ರಗಳಿಗೆ ಎದುರಾಗಿ ದೇಶ ಕಾರ್ಮಿಕವರ್ಗದ ಕಾರ್ಯಾಚರಣೆಗಳ ಒಂದು ಸರಣಿಯನ್ನು ಕಂಡಿದೆ. ಕಾರ್ಮಿಕ ಆಂದೋಲನ ಜನವಿರೋಧಿ, ಆರ್ಥಿಕ ನೀತಿಗಳನ್ನು ಕೈಬಿಡುವಂತೆ ಮಾಡಲು ಒಂದು ಬಲಿಷ್ಠ ಜನಪ್ರಿಯ ಪ್ರತಿರೋಧವನ್ನು ಕಟ್ಟಲು ಒಂದು ಐಕ್ಯತಾ ಭಾವದಿಂದ ಅಲೆಯೋಪಾದಿಯಲ್ಲಿ ಮುಂದೊತ್ತಬೇಕು ಎಂದು ಸಿಐಟಿಯು ಕಾರ್ಮಿಕ ಆಂದೋಲನಕ್ಕೆ ಕರೆ ನೀಡಿದೆ.

V

ಭಾರತದಲ್ಲಿ ಕಾರ್ಮಿಕವರ್ಗ ಇನ್ನೊಂದು ಕಠಿಣ ಸವಾಲನ್ನು ಎದುರಿಸುತ್ತಿದೆ. ಅದೆಂದರೆ ಕೋಮುವಾದಿ ಶಕ್ತಿಗಳ ಹೆಚ್ಚುತ್ತಿರುವ ಧಾಳಿಗಳ ವಿರುದ್ಧ ಹೋರಾಟ, ಕೇಂದ್ರದಲ್ಲಿ ಬಂದ ಸರ್ಕಾರಗಳೆಲ್ಲಾ ಅನುಸರಿಸುತ್ತಿರುವ ಸಾಮ್ರಾಜ್ಯಶಾಹೀ ನೇತೃತ್ವದ ವಿನಾಶಕಾರೀ ಆರ್ಥಿಕ ನೀತಿಗಳ ವಿರುದ್ಧ ಕಾರ್ಮಿಕವರ್ಗ ತನ್ನ ಹೋರಾಟಗಳನ್ನು ತೀವ್ರಗೊಳಿಸಬೇಕಾಗಿರುವಾಗ ಕೋಮುವಾದಿ ಯುದ್ಧ

ಭಾವೋದ್ರೇಕವನ್ನು ವ್ಯವಸ್ಥಿತವಾಗಿ ಬೆಳೆಸುತ್ತಿರುವುದರ ವಿರುದ್ಧ ತೀವ್ರ ಹೋರಾಟ ನಡೆಸಬೇಕಾಗಿದೆ ಹಾಗೂ ಸಾಮ್ರಾಜ್ಯ ಮತ್ತು ರಾಷ್ಟ್ರೀಯ ಐಕ್ಯತೆಗೆ ಅತಿ ಗಂಭೀರ ಬೆದರಿಕೆಯೊಡ್ಡಿರುವ ಕೋಮುವಾದಿ ವಿಷವನ್ನು ಬುಡಸಹಿತ ಕಿತ್ತು ಹಾಕಬೇಕಾಗಿದೆ. ಕಾರ್ಮಿಕವರ್ಗ ಮೊದಲಿಗೆ ಗೋಧ್ರಾದ ಕೊಲೆಗಳಲ್ಲಿ, ನಂತರ ಇಡೀ ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಸಿದ ಹತ್ಯಾಕಾಂಡದಲ್ಲಿನ ಕೋಮುವಾದೀ ಭೀಕರತೆಯನ್ನು ಮರೆಯಲು ಸಾಧ್ಯವಿಲ್ಲ. ಬರ್ಬರ ನರೇಂದ್ರಮೋದಿ ಆಡಳಿತ ನಡೆಸಿದ ಈ ಹತ್ಯಾಕಾಂಡದಲ್ಲಿ ಬಲಪಂಥೀಯ ಹಿಂದುತ್ವ ಶಕ್ತಿಗಳ ಕ್ರಿಮಿನಲ್ ಧಾಳಿಗಳ ತಾರಕವನ್ನು ಮುಟ್ಟಿತು. ಆರು ವರ್ಷಗಳ ಕಾಲ ಕೇಂದ್ರದಲ್ಲಿ ಸರ್ಕಾರಕ್ಕೆ ನೇತೃತ್ವ ನೀಡಿದ ನಂತರ 'ಸಂಘ ಪರಿವಾರ' ಮತ್ತು ಅದರ ಮಿತ್ರರ ರಾಜಕೀಯ ಪಕ್ಷವನ್ನು ಕಳೆದ ವರ್ಷ ಸಾರ್ವತ್ರಿಕ ಚುನಾವಣೆಗಳಲ್ಲಿ ನಿರ್ಣಾಯಕವಾಗಿ ಸೋಲಿಸಲಾಯಿತು. ಆದರೂ ಈ ಹಿಂದುತ್ವ ಪಡೆಗಳಿಗೆ ತಮ್ಮ ಅಜೆಂಡಾವನ್ನು ಮತ್ತೆ ಎಬ್ಬಿಸಿ ಭಾರತೀಯ ಸಮಾಜ ಜಾತ್ಯಾತೀತ ಹಂದರವನ್ನು ಹಾಳಗೆಡುವ ಅಪಾರಶಕ್ತಿ ಇನ್ನೂ ಇದೆ ಎಂಬುದನ್ನು ಕಾರ್ಮಿಕವರ್ಗ ಮರೆಯಲು ಸಾಧ್ಯವಿಲ್ಲ. ಕಾರ್ಮಿಕವರ್ಗ ಸದಾ ಕೋಮುವಾದಿ ಶಕ್ತಿಗಳ ನೇರ, ಪರೋಕ್ಷ ಪ್ರಯತ್ನಗಳ ಬಗ್ಗೆ ಜಾಗರೂಕವಾಗಿರಬೇಕು; ಅದು ಸತತವಾಗಿ ಈ ಶಕ್ತಿಗಳನ್ನು ಜನರಿಂದ ಪ್ರತ್ಯೇಕಿಸಿ ಜನಗಳ ಐಕ್ಯತೆಯನ್ನು ಕಾಪಾಡಲು ಸತತವಾಗಿ ಹೋರಾಟ ನಡೆಸಬೇಕು.

ಧಾರ್ಮಿಕ ಅಲ್ಪಸಂಖ್ಯಾಂತ ಕೋಮುಗಳಿಗೆ ಸೇರಿದ ಕಾರ್ಮಿಕರ ಮೇಲೆ ದ್ವಿವಿಧ ಹಲ್ಲೆ ನಡೆದಿದೆ. ಅವರು ಸಂಘ ಪರಿವಾರದ ಧರ್ಮಾಂಧ ಬಹುಸಂಖ್ಯಾತವಾದೀ ಸಂಘಟನೆಗಳು ಅವರ ವಿರುದ್ಧ ಹರಿಯಬಿಡುವ ಕೋಮುವಾದಿ ಹಿಂಸಾಚಾರವನ್ನೂ ಎದುರಿಸುತ್ತಾರೆ; ಅವರನ್ನು ಸಾರ್ವತ್ರಿಕ ಪ್ರಜಾಪ್ರಭುತ್ವ ಆಂದೋಲನದಿಂದ ದೂರವಿಡಲು ಪ್ರಯತ್ನಿಸುವ ಅಲ್ಪಸಂಖ್ಯಾತ ಮೂಲಭೂತವಾದಿ ಗುಂಪುಗಳ ವಿಭಜನಕಾರೀ ಮನವಿಗಳಿಗೂ ಅವರು ಬಲಿಬೀಳುತ್ತಾರೆ. ಕಾರ್ಮಿಕವರ್ಗ ಅವರ ಹಿತಾಸಕ್ತಿಗಳನ್ನೂ ಪೂರ್ಣವಾಗಿ ರಕ್ಷಿಸಿ ಈ ವಿಭಾಗಗಳನ್ನೂ ಗೆದ್ದುಕೊಳ್ಳಬೇಕು ಹಾಗೂ ಹೋರಾಟಗಳ ಮುಖ್ಯಧಾರೆಗೆ ತರಬೇಕು.

ಕಾರ್ಮಿಕವರ್ಗದ ಮುಂದಿರುವ ಇನ್ನೊಂದು ಬೆದರಿಕೆಯೆಂದರೆ ಜಾತಿವಾದೀ ಮನವಿಗಳ ಮೂಲಕ ರಾಜಕೀಯ ಶಕ್ತಿ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿರುವ ಜಾತಿವಾದಿ ಶಕ್ತಿಗಳು ದುಡಿಯುವ ಜನಗಳನ್ನು ಜಾತಿ ಆಧಾರದಲ್ಲಿ ವಿಭಜಿಸಲು ಹೆಚ್ಚೆಚ್ಚಾಗಿ ನಡೆಸುತ್ತಿರುವ ಪ್ರಯತ್ನಗಳು. ಭಾರತೀಯ ಸಮಾಜದಲ್ಲಿ ವರ್ಗ ಶೋಷಣೆಯೊಂದಿಗೆ ಇನ್ನೂ ಇಳಿಯದ ಸಾಮಾಜಿಕ ದಮನವೂ ಮುಂದುವರೆಯುತ್ತಿದೆ. ಕಾರ್ಮಿಕವರ್ಗ ಈ ವಿಶಿಷ್ಟತೆಯನ್ನು ಗಮನಿಸಬೇಕು. ಜಾತಿ ವಿಭಜಿತ ಭಾರತೀಯ ಸಮಾಜದಲ್ಲಿ ಅತ್ಯಂತ ಬಡತನದಲ್ಲಿಯೂ ಅತ್ಯಂತ ಶೋಷಣೆಗೊಳಗಾದವರೆಂದರೆ ಗ್ರಾಮೀಣ ಬಡವರು. ಭೂ ಮಾಲಿಕರ ಪ್ರಾಬಲ್ಯ ಹಾಗೂ ಪಾಳೆಯ ಗಾರೀ ದಮನದ ವಿರುದ್ಧ ಅವರ ಹೋರಾಟ ಗಳಲ್ಲಿ ಕಾರ್ಮಿಕವರ್ಗವೂ ಭಾಗವಹಿಸ ಬೇಕು. ಜಾತಿ ದಮನವನ್ನೂ ಅಂತ್ಯ ಗೊಳಿಸಲು ಹಾಗೂ ಅಸ್ಪೃಶ್ಯತೆಯನ್ನು ನಿವಾರಿ ಸಲು ಅದು ಹೋರಾಟವನ್ನು ಅತ್ಯಂತ ಗಂಭೀರತೆಯಿಂದ ಎತ್ತಿಕೊಳ್ಳಬೇಕು.

ಭಾರತದಲ್ಲಿ ಮಹಿಳೆಯರು ಕೋಮುವಾದಿ ಮತ್ತು ಆರ್ಥಿಕ ಧಾಳಿಗಳೆರಡಕ್ಕೂ ಬಲಿಯಾಗಿದ್ದಾರೆ. ಮಹಿಳೆಯರ ಮೇಲೆ ಅತ್ಯಾಚಾರಗಳು ಬೇಧಭಾವಗಳು ಆತಂಕಕಾರಿಯಾಗಿ ಹೆಚ್ಚಿವೆ. ತ್ವರಿತವಾಗಿ ಹರಡುತ್ತಿರುವ ಕೊಳ್ಳುಬಾಕ ಸಂಸ್ಕೃತಿಯ ಭಾಗವಾಗಿ ಮಹಿಳೆಯರ ಲೈಂಗಿಕ ದುರುಪಯೋಗ ಹಾಗೂ ಹೊಲಸು ವ್ಯಾಪಾರೀಕರಣ ಅವರ ಸಂಕಟಗಳನ್ನು ಹೆಚ್ಚಿಸಿವೆ. ಮಹಿಳಾ ಕಾರ್ಮಿಕರು ಉದ್ಯೋಗ ಕಳೆದು ಕೊಳ್ಳುತ್ತಾರೆ, ಸಂಬಳ ಮತ್ತು ಸೇವಾ ಷರತ್ತುಗಳಲ್ಲಿ ಅಸಮಾನತೆಗೊಳಗಾಗಿದ್ದಾರೆ ಹಾಗೂ ಅತ್ಯಂತ ಅಭದ್ರ ವಾತಾವರಣಗಳಲ್ಲಿ ಕೆಲಸ ಮಾಡುತ್ತಾರೆ. ಕಾರ್ಮಿಕವರ್ಗ ಮಹಿಳಾ ಸಬಲೀಕರಣದ ಪ್ರಶ್ನೆಗಳನ್ನೆತ್ತಿಕೊಳ್ಳಬೇಕು ಹಾಗೂ ಅವರ ಮೇಲಿನ ಬಹುಮುಖೀ ದಮನ ಮತ್ತು ಅತ್ಯಾಚಾರಗಳ ವಿರುದ್ಧ ಹೋರಾಡಬೇಕು.

ಈ ಅಗಾಧ ಸವಾಲುಗಳನ್ನು ಕೈಗೆತ್ತಿಕೊಳ್ಳಲು ವರ್ಗ ಐಕ್ಯತೆಯನ್ನು ಕಟ್ಟುವುದು ದೇಶದಲ್ಲಿ ಕಾರ್ಮಿಕವರ್ಗದ ಆಂದೋಲನದ ಮುಂದಿರುವ ಒಂದು ಕಷ್ಟಸಾಧ್ಯವಾದ ಕೆಲಸ. ಕಾರ್ಮಿಕ ಆಂದೋಲನದೊಳಗಿನ ಸುಧಾರಣಾವಾದಿ ಪ್ರವೃತ್ತಿಗಳು ಕಾರ್ಮಿಕವರ್ಗದ ಹೋರಾಟಗಳನ್ನು ಆರ್ಥಿಕ ಬೇಡಿಕೆಗಳ ಪರಿಮಿತಿಯೊಳಗೇ ಇಡಲು ಸತತವಾಗಿ ಪ್ರಯತ್ನಿಸುತ್ತವೆ ಹಾಗೂ ನೀತಿಬಾಹಿರ ರಾಜಿಗಳನ್ನು ಪ್ರತಿಪಾದಿಸುತ್ತವೆ. 'ಮಾನವೀಯ ಮುಖ'ದ ಆರ್ಥಿಕ ಸುಧಾರಣೆಗಳು ಸಾಧ್ಯ, ಅದಕ್ಕಾಗಿ ಪ್ರಯತ್ನಿಸಬೇಕು ಎಂದೂ ಅವರು ಕಾರ್ಮಿಕ ವಿಭಾಗಗಳ ನಡುವೆ ಭ್ರಮೆಗಳನ್ನು ಸೃಷ್ಟಿಸುತ್ತಾರೆ. ಇಂದು ಎದುರಿಸುತ್ತಿರುವ ಬಹುಮುಖೀ ಧಾಳಿಗಳ ವಿರುದ್ಧ ಬಲಿಷ್ಠ ಹೋರಾಟಗಳನ್ನು ಹರಿಯಬಿಡಲು ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಸಾಧ್ಯವಾದಷ್ಟು ವಿಶಾಲವಾದ ಐಕ್ಯತೆಯನ್ನು ಬೆಸೆಯಲು ಯತ್ನಿಸುತ್ತಲೇ ಕಾರ್ಮಿಕವರ್ಗದ ಆಂದೋಲನ ಈ ಎಲ್ಲಾ ರೀತಿಯ ಚಂಚಲತೆ ಗಳು ಹಾಗೂ ವರ್ಗ ಶಾಮೀಲಿನ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ಕೂಡಾ ನಡೆಸಬೇಕು.

VI

ಈ ಮೇ ದಿನದಂದು ಸಿಐಟಿಯು ದೇಶದ ದುಡಿಯುವ ಜನತೆ ಎಲ್ಲಾ ಶ್ರಮಜೀವಿ ಜನಸಮೂಹಗಳ ಐಕ್ಯತೆಯನ್ನು ಇನ್ನಷ್ಟು ಬಲಗೊಳಿಸಬೇಕು, ಕ್ರೋಢೀಕರಿಸಬೇಕು ಮತ್ತು ಸಾಮ್ರಾಜ್ಯಶಾಹೀ ಧಾಳಿಗಳ ವಿರುದ್ಧ, ಆಳುವ ವರ್ಗಗಳ ಆಕ್ರಮಣಗಳ ವಿರುದ್ಧ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಹಾಗೂ ಕೋಮುವಾದ ಮತ್ತು ಜಾತಿವಾದದ ವಿಭಜನಕಾರಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಇನ್ನಷ್ಟು ಬಲಿಷ್ಟ ಹೋರಾಟಗಳನ್ನು ಹರಿಯಬಿಡಬೇಕು.

ಕಾರ್ಮಿಕ ವರ್ಗದ ಐಕ್ಯತೆ ಬೆಳೆಯಲು ಕೋಮುವಾದ ಅಳಿಯಬೇಕು

ಬಿ.ಮಾಧವ

ಕೋಮುವಾದಿ ಬಿಜೆಪಿ ರಾಜಕೀಯ ಅಧಿಕಾರವನ್ನು ಕಳಕೊಂಡಿದೆಯಾದರೂ ಅದು ಹರಿಬಿಟ್ಟಿರುವ ಕೋಮು ವಿಷ ಸಮಾಜದಲ್ಲಿ ಉಳಿದಿದೆ. ಈ ವಿಷವು ಕಾರ್ಮಿಕ ವರ್ಗವನ್ನು ಬಾಧಿಸದಂತೆ ಜಾಗರೂಕವಾಗಿರುವುದು ಇಡೀ ಕಾರ್ಮಿಕ ಚಳುವಳಿಯ ಕರ್ತವ್ಯವಾಗಿದೆ.



ಭಾರತದ ಕಾರ್ಮಿಕ ವರ್ಗದ ಉದ್ಯೋಗ ಮತ್ತು ಬದುಕಿಗೆ ಮಾರಕವಾದ ಜಾಗತೀಕರಣ ಮತ್ತು ಉದಾರೀಕರಣದ ನೀತಿಗಳ ವಿರುದ್ಧದ ಹೋರಾಟಗಳನ್ನು ವಿಭಜಿಸಿ ದುರ್ಬಲಗೊಳಿಸುವ ಕೆಲಸದಲ್ಲಿ ಕೋಮುವಾದಿಗಳು ನಿರತರಾಗಿದ್ದಾರೆ. ಭಾರತವನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿಗಳ ಮತ್ತು ವಿದೇಶೀ ಹಣಕಾಸು ಬಂಡವಾಳಶಾಹಿಗಳ ಹುನ್ನಾರಕ್ಕೂ ಭಾರತೀಯ ಕೋಮುವಾದಕ್ಕೂ ನಿಕಟ ಸಂಬಂಧವಿದೆ. ಮೇಲ್ನೋಟಕ್ಕೆ ಕಾಣುವ ಹಿಂದುತ್ವ ಮತ್ತು ಮುಸ್ಲಿಂ ಮೂಲಭೂತವಾದದ ಹಿಂದೆ ತೆರೆಯ ಮರೆಯಲ್ಲಿ ಸಾಮ್ರಾಜ್ಯಶಾಹಿ ಪ್ರೇರಿತವಾದ ಫ್ಯಾಸಿಸ್ಟ್ ಶಕ್ತಿಗಳು ಕಾರ್ಯಾಚರಿಸುತ್ತಿವೆ. ಧರ್ಮದ ಹೆಸರಲ್ಲಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯುವುದೇ ಇವುಗಳ ಗುರಿ.

ಭಾರತದಲ್ಲಿ ಹೊಸ ಆರ್ಥಿಕ ನೀತಿಯನ್ನು ಅಧಿಕೃತವಾಗಿ ಜಾರಿಗೊಳಿಸಲಾರಂಭಿಸಿದ್ದು 1991ರಲ್ಲಿ. ಆದರೆ ಅದರ ಸಿದ್ಧತೆ ಕೆಲವು ವರ್ಷಗಳ ಹಿಂದೆಯೇ ಆರಂಭವಾಗಿತ್ತು. ಭಾರತವನ್ನು 21ನೇ ಶತಮಾನಕ್ಕೆ ಕೊಂಡು ಹೋಗುವ ಘೋಷಣೆಯೊಂದಿಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬಾಗಿಲು ತೆರೆದಿಡುವ ಪ್ರಕ್ರಿಯೆ 1985ರಲ್ಲೇ ಆರಂಭವಾಗಿತ್ತು. ಭಾರತದ ವಿಮಾ ಕ್ಷೇತ್ರದಲ್ಲಿದ ಅಮೇರಿಕದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ ಎಂಬ ಕಾರಣಕ್ಕಾಗಿ ಭಾರತದ ಮೇಲೆ ಅಮೇರಿಕದ ವ್ಯಾಪಾರ ನಿಯಮದ ಸೂಪರ್ 301ರ ಪ್ರಕಾರ ಆರ್ಥಿಕ ದಿಗ್ಬಂಧನ ಹೇರುವ ಬೆದರಿಕೆಯನ್ನೂ ಒಡ್ಡಲಾಗಿತ್ತು. ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶದ ವಿರುದ್ಧವಾಗಿ ದೇಶಾದ್ಯಂತ ಕಾರ್ಮಿಕ ವರ್ಗದ ಪ್ರತಿಭಟನೆಗಳು ಆ ವೇಳೆಗೇ ಆರಂಭವಾಗಿದ್ದವು. ಸಾಮ್ರಾಜ್ಯಶಾಹಿಗಳ ದಾಳಿಗಳಿಗೆ ಭಾರತದ ಕಾರ್ಮಿಕ ವರ್ಗ ಪ್ರಬಲವಾದ ತಡೆಯೊಡ್ಡಬಹುದೆಂಬ ವಾತಾವರಣ ಎದ್ದು ಕಾಣುತ್ತಿರುವಾಗಲೇ ಭಾರತದ ಕೋಮುವಾದಿಗಳು ಕಾರ್ಯಪ್ರವೃತ್ತರಾದದ್ದು ಕಾಕತಾಳೀಯವಲ್ಲ. ಐನೂರು ವರ್ಷಗಳ ಹಿಂದಿನ ಬಾಬ್ರಿ ಮಸೀದಿ ವಿವಾದ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ನಾಲ್ಕು ದಶಕಗಳ ಕಾಲ ಒಂದು ಸಣ್ಣ ಪಟ್ಟಣದ ಕೆಲವೇ ವ್ಯಕ್ತಿಗಳ ನಡುವಿನ ಆಸ್ತಿ ಒಡೆತನಕ್ಕೆ ಸಂಬಂಧಿಸಿದ ವಿವಾದ ಒಮ್ಮಿಂದೊಮ್ಮೆಗೇ ರಾಷ್ಟ್ರೀಯ ಪ್ರಶ್ನೆಯ ರೂಪ ತಳೆದು 1989ರಲ್ಲಿ ಅಡ್ವಾಣಿಯವರ ರಥಯಾತ್ರೆಯ ರಾಜಕೀಯಕ್ಕೆ ಚಾಲನೆ ನೀಡಿತು. ಆನಂತರ ತೀವ್ರಗೊಂಡ ಕೋಮುವಾದಿ ಪ್ರಚಾರ, ಕೋಮು ಗಲಭೆಗಳು, 1992 ಡಿಸೆಂಬರ್ 6ರಂದು ಬಾಬ್ರಿ ಮಸೀದಿ ಧ್ವಂಸ, ಇವೆಲ್ಲವುಗಳಲ್ಲಿ ಕಾರ್ಮಿಕ ವರ್ಗದ ಐಕ್ಯತೆಗೆ ಬಲವಾದ ಹಾನಿಯಾಯಿತು.

ಕೋಮು ಭಾವನೆಗಳನ್ನು ಕೆರಳಿಸಿ ಅದರ ರಾಜಕೀಯ ಲಾಭ ಪಡೆದ ಬಿಜೆಪಿ 1998ರಲ್ಲಿ ಕೇಂದ್ರದಲ್ಲಿ ಅಧಿಕಾರ ಗ್ರಹಣ ಮಾಡುವುದರಲ್ಲಿ ಯಶಸ್ವಿಯಾಯಿತು. ಆ ನಂತರದ ದಿನಗಳು ಕಾರ್ಮಿಕ ವರ್ಗದ ಮಟ್ಟಿಗೆ ದುರ್ದಿನಗಳಾಗಿದ್ದವು. ಎಲ್ಲಾ ರಂಗಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶ, ದೇಶೀಯ ಕೈಗಾರಿಕೆಗಳ ಮುಚ್ಚುವಿಕೆ, ಉದ್ಯೋಗನಾಶ, ಕಾಮಿಕರ ಹಕ್ಕುಗಳ ಮೇಲೆ ಧಾಳಿ, ಇವೆಲ್ಲವನ್ನೂ ಎದುರಿಸಿ ಐಕ್ಯ ಹೋರಾಟ ನಡೆಸುತ್ತಿರುವ ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯಲು ಕೋಮುವಾದದ ಅಸ್ತ್ರವನ್ನು ಬಳಸಲಾಯಿತು. ಬಿಜೆಪಿ ನೇತೃತ್ವದ ಸರಕಾರವು, ಭಾರತವು ದೀರ್ಘಕಾಲದಿಂದ ಅನುಸರಿಸಿಕೊಂಡು ಬಂದ ಅಲಿಪ್ತ ನೀತಿಯನ್ನು ಕಡೆಗಣಿಸಿ ಅಮೇರಿಕದ ಕಿರಿಯ ಪಾಲುದಾರನಂತೆ ವರ್ತಿಸಿತು. ಪ್ಯಾಲೆಸ್ತೈನ್ ಜನತೆಯ ಮೇಲೆ ಕ್ರೂರ ಅಕ್ರಮಣ ಮಾಡುತ್ತಿರುವ ಇಸ್ರೇಲಿನ ಜತೆಗೆ ನಿಕಟ ಸಂಬಂಧ

ಬೆಳೆಸಿ, ಭಾರತ - ಅಮೇರಿಕಾ - ಇಸ್ರೇಲ್ ಕೂಟವನ್ನು ರಚಿಸಲು ಪ್ರಯತ್ನಿಸಿತು. ಅಧಿಕಾರಕ್ಕೇರುವ ಮೊದಲು ಜನರನ್ನು ಮರಳು ಮಾಡಲು ಸ್ವದೇಶಿ ಮಂತ್ರ ಜಪಿಸುತ್ತಿದ್ದ ಬಿಜೆಪಿ, ಅಮೇರಿಕದ ತಾಳಕ್ಕೆ ಸರಿಯಾಗಿ ಕುಣಿಯುತ್ತಾ ಭಾರತದ ಆರ್ಥಿಕತೆಯನ್ನು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳ ಅನಿರ್ಬಂಧಿತ ಸುಲಿಗೆಗೆ ತೆರೆದಿಟ್ಟಿತು. ವಿದ್ಯಾರ್ಥಿಗಳ ಪಠ್ಯ ಪುಸ್ತಕಗಳನ್ನು ಕೋಮುವಾದಿ ಪ್ರಚಾರಗಳಿಗೆ ಬಳಸಲಾಯಿತು. ಅವೈಜ್ಞಾನಿಕವಾದ ಜ್ಯೋತಿಷ್ಯ ಮತ್ತು ಪೌರೋಹಿತ್ಯಗಳನ್ನು ವಿಶ್ವ ವಿದ್ಯಾಲಯಗಳಲ್ಲಿ ಪಠ್ಯಗಳನ್ನಾಗಿ ಹೇರುವ ಪ್ರಯತ್ನ ನಡೆಯಿತು. ಸರಕಾರದ ಆಯಕಟ್ಟಿನ ಹುದ್ದೆಗಳಲ್ಲಿ ಕೋಮುವಾದಿಗಳನ್ನು ತುಂಬಲಾಯಿತು. ಒಂದು ಫ್ಯಾಸಿಸ್ಟ್ ಆಡಳಿತ ವ್ಯವಸ್ಥೆಗೆ ಅಗತ್ಯವಿರುವ ಎಲ್ಲಾ ಪರಿಕರಗಳನ್ನು ಈ ರೀತಿಯಲ್ಲಿ ಜೋಡಿಸಲಾಯಿತು.

ಭಾರತದ ಕಾರ್ಮಿಕ ವರ್ಗಕ್ಕೆ ಜಾತ್ಯಾತೀತತೆಯ ದೀರ್ಘ ಪರಂಪರೆ ಇದೆ. ಕಾರ್ಮಿಕ ವರ್ಗವು ವರ್ಗ ಪ್ರಜ್ಞೆಯನ್ನು ಬೆಳೆಸಿಕೊಂಡಿರುವ ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಂತಹ ರಾಜ್ಯಗಳಲ್ಲಿ ಧರ್ಮದ ಹೆಸರಿನಲ್ಲಿ ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯಲು ಕೋಮುವಾದಿಗಳಿಗೆ ಸಾಧ್ಯವಾಗಿಲ್ಲ. ಆದುದರಿಂದಲೇ ಆ ರಾಜ್ಯಗಳಲ್ಲಿ ಕೋಮುವಾದಿಗಳಿಗೆ ರಾಜಕೀಯ ನೆಲೆಯಿಲ್ಲ. ಆದರೆ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ದುರ್ಬಲವಾಗಿರುವ ಕರ್ನಾಟಕದಂತಹ ರಾಜ್ಯಗಳಲ್ಲಿ ಕಾರ್ಮಿಕರ ನಡುವೆ ಕೂಡಾ ಕೋಮು ವಿಷ ಹರಡುತ್ತಿರುವುದು ಅಲ್ಲಲ್ಲಿ ಕಂಡು ಬರುತ್ತಿದೆ.

ಭಾರತದ ಕೋಮುವಾದದ ಹಿಂದೆ ಫ್ಯಾಸಿಸ್ಟ್ ಶಕ್ತಿಗಳಿವೆ. ಫ್ಯಾಸಿಸಂ ಕಾರ್ಮಿಕ ವರ್ಗದ ಅತ್ಯುಗ್ರ ಶತ್ರು ಎಂಬುದನ್ನು ಜಗತ್ತಿನ ಚರಿತ್ರೆ ಪದೇ ಪದೇ ತೋರಿಸಿಕೊಟ್ಟಿದೆ. ಕೋಮುವಾದವು ಕಾರ್ಮಿಕರನ್ನು ವರ್ಗ ಹೋರಾಟದಿದ ವಿಮುಖಗೊಳಿಸುತ್ತದೆ. ಮತೀಯ ಪ್ರಚಾರಗಳ ತೆರೆಯ ಮರೆಯಲ್ಲಿ 'ತಮ್ಮವರು' ಎಂದು ಕರೆಯಲ್ಪಡುವ ಬಂಡವಾಳಶಾಹಿಗಳು ತಮ್ಮನ್ನು ಆರ್ಥಿಕವಾಗಿ, ಸಾಮಾಜಕವಾಗಿ ಮತ್ತು ರಾಜಕೀಯವಾಗಿ ಶೋಷಣೆ ಮಾಡುತ್ತಿರುವುದನ್ನು ಮುಗ್ಧ ಕಾರ್ಮಿಕರು ಗಮನಿಸಲು ವಿಫಲವಾದರೆ ಕಾರ್ಮಿಕ ವರ್ಗದ ಐಕ್ಯತೆಗೆ ಗಂಡಾಂತರವಿದೆ. ದೇಶವನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿಗಳ ಸಂಚುಗಳ ವಿರುದ್ಧ ಹೋರಾಟ ನಡೆಸಬಲ್ಲ ಪ್ರಜ್ಞಾವಂತ ಶಕ್ತಿ ಕಾರ್ಮಿಕ ವರ್ಗವಾಗಿದ್ದು, ಈ ಕರ್ತವ್ಯವನ್ನು ನಿರ್ವಹಿಸುವ ಚಾರಿತ್ರಿಕ ಜವಾಬ್ದಾರಿ ಅದರ ಮೇಲಿದೆ.

ಭಾರತದ ಕೋಮುವಾದದ ಹಿಂದೆ ಫ್ಯಾಸಿಸ್ಟ್ ಶಕ್ತಿಗಳಿವೆ. ಫ್ಯಾಸಿಸಂ ಕಾರ್ಮಿಕ ವರ್ಗದ ಅತ್ಯುಗ್ರ ಶತ್ರು ಎಂಬುದನ್ನು ಜಗತ್ತಿನ ಚರಿತ್ರೆ ಪದೇ ಪದೇ ತೋರಿಸಿಕೊಟ್ಟಿದೆ. ಕೋಮುವಾದವು ಕಾರ್ಮಿಕರನ್ನು ವರ್ಗ ಹೋರಾಟದಿದ ವಿಮುಖಗೊಳಿಸುತ್ತದೆ.

ದೇಶವನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿಗಳ ಸಂಚುಗಳ ವಿರುದ್ಧ ಹೋರಾಟ ನಡೆಸಬಲ್ಲ ಪ್ರಜ್ಞಾವಂತ ಶಕ್ತಿ ಕಾರ್ಮಿಕ ವರ್ಗವಾಗಿದ್ದು, ಈ ಕರ್ತವ್ಯವನ್ನು ನಿರ್ವಹಿಸುವ ಚಾರಿತ್ರಿಕ ಜವಾಬ್ದಾರಿ ಅದರ ಮೇಲಿದೆ.

ಮೇ ದಿನದ ಈ ಸಂದರ್ಭದಲ್ಲಿ ಕರ್ನಾಟಕದ ಕಾರ್ಮಿಕ ವರ್ಗವು ತನ್ನ ದೌರ್ಬಲ್ಯಗಳನ್ನು ಮೀರಿ ನಿಂತು ಐಕ್ಯತೆಯನ್ನು ಬಲಪಡಿಸಲು ಪಣ ತೊಡಬೇಕು. ಕೋಮು ಭಾವನೆಗಳು, ಜಾತೀಯತೆ ಮತ್ತು ಮೂಢನಂಬಿಕೆಗಳ ಜತೆಗೆ ಆರ್ಥಿಕವಾದಂತಹ ಪಿಡುಗುಗಳು ನಮ್ಮ ಚಳುವಳಿಯಲ್ಲಿ ಕಂಡು ಬರುತ್ತಿವೆ. ಆರ್ಥಿಕವಾದವು ಕಾರ್ಮಿಕ ವರ್ಗವನ್ನು ರಾಜಕೀಯ ಮತ್ತು ಕ್ರಾಂತಿಕಾರಿ ಕರ್ತವ್ಯಗಳಿಂದ ದೂರವಿಡುತ್ತದೆ. ಮುಂದಿನ ದಿನಗಳಲ್ಲಿ ಕಾರ್ಮಿಕ ವರ್ಗವು ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ ರಂಗಗಳಲ್ಲಿ ಹೋರಾಟಗಳನ್ನು ತೀವ್ರಗೊಳಿಸುವ ಮೂಲಕ ಕೋಮುವಾದದ ಅಪಾಯವನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾಗಿದೆ.

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿ ರಾಜಕೀಯ ಅಧಿಕಾರವನ್ನು ಕಳಕೊಂಡಿದೆಯಾದರೂ ಅದು ಹರಿಬಿಟ್ಟಿರುವ ಕೋಮು ವಿಷ ಸಮಾಜದಲ್ಲಿ ಉಳಿದಿದೆ. ಈ ವಿಷವು ಕಾರ್ಮಿಕ ವರ್ಗವನ್ನು ಬಾಧಿಸದಂತೆ ಜಾಗರೂಕವಾಗಿರುವುದು ಇಡೀ ಕಾರ್ಮಿಕ ಚಳುವಳಿಯ ಕರ್ತವ್ಯವಾಗಿದೆ.

ಕಾರ್ಮಿಕ ವರ್ಗದ ಪಕ್ಷದ ಮಹಾಸಮ್ಮೇಳನದ ಸಂದೇಶ

ದೇಶವನ್ನು ಪ್ರಗತಿ, ಸಮೃದ್ಧಿಯತ್ತ ಒಯ್ಯಲು
ಎಡ, ಪ್ರಜಾಪ್ರಭುತ್ವವಾದೀ ಪರ್ಯಾಯ

ದೇಶದ ಕಾರ್ಮಿಕ ವರ್ಗದ ಅತಿದೊಡ್ಡ ಪಕ್ಷವಾದ ಸಿಪಿಐ(ಎಂ)ನ 18ನೇ ಮಹಾಧಿವೇಶನ ಇತ್ತೀಚೆಗೆ ದೇಶದ ರಾಜಧಾನಿಯಲ್ಲಿ ಪೂರ್ಣಗೊಂಡಿತು. ಈ ಮಹಾಧಿವೇಶನದಲ್ಲಿ ಚರ್ಚಿಸಿ, ದೇಶವನ್ನು ಪ್ರಗತಿ, ಸಮೃದ್ಧಿಯತ್ತ ಒಯ್ಯಲು ನಡೆಸುವ ಪ್ರಯತ್ನಗಳಲ್ಲಿ ಈ ಪಕ್ಷದ ಪಾತ್ರವೇನಿರುತ್ತದೆ ಎಂಬ ಬಗ್ಗೆ ಈ ಮಹಾಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿರುವ

ಪ್ರಕಾಶ್ ಕಾರಟ್

ಇಲ್ಲಿ ವಿವರಿಸಿದ್ದಾರೆ.

ಮೊದಲ ಬಾರಿಗೆ ಭಾರತದ ರಾಜಧಾನಿಯಲ್ಲಿ ನಡೆದ ಸಿಪಿಐ(ಎಂ)ನ 18ನೇ ಮಹಾಧಿವೇಶನ ದೇಶದ ಮುಂದೆ ಒಂದು ಸಂಗತಿಯನ್ನು ಸಿದ್ಧ ಮಾಡಿದೆ ಅದೇನೆಂದರೆ ಪ್ರಸಕ್ತ ಬೂರ್ಜ್ವಾ-ಭೂಮಾಲಕ ನೀತಿಗಳಿಗೆ ಎಡೆಬಿಡದೆ ಒಂದು ಪರ್ಯಾಯವನ್ನು ನೀಡಬಲ್ಲ ಒಂದು ಪಕ್ಷ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ ಹೋರಾಟವನ್ನು ಮುಂದೊಯ್ಯುವಲ್ಲಿ ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಪ್ರಗತಿಪರ ಶಕ್ತಿಗಳನ್ನು ಅಣಿನೆರೆಸಬಲ್ಲ ಏಕೈಕ ಪಕ್ಷ ಇದು ಎನ್ನುವ ಸಂಗತಿ. ಸಿಪಿಐ(ಎಂ) ಮಹಾಧಿವೇಶನದ ಬಹಳ ಮುಂದೆಯೇ ಕಣ್ಣು ತೆರೆಸಿದೆ. ಹೇಗೆ ಸಿಪಿಐ(ಎಂ) ಕೆಲಸ ಮಾಡುತ್ತದೆ, ಪಕ್ಷದೊಳಗಿನ ಪ್ರಜಾಪ್ರಭುತ್ವ ಹೇಗೆ ಕೆಲಸ ಮಾಡುತ್ತದೆ, ನಾಯಕತ್ವವನ್ನು ಹೇಗೆ ಸಾಮೂಹಿಕವಾಗಿ ಚಲಾಯಿಸಲಾಗುತ್ತದೆ ಮತ್ತು ಹೇಗೆ ಸಿಪಿಐ(ಎಂ) ದೇಶದ ಬೂರ್ಜ್ವಾ ಪಕ್ಷಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದು ಈಗ ಅವರ ಅರಿವಿಗೆ ಬಂದಿದೆ.

18ನೇ ಮಹಾಧಿವೇಶನ ನಡೆದದ್ದು ಮೇ 2004ರಲ್ಲಿ. 14ನೇ ಲೋಕಸಭಾ ಚುನಾವಣೆಗಳಲ್ಲಿ ಕೇಂದ್ರದಲ್ಲಿದ್ದ ಬಿಜೆಪಿ ನೇತೃತ್ವದ ಸರಕಾರವನ್ನು ಇಳಿಸುವಲ್ಲಿ ಯಶಸ್ಸು ಸಾಧಿಸಿದ ಹಿನ್ನೆಲೆಯಲ್ಲಿ. 17ನೇ ಮಹಾಧಿವೇಶನದಲ್ಲಿ ಅಂಗೀಕರಸಿದ ಕಾರ್ಯತಂತ್ರವನ್ನು ಅನುಸರಿಸಿದ ಸಿಪಿಐ(ಎಂ) ಆ ಆಧಾರದಲ್ಲಿ ಈ ಚುನಾವಣೆಗಳಲ್ಲಿ ಮೂರು ನಿರ್ದಿಷ್ಟ ಘೋಷಣೆಗಳನ್ನು ಕೊಟ್ಟಿತು. ಬಿಜೆಪಿ ನೇತೃತ್ವದ ಕೂಟವನ್ನು ಸೋಲಿಸಬೇಕು, ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರಕಾರ ರಚನೆಗೊಳ್ಳಬೇಕು ಹಾಗೂ ಸಂಸತ್ತಿನಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಬಲಹೆಚ್ಚಿಸಬೇಕು ಎಂದು ಪಕ್ಷ ಕರೆ ನೀಡಿತು. ಈ ಮೂರು ಗುರಿಸಾಧನೆಯಲ್ಲಿ ಯಶಸ್ಸು, ಕೇಂದ್ರದಲ್ಲಿ ಹೊಸ ಸರಕಾರದ ರಚನೆಯಲ್ಲಿ ವಿಶ್ವಾಸ ಗಳಿಸಿದ ಸರಿಯಾದ ನಿಲುವು ಹಾಗೂ ಯುಪಿಎ ಸರಕಾರವನ್ನು ಸೇರದೆ ಹೊರಗಿನಿಂದ ಬೆಂಬಲ ನೀಡಿದ್ದಕ್ಕೆ ಪಕ್ಷದ ಎಲ್ಲಾ ಹಂತಗಳಲ್ಲಿ ವ್ಯಾಪಕ ಒಪ್ಪಿಗೆ ಕಂಡುಬಂತು. ಇದು ರಾಜ್ಯ ಸಮ್ಮೇಳನಗಳ ಚರ್ಚೆಗಳಲ್ಲಿ ಹಾಗೂ ಕರಡು ರಾಜಕೀಯ ನಿರ್ಣಯದ ಮೇಲೆ ಮಹಾಧಿವೇಶನ ಪೂರ್ವದ ಚರ್ಚೆಗಳಲ್ಲಿ ಬಿಂಬಿಸಲಾಯಿತು.



ಈ ಯಶಸ್ಸನ್ನು ಆಧರಿಸಿ ಮುನ್ನಡೆಯುವುದು ಹೇಗೆ ಎಂಬುದರ ಮೇಲೆ ಇಡೀ ಪಕ್ಷ ಗಮನ ಕೇಂದ್ರೀಕರಿಸಿತು. ಪಕ್ಷದ ಎಡ ಮತ್ತು ಪ್ರಜಾಪ್ರಭುತ್ವವಾದೀ ಪರ್ಯಾಯದ ಮುನ್ನಡೆಗೆ ಸೂಕ್ತವಾದ ರಾಜಕೀಯ ಕಾರ್ಯತಂತ್ರವನ್ನು ರೂಪಿಸಬೇಕು ಎಂದು ಪಕ್ಷದ ಮಹಾಧಿವೇಶನದಿಂದ ನಿರೀಕ್ಷಿಸಲಾಗಿತ್ತು. ಈಗಿನ ಅನುಕೂಲಕರ ಸನ್ನಿವೇಶವನ್ನು ಬಳಸಿ ಪಕ್ಷ ಸತತ ವಿಸ್ತರಣೆ ಸಾಧಿಸಿ ಒಂದು ಬಲಿಷ್ಟ ಅಖಿಲ ಭಾರತ ಶಕ್ತಿಯಾಗಲು ನೆರವಾಗಬಹುದಾದ ಸಂಘಟನಾ ಕ್ರಮಗಳನ್ನು ಈ ಮಹಾಧಿವೇಶನ ಮುಂಡಿಡಬೇಕಾಗಿತ್ತು.

ಸಾಮ್ರಾಜ್ಯಶಾಹಿ ಧಾಳಿಗಳ ಸನ್ನಿವೇಶದಲ್ಲಿ

ಪಕ್ಷದ ಮಹಾಧಿವೇಶನ ಕೊಟ್ಟಿರುವ ಕರ್ತವ್ಯಗಳನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ತನ್ನ ಧಾಳಿಗಳನ್ನು ಮುಂದುವರೆಸುತ್ತಿರುವ ಒಂದು ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಸಾಧಿಸಬೇಕಾಗಿದೆ. ನವೆಂಬರ್ 2004 ರಲ್ಲಿ ಅಧ್ಯಕ್ಷರಾಗಿ ಬುಶ್‌ರವರ ಪುನರಾಯ್ಕೆ ಅಮೇರಿಕಾದ ಆಕ್ರಮಣಕಾರೀ ನಿಲುವಿನಲ್ಲಿ ಏನೂ ಬದಲಾವಣೆಯಿಲ್ಲ ಎಂಬುದನ್ನು ದೃಢಪಡಿಸಿತು.

ಇದು ಸ್ವತಂತ್ರ ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸಲೂ ಹೇಸದ ಸಾಮ್ರಾಜ್ಯಶಾಹಿ ಸಂಪೂರ್ಣ

ಅಧಿಪತ್ಯದ ಹುಡುಕಾಟದಲ್ಲಿ ಅದು ಬೇರೆ ದೇಶಗಳು ತಾನು ಹೇಳಿದಂತೆ ಕೇಳುವಂತೆ ಮಾಡಲು ಮಿಲಿಟರಿ ಬಲಪ್ರಯೋಗವನ್ನು ಮಾಡಲೂ ಸಿದ್ಧವಿದೆ. ಇರಾಕ್ ಇದಕ್ಕೆ ಪ್ರಧಾನ ಉದಾಹರಣೆ. ಈ ಪ್ರದೇಶದಲ್ಲಿ ಪ್ರಾಬಲ್ಯ ಮೆರೆಸುವ ಅಮೇರಿಕನ್ ಯೋಜನೆಗಳಲ್ಲಿ ಕೈಮಿಲಾಯಿಸಲು ಇರಾಕ್ ಸಿದ್ಧವಿರಲಿಲ್ಲ. ಇರಾಕನ್ನು ವಶಪಡಿಸಿಕೊಂಡಿದ್ದು ಪಶ್ಚಿಮ ಏಷ್ಯಾದ ತೈಲ ಸಂಪನ್ಮೂಲವನ್ನು ಹತೋಟಿಯಲ್ಲಿಡಲು ಇಡೀ ಪಶ್ಚಿಮ ಏಷ್ಯಾವನ್ನು ಪುನರ್‌ವ್ಯವಸ್ಥೆಗೊಳಿಸುವ ಯೋಜನೆಯ ಒಂದು ಭಾಗ. ಈ ಮರುವಸಾಹತೀಕರಣದ ಅದರ ಯೋಜನೆಗೆ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಮರುಸ್ಥಾಪನೆಯ ಮುಖವಾಡ ತೊಡಿಸಲಾಗಿತ್ತು.

ಯಾವುದೇ ದೇಶ ಅಮೇರಿಕಾದ ಬಲವನ್ನು ಸರಿಗಟ್ಟಲು ಅಥವಾ ಮೀರಲು ಬಿಡುವುದಿಲ್ಲ ಎಂಬುದು ಬುಶ್‌ರವರ ಅಡಿಯಲ್ಲಿ ಅಮೇರಿಕಾ ಮುಂದಿಟ್ಟುಕೊಂಡ ಸಾಮರಿಕ ತತ್ವ. ಹೀಗಾಗದಂತೆ ತಡೆಯಲು ಅಗತ್ಯವಾದರೆ ಅಮೇರಿಕಾ ಮಿಲಿಟರಿ ಅತಿಕ್ರಮಣ ನಡೆಸಬಹುದಂತೆ. ಅಮೇರಿಕಾ ತನ್ನ ಭದ್ರತೆಗೆ ಬೆದರಿಕೆಯಾಗಬಹುದು ಎಂದು ಅದು ಕಾಣುವ ಅಥವಾ ನಿರ್ಧರಿಸುವ ದೇಶದ ಮೇಲೆ ಧಾಳಿಯನ್ನು ನಡೆಸಬಹುದಂತೆ ನಿಜವಾದ ಬೆದರಿಕೆಯೇನೂ ಬೇಕಿಲ್ಲ. ‘ಭಯೋತ್ಪಾದನೆಯ ಮೇಲೆ ಸಮರ ಎಂಬುದು ಅದೇ ರೂಪಿಸಿದ ಅದಕ್ಕೆ ಅನುಕೂಲಕರವಾದ ಒಂದು ನೆವ. ಅಮೇರಿಕಾದ ಇಚ್ಛೆಯನ್ನು ಉಲ್ಲಂಘಿಸುವ ಯಾವುದೇ ದೇಶದ ವಿರುದ್ಧ ಅದನ್ನು ಬಳಸಬಹುದು.

ಈ ಆಕ್ರಮಣಕಾರಿ ಮತ್ತು ಕಾನೂನುಬಾಹಿರ ನಿಲುವೇ ಅದು ಕೊರಿಯಾ ಜನಪ್ರಜಾಸತ್ತಾತ್ಮಕ ಜನತಾ ಗಣರಾಜ್ಯ, ಇರಾನ್ ಮತ್ತು ಸಿರಿಯಾಕ್ಕೆ ಬೆದರಿಕೆ ಹಾಕುವಂತೆ ಹಾಗೂ ಪರೋಕ್ಷವಾಗಿ ವೆನೆಜುವೆಲಾ ಸರಕಾರದ ವಿರುದ್ಧ ಕೆಲಸ ಮಾಡುವಂತೆ ಮಾಡುತ್ತದೆ. ಕ್ಯೂಬಾ ತಾನು ಬಯಸುವ ಸಾಮಾಜಿಕ ವ್ಯವಸ್ಥೆಯನ್ನು ನಿರ್ಧರಿಸುವ ತನ್ನ ಹಕ್ಕನ್ನು ಬಿಟ್ಟುಕೊಡಲು ಸಿದ್ಧವಾಗಿಲ್ಲವಾದ್ದರಿಂದ ಅದರ ವಿರುದ್ಧ ನಿರ್ಬಂಧ, ವೈರತ್ವಪೂರ್ಣ ಕ್ರಮಗಳನ್ನು ಹೆಚ್ಚಿಸಲಾಗುತ್ತದೆ.

ಸಾಮ್ರಾಜ್ಯಶಾಹಿಯೊಡನೆ ವೈರುಧ್ಯ ತೀವ್ರಗೊಂಡಿದೆ

18ನೇ ಮಹಾಧಿವೇಶನದ ರಾಜಕೀಯ ನಿರ್ಣಯ ಇತ್ತೀಚಿನ ಅವಧಿಯಲ್ಲಿ ಸಾಮ್ರಾಜ್ಯಶಾಹಿ ಮತ್ತು ಅಭಿವೃದ್ಧಿಶೀಲ ದೇಶಗಳ ನಡುವೆ ವೈರುಧ್ಯ ತೀವ್ರಗೊಂಡಿದೆ ಎಂದು ಹೇಳಿದೆ. ಸಾಮ್ರಾಜ್ಯಶಾಹೀ ದಾಳಿಗಳ ವಿರುದ್ಧ ವಿವಿಧ ರಂಗಗಳಲ್ಲಿ ಪ್ರತಿರೋಧ ಬೆಳೆದಿದೆ. ಸಾಮ್ರಾಜ್ಯಶಾಹಿಗೆ



ಈ ವಿಶ್ವವ್ಯಾಪಿ ಪ್ರತಿರೋಧದ ಕೇಂದ್ರದಲ್ಲಿರುವುದು ಇರಾಕೀ ಜನತೆಯ ಧೀರ ಪ್ರತಿರೋಧ ಪ್ಯಾಲೆಸ್ಟೇನ್ ಆಂದೋಲನ ಅಮೇರಿಕಾ ಬೆಂಬಲಿತ ಇಸ್ರೇಲಿ ಅತಿಕ್ರಮಣದ ವಿರುದ್ಧ ಭಾರೀ ಅಪಾಯಗಳ ನಡುವೆಯೇ ಹೋರಾಡುತ್ತಿದೆ. ವೆನೆಜುವೆಲಾದ ಜನಗಳು, ಪ್ರಜಾಪ್ರಭುತ್ವವಾದೀ ಶಕ್ತಿಗಳು ಅಧ್ಯಕ್ಷ ಹ್ಯೂಗೋ ಚವೇಜ್‌ರ ಸರಕಾರವನ್ನು ಅಸ್ಥಿರಗೊಳಿಸುವ ಅಮೇರಿಕಾ ಪ್ರಾಯೋಗದ ಪ್ರಯತ್ನಗಳನ್ನು ಮತ್ತೆ ಮತ್ತೆ ವಿಫಲಗೊಳಿಸಿದ್ದಾರೆ.

• ಈ ಪ್ರತಿರೋಧ ಬೆಳೆಯುತ್ತಿರುವಾಗಲೇ ತೊಂದರೆಗಳೂ ಇವೆ. ಸಾಮ್ರಾಜ್ಯಶಾಹಿಗಳ ನಡುವಿನ ವೈರುದ್ಯಗಳ ಬಗೆಗಿನ ಪರಿಸ್ಥಿತಿ ಇದರಲ್ಲೊಂದು. ವೈರುಧ್ಯಗಳಿದ್ದರೂ ಮತ್ತು ಇರಾಕ್ ಯುದ್ಧಕ್ಕೆ ಫ್ರಾನ್ಸ್ ಮತ್ತು ಜರ್ಮನಿಯ ವಿರೋಧದಲ್ಲಿ ಕಂಡಂತೆ ಲೆಕ್ಕಾಚಾರಗಳು ನಡೆದರೂ, ಅದರ ಜತೆ-ಜತೆಗೆ, ಸಾಮ್ರಾಜ್ಯಶಾಹೀ ದೇಶಗಳ ನಡುವೆ ಸಹಕಾರವೂ ಇದೆ. ಮೂರನೇ ಜಗತ್ತಿನ ದೇಶಗಳ ಶೋಷಣೆಯನ್ನು ತೀವ್ರಗೊಳಿಸುವಲ್ಲಿ ಅವರು ಒಂದಾಗಿದ್ದಾರೆ. ಅಮೇರಿಕಾಕ್ಕೆ ಈ ಬಣದ ಮುಖಂಡನಾಗಿ ಮಧ್ಯಸ್ಥಿಕೆದಾರನಾಗಿ ಕೆಲಸ ಮಾಡಲು ಸಾಧ್ಯವಾಗಿದೆ. ಎರಡನೇ ತೊಂದರೆಯೆಂದರೆ ಅದಕ್ಕಿಂತ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ಆಳುವ ವರ್ಗಗಳು ಒಟ್ಟಾರೆಯಾಗಿ ಸಾಮ್ರಾಜ್ಯಶಾಹಿ ಹಣಕಾಸು ಬಂಡವಾಳದೊಡನೆ ಶಾಮೀಲಾಗಿದ್ದಾರೆ. ತಮ್ಮ ಸಾರ್ವಭೌಮತೆಯನ್ನು ಸ್ವಾಯತ್ತತೆಯನ್ನು ರಕ್ಷಿಸಿಕೊಳ್ಳಲು ಅಸಮರ್ಥರಾಗಿದ್ದಾರೆ. ಅಥವಾ ಅದಕ್ಕೆ ಅವರು ಸಿದ್ಧರಿಲ್ಲ.

ಈ ಸಮಸ್ಯೆಗಳನ್ನು ಗಮನದಲ್ಲಿಟ್ಟಿ ಕೊಂಡು ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಮತ್ತು ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಗಾಗಿ ಹೋರಾಟಗಳನ್ನು ನಡೆಸಬೇಕು, ಸಾಮ್ರಾಜ್ಯಶಾಹೀ ಬಣದೊಳಗಿನ ಯಾವುದೇ ಬಿರುಕುಗಳನ್ನು ಬಳಸಿಕೊಳ್ಳಬೇಕು ಹಾಗೂ ಜಿ-20 ಮುಂತಾದ ಅಭಿವೃದ್ಧಿಶೀಲ ದೇಶಗಳ ಬೂರ್ಜ್ವಾ ಸರಕಾರಗಳ ಯಾವುದೇ ಮಟ್ಟದ ಪ್ರತಿರೋಧವನ್ನು ಬೆಂಬಲಿಸುತ್ತಲೇ ಮುಖ್ಯವಾಗಿ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಮುಖ್ಯ ಒತ್ತು ಸಾಮ್ರಾಜ್ಯಶಾಹೀ ಜಾಗತೀಕರಣದ ವಿರುದ್ಧ ಹಾಗೂ ಸಾಮ್ರಾಜ್ಯಶಾಹೀಯುದ್ಧ, ಆಕ್ರಮಣ ಮತ್ತು ಬೆದರಿಕೆಗಳ ವಿರುದ್ಧ ಪ್ರತಿರೋಧವನ್ನು ಬೆಳೆಸುವುದರ ಮೇಲೆಯೇ ಹೆಚ್ಚಾಗಿ ಅವಲಂಬಿಸಬೇಕು. ಈ ಪ್ರತಿರೋಧ, ಹೆಚ್ಚುತ್ತಿರುವುದು, ವಿಶೇಷವಾಗಿ ಲ್ಯಾಟಿನ್ ಅಮೇರಿಕಾದಲ್ಲಿ, ಈ ಅವಧಿಯ ಹುರುಪು ತುಂಬುವ ಸಂಗತಿ

ಭಾರತದ ಮೇಲೆ ಕಣ್ಣು

ಭಾರತದಲ್ಲಿನ ವಿಶಾಲ ಮಾರುಕಟ್ಟೆ ಹಾಗೂ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಕೊಳ್ಳೆಗೆ ಅಪಾರ ಅವಕಾಶಗಳಿಂದಾಗಿ ಅದು ಸಾಮ್ರಾಜ್ಯ ಶಾಹಿಗಳ ಗಮನಕ್ಕೆ ಗುರಿಯಾಗಿದೆ. ಅತ್ತ ಚೀನಾದ ಹೆಚ್ಚುತ್ತಿರುವ ಶಕ್ತಿಗೆ ಪ್ರತಿ -

ಶಕ್ತಿಯಾಗಿಯೂ ಅಮೇರಿಕಾ ಭಾರತವನ್ನು ಸಾಮರಿಕ ದೃಷ್ಟಿಯಿಂದ ನೋಡುತ್ತಿದೆ. ಭಾರತವನ್ನು ಒಂದು ಸಾಮರಿಕ ಜತೆಗಾರನಾಗಿ ಮಾಡಲು ಭಾರತದ ಆಳುವ ವರ್ಗಗಳನ್ನು ಓಲೈಸಲು 1990ರ ದಶಕದಿಂದ ಅದು ಪ್ರಯತ್ನಿಸುತ್ತಿದೆ. ನರಸಿಂಹರಾವ್ ಸರಕಾರದ ಅವಧಿಯಲ್ಲಿ ಆರಂಭವಾದ ಇದನ್ನು ವಾಜಪೇಯಿ ಆಡಳಿತದ ಅವಧಿಯಲ್ಲಿ ಮುಂದೊಯ್ಯಲಾಯಿತು. ಭಾರತವನ್ನು ತನ್ನ ವಿಶ್ವ ಸಾಮರಿಕ ಯೋಜನೆಯ ಭಾಗವಾಗಿಸುವಲ್ಲಿ ಅಮೇರಿಕಾ ಯಶಸ್ವಿಯಾಯಿತು. ಭಾರತವನ್ನು ಒಂದು ಸ್ವತಂತ್ರ ಶಕ್ತಿಯಾಗಿ ಮಾಡುವ ಹೋರಾಟವೇ ಅಮೇರಿಕಾದ ಏಕಧ್ರುವೀಯ ಪ್ರಾಬಲ್ಯದ ಒಲವುಗಳನ್ನು ತಡೆದು ನಿಲ್ಲಿಸುವುದಕ್ಕೆ ನೆರವಾಗಬಲ್ಲರು. ಇದು ಪಕ್ಷದ ಮಹಾಧಿವೇಶನ ನಮ್ಮ ಮುಂದಿಟ್ಟಿರುವ ಕರ್ತವ್ಯ.

ಈ ಕರ್ತವ್ಯ ನೆರವೇರಿಸುವಾಗ ಅಮೇರಿಕಾ ನಮ್ಮ ನೆರೆಹೊರೆಯಲ್ಲಿ, ತಕ್ಷಣ ಏಷ್ಯಾದಲ್ಲಿ ಒಳನುಗ್ಗಿದೆ ಎಂಬುದನ್ನು ಗಮನಿಸಬೇಕು ಎಂದು ರಾಜಕೀಯ ನಿರ್ಣಯ ಹೇಳಿದೆ. ಪಾಕಿಸ್ತಾನದ ಮುಶರ್ರಫ್ ಆಡಳಿತವನ್ನು ಭಯೋತ್ಪಾದನೆಯ ವಿರುದ್ಧ ಸಮರದಲ್ಲಿ ಮಿತ್ರನಾಗಬೇಕೆಂದು ಹೇಳಲಾಯಿತು. ಬಾಂಗ್ಲಾದೇಶ ಮತ್ತು ಶ್ರೀಲಂಕಾದೊಡನೆ ಅಮೇರಿಕಾ ಮಿಲಿಟರಿ ಸಹಕಾರದ ಒಪ್ಪಂದಗಳಿಗೆ ಸಹಿ ಹಾಕಿದೆ. ನೇಪಾಳದ ದೊರೆಗೆ ಮಾವೋವಾದಿ ಬಂಡಕೋರತನವನ್ನು ಎದುರಿಸುವ ಹೆಸರಿನಲ್ಲಿ ಅಮೇರಿಕಾ ನೆರವು ನೀಡುತ್ತಿದೆ. ಆದ್ದರಿಂದ ಭಾರತ ಮತ್ತು ದಕ್ಷಿಣ ಏಷ್ಯಾದ ದೇಶಗಳೂ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳ ನಡುವೆ ಸಹಕಾರವನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಈ ಹಿಂದೆ ಇದು ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ.

ಭಾರತದಲ್ಲಿ ಒಂದು ಬಲಿಷ್ಟ ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನವನ್ನು ಕಟ್ಟುವುದು ಹಾಗೂ ಭಾರತದ ವಿದೇಶಾಂಗ ನೀತಿಯನ್ನು ಹೆಚ್ಚು ಸ್ವತಂತ್ರ ನೀತಿಯತ್ತ ಒಯ್ಯುವಂತೆ ಮಾಡುವುದು ಇದು ಪಕ್ಷದ ಮಹಾಧಿವೇಶನದಲ್ಲಿ ಸಿಪಿಐ(ಎಂ) ವಹಿಸಿಕೊಂಡಿರುವ ಜವಾಬ್ದಾರಿ. ಇದರ ಯಶಸ್ಸು ವಿಶ್ವವ್ಯಾಪೀ ಹೋರಾಟಕ್ಕೊಂದು ದೊಡ್ಡ ಕೊಡುಗೆಯಾಗುತ್ತದೆ.

ಸದ್ಯದ ಸನ್ನಿವೇಶದ ಮುಖ್ಯ ಲಕ್ಷಣಗಳು

ಮಹಾಧಿವೇಶನ ರೂಪಿಕರಿಸಿದ ರಾಜಕೀಯ ನಿರ್ಣಯವನ್ನು ಪರಿಶೀಲಿಸೋಣ. ರಾಜಕೀಯ ನಿರ್ಣಯ



ಈಗಿನ ಸನ್ನಿವೇಶದ ಏಳು ಪ್ರಭಾವ ಲಕ್ಷಣಗಳನ್ನು ಗಮನಿಸಬೇಕು. ಅವುಗಳನ್ನು ಈ ರೀತಿ ಸಾರಾಂಶ ರೂಪದಲ್ಲಿ ಹೇಳಬಹುದು.

1. ಬಿಜೆಪಿ ಲೋಕಸಭಾ ಚುನಾವಣೆಗಳಲ್ಲಿ ಸೋತಿದ್ದರೂ, ಇದು ಎಡ, ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳಿಗೊಂದು ಗಮನಾರ್ಹ ವಿಜಯವಾಗಿದ್ದರೂ ಬಿಜೆಪಿ ಆರ್‌ಎಸ್‌ಎಸ್ ಕೂಟದ ಶಕ್ತಿಯನ್ನು ಕಡೆಗಣಿಸಲಾಗದು. ಸದ್ಯ ಅವರಲ್ಲಿ ಈ ಪರಾಭವದ ಹೊಣೆಗಾರಿಕೆಯ ಬಗ್ಗೆ ಕಿತ್ತಾಟ, ಗೊಂದಲ ಇದ್ದರೂ ಅಂತಿಮವಾಗಿ ಅವರು ಮತ್ತೆ ಒಟ್ಟುಗೂಡಿ ಹಿಂದುತ್ವ ಅಜೆಂಡಾವನ್ನು ಬಳಸಿ ಮತ್ತೆ ಬರಲು ಪ್ರಯತ್ನಿಸುತ್ತಾರೆ. ಬಿಜೆಪಿಯ ಆರು ವರ್ಷಗಳ ಆಳ್ವಿಕೆಯಲ್ಲಿ ಕೋಮುವಾದಿ ವ್ಯಕ್ತಿಗಳು ಪ್ರಭುತ್ವದ ಸಂಸ್ಥೆಗಳಲ್ಲಿ, ಸಮಾಜದಲ್ಲಿ ತಳವೂರಿವೆ. ಇದನ್ನು ಉಪೇಕ್ಷಿಸಲಾಗದು.

2. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಬೂರ್ಜ್ವಾ ಭೂಮಾಲಕ ಕೂಟ ಅಧಿಕಾರದಲ್ಲಿದೆ. ಅದು ಜಾತ್ಯಾತೀತ ಸ್ವರೂಪ ಹೊಂದಿದ್ದರೂ ಕಾಂಗ್ರೆಸ್ ಕೋಮುವಾದಿ ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ ಒಂದು ನಿರಂತರ ಹೋರಾಟವನ್ನು ನಡೆಸುತ್ತದೆ. ಎಂದು ನಂಬಲು ಸಾಧ್ಯವಿಲ್ಲ. ಅದು ಬಿಜೆಪಿ ನೇತೃತ್ವದ ಸರಕಾರದ ಆರ್ಥಿಕ ನೀತಿಗಳಿಂದ ಜನಗಳಲ್ಲಿ ಉಂಟಾದ ಅಸಂತೃಪ್ತಿಯ ಪ್ರಯೋಜನ ಪಡೆಯಿತು. ಆದರೆ ಆ ನೀತಿಗಳಲ್ಲಿ ಪ್ರಮುಖ ಬದಲಾವಣೆಗಳನ್ನು ತರುವ ಯೋಜನೆ ಅದಕ್ಕಿಲ್ಲ.

3. ಕಾಂಗ್ರೆಸ್ ವರ್ಗಸ್ವರೂಪ ಮತ್ತು ಉದಾರೀಕರಣವನ್ನು ಅನುಸರಿಸುವ ಯುಪಿಎ ಸರಕಾರದ ಕೆಲಸಗಳು ಜನತೆಯ ಬದುಕು ಮತ್ತು ಬದುಕಿನ ಪರಿಸ್ಥಿತಿಗಳ ಮೇಲೆ ಪರಿಣಾಮ ಬೀರುವುದು ಖಂಡಿತ. ವಾಸ್ತವದಲ್ಲಿ ಯಾವುದೇ ಬದಲಾವಣೆ ಈ ಜನಗಳ ಅನುಭವಕ್ಕೆ ಬಂದಿಲ್ಲ. ಕಾರ್ಷಿಕ ಸಂಕಟ ಮುಂದುವರಿಯುತ್ತಿದೆ, ಸಣ್ಣ ಮತ್ತು ಪಾರಂಪರಿಕ ಉದ್ದಿಮೆಗಳ ಬಿಕ್ಕಟ್ಟು ಹದಗೆಡುತ್ತಿದೆ. ಮತ್ತೆ ಮತ್ತೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಯಿಂದಾಗಿ ಜನಗಳ ಮೇಲೆ ಹೆಚ್ಚಿನ ಹೊರೆಗಳು ಬೀಳುತ್ತಿವೆ. ಇವೆಲ್ಲಾ ಮುಂಬರುವ ದಿನಗಳಲ್ಲಿ ಅಸಂತೃಪ್ತಿಯನ್ನು ಉಂಟುಮಾಡುವುದು ಖಚಿತ.

4. ಪ್ರಾದೇಶಿಕ ಪಕ್ಷಗಳು ಮುಂದೆಯೂ ರಾಷ್ಟ್ರೀಯ ರಾಜಕಾರಣದಲ್ಲಿ ಒಂದು ಮಹತ್ವದ ಪಾತ್ರ ವಹಿಸಲಿದೆ. ಅವುಗಳಲ್ಲಿ ಹೆಚ್ಚಿನವು ಬಿಜೆಪಿ ಜೊತೆಗೆ ಕೈಮಿಲಾಯಿಸಿ ಸಂದರ್ಭಸಾಧಕತನ ಪ್ರದರ್ಶಿಸಿವೆ. ಕೆಲವು ಕಾಂಗ್ರೆಸ್ ಜೊತೆಗೆ ಹೋಗಿವೆ. ಅವುಗಳಲ್ಲಿ ಹೆಚ್ಚಿನವು ತಮ್ಮ ರಾಜ್ಯಗಳ ಹಿತಾಸಕ್ತಿಯ ಆಧಾರದಲ್ಲಿ ನಿರ್ಣಯ ಕೈಗೊಳ್ಳುತ್ತದೆ. ರಾಜ್ಯ ಸರಕಾರದಲ್ಲಿದ್ದಾಗ ಬಿಜೆಪಿ ಮತ್ತು ಕಾಂಗ್ರೆಸ್ ಪ್ರತಿಪಾದಿಸುವ ಉದಾರೀಕರಣ, ಖಾಸಗೀಕರಣದ ನೀತಿಗಳನ್ನೇ ಅವು ಅನುಸರಿಸುತ್ತವೆ. ಇದರಿಂದಾಗಿ ಅವರಿಗೂ ತಮ್ಮ ಬೆಂಬಲವನ್ನು ಉಳಿಸಿಕೊಳ್ಳುವ ಸಮಸ್ಯೆಯಿದೆ. ಅವು ವಿವಿಧ ಕಸರತ್ತುಗಳನ್ನು

ಮಾಡಿ ರಾಜ್ಯ ಸರಕಾರಗಳಲ್ಲಿ ಮುಂದುವರೆಯಲು ಪ್ರಯತ್ನಿಸುತ್ತದೆ.

5. ಚುನಾವಣಾ ರಾಜಕಾರಣದಲ್ಲಿ ಜಾತಿಯ ಪಾತ್ರ ತೀವ್ರಗೊಳ್ಳುತ್ತವೆ. ಜಾತಿ ಆಧಾರದಲ್ಲಿ ರಾಜಕೀಯ ಶಕ್ತಿಗಳು ಎದ್ದುಬರುತ್ತಿರುವುದು ಸದ್ಯದ ಸನ್ನಿವೇಶದ ಒಂದು ಲಕ್ಷಣವಾಗಿ ಎದ್ದು ಕಾಣುತ್ತಿದೆ. ಜಾತಿ ಆಧಾರದಲ್ಲಿ ರಾಜಕೀಯ ಅಣಿನೆರಿಕೆ ಪ್ರಜಾಪ್ರಭುತ್ವ ಆಂದೋಲನದ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತದೆ ಹಾಗೂ ಜಾತಿ ಮುಖಂಡರ ಗಿರಿಕೆ ಹೊಡೆಯುವ ಕೃಪಾಪೋಷಿತ ರಾಜಕಾರಣವನ್ನು ಶಾಶ್ವತಗೊಳಿಸಲು ನೆರವಾಗುತ್ತದೆ. ಈ ಜಾತಿ ಮುಖಂಡರು ಯಾವುದೇ ರಾಜಕೀಯ ಅಥವಾ ಸೈದ್ಧಾಂತಿಕ ವಿಚಾರಗಳಿಲ್ಲದೆ ತಮ್ಮ ನಿಲುವು ಬದಲಿಸುತ್ತಿರುತ್ತಾರೆ.

6. ಸಾಮ್ರಾಜ್ಯಶಾಹಿ ಸತತವಾಗಿ ಒತ್ತಡ ಹಾಕುತ್ತಲೇ ಇದೆ. ಅದು ದೇಶದಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದೆ. ದೇಶದ ಆರ್ಥಿಕದಲ್ಲಿ, ರಾಜಕೀಯ ಮತ್ತು ವಿದೇಶಾಂಗ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿಯ ಪ್ರಭಾವ ಹೆಚ್ಚಿದೆ. ಬಿಜೆಪಿ ನೇತೃತ್ವದ ಸರಕಾರ ಇದಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದೆ. ಆದರೆ ಯುಪಿಎ ಸರಕಾರ ಅಧಿಕಾರಕ್ಕೆ ಬಂದರೂ ಕೆಲವೆಡೆ ಒತ್ತುಗಳನ್ನು ಬದಲಿಸಿದೆಯಷ್ಟೇ ಹೊರತು ಅಮೇರಿಕಾದೊಂದಿಗೆ ಸಾಮರಿಕ ಸಹಕಾರದ ಆಳ ಹಾಗೆಯೇ ಇದೆ.

7. ಅಂತಿಮವಾಗಿ ಸದ್ಯದ ಸನ್ನಿವೇಶದಲ್ಲಿ ಎಡಪಕ್ಷಗಳ ಪಾತ್ರ. ಎಡಶಕ್ತಿಗಳ ಶಕ್ತಿ ಅಖಿಲಭಾರತ ಪಾತಳಿಯೂ ಸೀಮಿತವಾದರೂ ಅವು ಒಂದು ಮಹತ್ವದ ಪಾತ್ರ ವಹಿಸುತ್ತಿವೆ. ಅವು ಈಗ ಗಳಿಸಿರುವ ನಿರ್ಣಾಯಕ ಸ್ಥಾನಮಾನವನ್ನು ಬಳಸಿಕೊಂಡು ಕೋಮುವಾದ, ದೊಡ್ಡ ಬಂಡವಾಳಗಾರರ ಪರವಾದ ಆರ್ಥಿಕ ನೀತಿಗಳು ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟಗಳಲ್ಲಿ ಮುನ್ನಡೆ ಸಾಧಿಸಬೇಕು.

ರಾಜಕೀಯ ನಿರ್ಣಯ ಸದ್ಯದ ಸನ್ನಿವೇಶದ ಈ ಲಕ್ಷಣಗಳನ್ನು ಪರಿಶೀಲಿಸಿ ಪಕ್ಷದ ನಿಲುವನ್ನು ಹಾಗೂ ಕರ್ತವ್ಯಗಳನ್ನು ಮುಂದಿಟ್ಟಿದೆ.

ಸಿಪಿಐ(ಎಂ)ಪಾತ್ರ

ಪ್ರಸಕ್ತ ಸನ್ನಿವೇಶದಲ್ಲಿ ಪಕ್ಷ ವಹಿಸಬೇಕಾದ ಪಾತ್ರವೆಂದರೆ ಕೇಂದ್ರದಲ್ಲಿ ಬಿಜೆಪಿಯನ್ನು ಪದಚ್ಯುತಿಗೊಳಿಸಿದ ಯಶಸ್ಸನ್ನು ಬಳಸಿಕೊಂಡು ಕೋಮುವಾದಿ ಶಕ್ತಿಗಳು ಸಮಾಜದ ವಿವಿಧ ವಲಯಗಳಲ್ಲಿ ಗಳಿಸಿರುವ ಆಯಕಟ್ಟಿನ ಸ್ಥಾನಗಳಿಂದ ಅದನ್ನು ಕಿತ್ತುಹಾಕಲು ಒಂದು ವಿಶಾಲ ಪ್ರಚಾರ ಕಾರ್ಯವನ್ನು ಆರಂಭಿಸಬೇಕು. ಪ್ರತಿದಿನ ರಾಜಸ್ಥಾನ್, ಮಧ್ಯಪ್ರದೇಶ, ಛತ್ತೀಸ್‌ಗಡ್, ಒರಿಸ್ಸಾ ಮತ್ತಿತರ ಸ್ಥಳಗಳಿಂದ ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಘಟನೆಗಳಿಂದ ಅಲ್ಪಸಂಖ್ಯಾತರ ಮೇಲೆ ಧಾಳಿಗಳ ವರದಿಗಳು ಬರುತ್ತಲೇ ಇವೆ. ಗುಜರಾತಿನಲ್ಲಿ ಮೋದಿಸರ್ಕಾರ ಯಾವುದೇ ನಾಚಿಕೆಯಿಲ್ಲದೇ ಕೋಮುವಾದಿ ನರಸಂಹಾರದಲ್ಲಿ ಭಾಗವಹಿಸಿದ ಅಪರಾಧಿಗಳಿಗೆ ರಕ್ಷಣೆ ಮಾಡುತ್ತಿದೆ ಹಾಗೂ ಮುಸ್ಲೀಮರು ಮತ್ತು ಕ್ರಿಶ್ಚಿಯನ್ನರನ್ನು ಎರಡನೇ ದರ್ಜೆಯ ನಾಗರಿಕರ ಮಟ್ಟಕ್ಕೆ ಇಳಿಸಲು ಕೆಲಸ ಮಾಡುತ್ತಿದೆ. ಕೋಮುವಾದದ ವಿರುದ್ಧ ರಾಜಕೀಯ, ಸೈದ್ಧಾಂತಿಕ ಹಾಗೂ ಸಂಘಟನಾ ಹೋರಾಟಗಳು ಅಂದರೆ ಸರ್ವತೋಮುಖ ಹೋರಾಟಗಳನ್ನು ಮುಂದುವರೆಸ ಬೇಕಾಗಿದೆ. ಎಲ್ಲೆಲ್ಲಿ ಅಲ್ಪಸಂಖ್ಯಾತ ಕೋಮುವಾದ ಮತ್ತು ಮೂಲಭೂತ ವಾದದ ಪ್ರವೃತ್ತಿಗಳು ಕಾಣುತ್ತವೋ ಅಲ್ಲಿ ಅಲ್ಪಸಂಖ್ಯಾತರ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸುತ್ತಲೇ ಆ ಪ್ರವೃತ್ತಿಗಳನ್ನು ಎದುರಿಸಬೇಕು.

ಸಿಪಿಐ(ಎಂ)ಗೆ ಕಾಂಗ್ರೆಸ್-ನೇತೃತ್ವದ ಸರಕಾರದ ಮೂಲ ನಿಲುವು ಮತ್ತು ನೀತಿಗಳ ಬಗ್ಗೆ ಭ್ರಮೆಗಳೇನೂ ಇಲ್ಲ. ಅದು ಜನಗಳ ಹಿತಾಸಕ್ತಿಗಳ ಕಾವಲು ಪಡೆಯಾಗಿ ಕೆಲಸ ಮಾಡಬೇಕು

ಪಕ್ಷ ಯುಪಿಎಗೆ ಬೆಂಬಲ ನೀಡಿರುವುದು ಸದ್ಯದ ಸನ್ನಿವೇಶದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವಿಲ್ಲದೆ ಯಾವುದೇ ಜಾತ್ಯಾತೀತ ಸರಕಾರ ಸಾಧ್ಯವಿಲ್ಲವೆಂಬ ಕಾರಣದಿಂದಾಗಿ. ಯುಪಿಎ ಅಧಿಕಾರದಲ್ಲಿ ಮುಂದುವರಿಯುತ್ತದೋ ಇಲ್ಲವೋ ಎಂಬುದು ಅದು ಎಷ್ಟರಮಟ್ಟಿಗೆ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ನಿರೂಪಿಸಿದ ಜನಪರ ಕ್ರಮಗಳನ್ನು ಜ್ಯಾರಿಗೊಳಿಸುತ್ತದೆ ಹಾಗೂ ಯುಪಿಎನ ಐಕ್ಯತೆಯನ್ನು ಕಾಪಾಡಿಕೊಳ್ಳುತ್ತದೆ ಎಂಬುದನ್ನು ಅವಲಂಬಿಸಿದೆ. ನಮ್ಮ ಪಕ್ಷ ಮತ್ತು ಇತರ ಎಡಪಕ್ಷಗಳಂತೂ ಜನ-ಪರ ಕ್ರಮಗಳ ಅನುಷ್ಠಾನಕ್ಕೆ ಒತ್ತಾಯಿಸುತ್ತಲೇ ಇರುತ್ತದೆ. ಇದನ್ನು ಸಾಧಿಸಲು ಅವು ಸಾಮೂಹಿಕ ಚಳುವಳಿಗಳನ್ನು ಕಟ್ಟುತ್ತವೆ ಹಾಗೂ ಹೋರಾಟಗಳನ್ನು ನಡೆಸುತ್ತದೆ. ಸಿಪಿಐ(ಎಂ)ಗೆ ಕಾಂಗ್ರೆಸ್-ನೇತೃತ್ವದ ಸರಕಾರದ ಮೂಲ ನಿಲುವು ಮತ್ತು ನೀತಿಗಳ ಬಗ್ಗೆ ಭ್ರಮೆಗಳೇನೂ ಇಲ್ಲ. ಅದು ಜನಗಳ ಹಿತಾಸಕ್ತಿಗಳ ಕಾವಲು ಪಡೆಯಾಗಿ ಕೆಲಸ ಮಾಡಬೇಕು ಹಾಗೂ ರಾಷ್ಟ್ರೀಯ ಸಾರ್ವಭೌಮತೆಯನ್ನು ತಟ್ಟುವ, ದುಡಿಯುವ ಜನಗಳ ಹಿತಾಸಕ್ತಿಗಳಿಗೆ ತೊಂದರೆಯುಂಟುಮಾಡುವ ಹಾಗೂ ವಿದೇಶಿ ಬಂಡವಾಳಕ್ಕೆ ಅಸಮರ್ಥನೀಯ ರಿಯಾಯ್ತಿಗಳನ್ನು ನೀಡುವ ಎಲ್ಲಾ ಕ್ರಮಗಳ ವಿರುದ್ಧ ಹೋರಾಡಬೇಕು.

ಆದ್ದರಿಂದ ನಮ್ಮ ಮುಂದಿರುವ ಕರ್ತವ್ಯ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ಮುನ್ನಡೆಸುವುದು ಹಾಗೂ ಅದೇ ವೇಳೆಗೆ ಉದಾರೀಕರಣದ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗಳಿಸುವುದು. ರಾಜಕೀಯ ನಿರ್ಣಯ ಹೇಳಿರುವಂತೆ "ಕೋಮುವಾದದ ಮತ್ತು ಆರ್ಥಿಕ ನೀತಿಗಳ ವಿರುದ್ಧ ಹೋರಾಟ ವಾಸ್ತವವಾಗಿ ಸಾಮ್ರಾಜ್ಯಶಾಹಿ - ವಿರೋಧಿ ಕರ್ತವ್ಯಕ್ಕೆ ಸಂಬಂಧಪಟ್ಟಿವೆ. ಏಕೆಂದರೆ ಹಿಂದುತ್ವ ಶಕ್ತಿಗಳು ಮತ್ತು ಉದಾರೀಕರಣವಾದಿಗಳ ವಿಶೇಷತೆ ಯೆಂದರೆ ಅವರಿಬ್ಬರೂ ಸಾಮ್ರಾಜ್ಯಶಾಹಿ ಪರರು.

ಸ್ವತಂತ್ರ ಶಕ್ತಿಯಾಗಿ ಪಕ್ಷ

ಪಕ್ಷ ತನ್ನ ಸ್ವತಂತ್ರ ಶಕ್ತಿಯನ್ನು ಕಟ್ಟಲು ಗರಿಷ್ಟ ಮಹತ್ವ ನೀಡಬೇಕು. ಹೊಸವಿಭಾಗಗಳನ್ನು ತಲುಪಲು ಹಾಗೂ ನಮ್ಮ ಪಕ್ಷದ ಕಕ್ಷೆಯು ಹೊರಗಿರುವ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದಮನಕ್ಕೊಳಗಾದವರನ್ನು ಅಣಿನೆರೆಸಲು ರಾಜಕೀಯ ನಿರ್ಣಯ ಈ ಕೆಳಗಿನ ಗುರುತರ ಕರ್ತವ್ಯಗಳ ಮಹತ್ವವನ್ನು ಒತ್ತು ಹೇಳಿದೆ.

ಮೊದಲನೆಯದಾಗಿ, ಕಾರ್ಷಿಕ ಬಿಕ್ಕಟ್ಟಿನಿಂದ ಹೊಮ್ಮಿರುವ ಅಸಂಖ್ಯ ಪ್ರಶ್ನೆಗಳು ಕೋಟ್ಯಾಂತರ ಜನಗಳನ್ನು ತಟ್ಟುತ್ತಿದ್ದು, ಪಕ್ಷ ಅವನ್ನು ಕೈಗೆತ್ತಿಕೊಂಡು ಜನಗಳನ್ನು ಅಣಿನೆರೆಸಿ ಚಳುವಳಿಗಳನ್ನು ಆರಂಭಿಸಬೇಕು ಎರಡನೆಯದಾಗಿ, ಪಕ್ಷ ಮೂಲ ವರ್ಗಗಳನ್ನು ಸಂಘಟಿಸಲು ಗಮನ ಕೇಂದ್ರೀಕರಿಸಬೇಕು ಹಾಗೂ ಕಾರ್ಮಿಕರು, ರೈತಾಪಿ ಜನಗಳು, ಕೃಷಿ ಕಾರ್ಮಿಕರು ಮತ್ತು ಇತರ ಶ್ರಮಜೀವಿ ವಿಭಾಗಗಳ ಐಕ್ಯ ಹೋರಾಟಗಳನ್ನು ಕಟ್ಟಿ ಬೆಳೆಸಬೇಕು. ರಾಷ್ಟ್ರ ಮಟ್ಟದಲ್ಲಿ ಎನ್.ಪಿ.ಎಂ.ಒ. ವನ್ನು ಇದಕ್ಕಾಗಿ ಸಕ್ರಿಯಗೊಳಿಸಬೇಕು. ಮೂರನೆಯದಾಗಿ, ಪಕ್ಷ ಸ್ಥಳೀಯ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಆರಂಭಿಸಿ ಆ ಮೂಲಕ ಭಾಗಶಃ ಬೇಡಿಕೆಗಳನ್ನು ಈಡೇರಿಸಿಕೊಡುವಂತಾಗಬೇಕು. ಇದು ಒಟ್ಟಾರೆ ಆಂದೋಲನದ ವಿಸ್ತರಣೆಗೆ ನೆರವಾಗುತ್ತದೆ ಹಾಗೂ ಪಕ್ಷದ ಪ್ರಭಾವವನ್ನು ವಿಸ್ತರಿಸುತ್ತದೆ.

ನಾಲ್ಕನೆಯದಾಗಿ, ಪಕ್ಷ ನೇರವಾಗಿ ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು. ಇಲ್ಲಿ ದಲಿತರ ಹಕ್ಕುಗಳಿಗಾಗಿ ಹಾಘೂ ಜಾತಿ ದಮನದ ವಿರುದ್ಧ ಹೋರಾಟ ಮಹತ್ವದ್ದಾಗುತ್ತದೆ. ಸಮಾನತೆಗಾಗಿ ಮತ್ತು ದಮನದ ವಿರುದ್ಧ ಮಹಿಳೆಯರ ಹೋರಾಟವನ್ನು ಪ್ರತಿಪಾದಿಸಬೇಕು ಹಾಗೂ ಅದನ್ನು ಕೇವಲ ಮಹಿಳಾ ಆಂದೋಲನ ಮಾತ್ರವೇ ಕೈಗೆತ್ತಿಕೊಳ್ಳಬೇಕು ಎಂದು ನಿರೀಕ್ಷಿಸದೆ ಪಕ್ಷವೂ ಎತ್ತಿಕೊಳ್ಳಬೇಕು. ಸಾಮಾಜಿಕ ಅನಿಷ್ಟಗಳ ವಿರುದ್ಧ ಮತ್ತು ಸಾಮಾಜಿಕ ಸುಧಾರಣೆಗಾಗಿ ಹೋರಾಟವನ್ನು ಹಿಂದಿಭಾಷಿಕ ಪ್ರದೇಶಗಳಲ್ಲಿ ಕೈಗೆತ್ತಿಕೊಂಡು ಒಂದು ಪ್ರಜಾಸತ್ತಾತ್ಮಕ ಪರಿಸರವನ್ನು ನಿರ್ಮಿಸುವಂತಾಗಬೇಕು.

ಅಂತಿಮವಾಗಿ, 4 ಕೋಟಿ ಆದಿವಾಸಿ ಜನಗಳಿದ್ದಾರೆ. ಅವರು ಪಾಳೆಯಗಾರಿ ಮತ್ತು ಬಂಡವಾಳಶಾಹಿ ಶಕ್ತಿಗಳಿಂದ ಅತ್ಯಂತ ಶೋಷಣೆಗೊಳಗಾದವರು. ಭೂಮಿ, ಅರಣ್ಯವಾಸಿಗಳ ಹಕ್ಕುಗಳಿಗಾಗಿ ಹಾಗೂ ಅಭಿವೃದ್ಧಿಯೋಜನೆಗಳ ಹೆಸರಲ್ಲಿ ಅವರನ್ನು ಎಬ್ಬಿಸುವುದರ ವಿರುದ್ಧ ಹೋರಾಟಗಳ ಜೊತೆಗೆ ಅವರ ಭಾಷೆಗಳು, ಸಂಸ್ಕೃತಿ ಮತ್ತು ಪ್ರಾದೇಶಿಕ ಸ್ವಾಯತ್ತತೆಯ ಪ್ರಶ್ನೆಗಳನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕು. ಮಧ್ಯಭಾರತದ ರಾಜ್ಯಗಳಲ್ಲಿ ಗಮನಾರ್ಹ ಸಂಖ್ಯೆಯ ಬುಡಕಟ್ಟು ಜನಸಂಖ್ಯೆಯಿದೆ. ಅವರ ನಡುವೆ ಆರ್‌ಎಸ್‌ಎಸ್ ಸಾಕಷ್ಟು ಪ್ರಭಾವ ಸಂಪಾದಿಸಿದೆ. ಅದನ್ನು ಎದುರಿಸಬೇಕು.

ಪಕ್ಷ ನೇರವಾಗಿ ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು. ಇಲ್ಲಿ ದಲಿತರ ಹಕ್ಕುಗಳಿಗಾಗಿ ಹಾಘೂ ಜಾತಿ ದಮನದ ವಿರುದ್ಧ ಹೋರಾಟ ಮಹತ್ವದ್ದಾಗುತ್ತದೆ. ಸಮಾನತೆಗಾಗಿ ಮತ್ತು ದಮನದ ವಿರುದ್ಧ ಮಹಿಳೆಯರ ಹೋರಾಟವನ್ನು ಪ್ರತಿಪಾದಿಸಬೇಕು

ಸಿಪಿಐ(ಎಂ)ನ್ನು, ಅದರ ಸಾಮೂಹಿಕ ನೆಲೆಯನ್ನು ಬಲಗೊಳಿಸಲು ಈ ಎಲ್ಲಾ ಕೆಲಸಗಳನ್ನು ನಡೆಸಬೇಕು.

ಮೂರನೇ ಪರ್ಯಾಯ ಕಟ್ಟಲು

ಹಾಗೆ ಮಾಡುವಾಗಲೇ ಪಕ್ಷ ಒಂದು ಮೂರನೇ ಪರ್ಯಾಯವನ್ನು ಕಟ್ಟಲು ಕೆಲಸ ಮಾಡಬೇಕು. ರಾಜಕೀಯ ರಂಗದಲ್ಲಿ ಒಂದು ಬಿಜೆಪಿ ನೇತೃತ್ವದ, ಇನ್ನೊಂದು ಕಾಂಗ್ರೆಸ್ ನೇತೃತ್ವದ ಹೀಗೆ ಎರಡು ಬೂರ್ಜ್ವಾ ಕೂಟಗಳೇ ಪ್ರಾಬಲ್ಯ ಹೊಂದಿರುವುದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲ. ಒಂದು ಮೂರನೇ ಪರ್ಯಾಯದ ಅಗತ್ಯವಿದೆ. ಇಂತಹ ಒಂದು ಪರ್ಯಾಯವನ್ನು ಕಟ್ಟಬೇಕಾದರೆ ಜಂಟಿ ಚಳುವಳಿಗಳು ಹಾಗೂ ಪ್ರಚಾರಗಳನ್ನು ನಡೆಸಿ ಎಡ ಮತ್ತು ಇತರ ಪ್ರಜಾಪ್ರಭುತ್ವ ವಾದಿ ಹಾಗೂ ಜಾತ್ಯಾತೀತ ಪಕ್ಷಗಳು ಒಟ್ಟಿಗೆ ಬರಬೇಕಾಗುತ್ತದೆ. ಕನಿಷ್ಟ ಕೆಲವು ಪ್ರಧಾನ ಪ್ರಶ್ನೆಗಳ ಮೇಲೆ ಒಂದು ಸಮಾನ ನೀತಿ ಚೌಕಟ್ಟು ಇದ್ದರೆ ಮಾತ್ರವೇ ಒಂದು ಸಮರ್ಥ ಪರ್ಯಾಯ ಮೂಡಿಬರಲು ಸಾಧ್ಯ.

ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಯಶಸ್ವಿಯಾಗಿ ಒಟ್ಟುಗೂಡಿಸಬೇಕಾದರೆ ಎಡಶಕ್ತಿಗಳ ಬಲಹೆಚ್ಚಿಸುವುದು ಅಗತ್ಯ. ಪಕ್ಷದ ಈ ಎಲ್ಲಾ ಚಟುವಟಿಕೆಗಳು ಒಂದು ಎಡ ಮತ್ತು ಪ್ರಜಾಪ್ರಭುತ್ವವಾದೀ ಪರ್ಯಾಯವನ್ನು ಕಟ್ಟುವತ್ತ ಸಾಗಲಿಕ್ಕಾಗಿ ಎಂಬುದನ್ನು ಒತ್ತಿಹೇಳಬೇಕಾಗುತ್ತದೆ. ಏಕೆಂದರೆ ಇದು ಮಾತ್ರವೇ ಬೂರ್ಜ್ವಾ-ಭೂಮಾಲಕ ವ್ಯವಸ್ಥೆಗೆ ನಿಜವಾದ ಪರ್ಯಾಯ. ಇತ್ತೀಚಿನ ಅವಧಿಯಲ್ಲಿ **ಎಡಶಕ್ತಿಗಳು ಎಲ್ಲೆಲ್ಲಿ ಯುಪಿಎ ಸರ್ಕಾರಗಳ ನೀತಿಗಳನ್ನು ವಿರೋಧಿಸಿವೆಯೋ ಅಲ್ಲೆಲ್ಲಾ ತನ್ನ ಒಳ ಪರ್ಯಾಯ ನೀತಿಗಳಿವೆ ಎಂಬುದನ್ನು ದೇಶಕ್ಕೆ ತೋರಿಸಿಕೊಟ್ಟಿವೆ. ಅದು ಕೆಲವು ವಲಯಗಳಲ್ಲಿ ಎಫ್‌ಡಿಐ ಪ್ರಶ್ನೆಯ ಮೇಲಾಗಿರಬಹುದು, ವಿದ್ಯುತ್ ನೀತಿಯಾಗಿರಬಹುದು, ಪೇಟೆಂಟ್ ಮಸೂದೆಯಾಗಿರಬಹುದು ಅಥವಾ ಸಾರ್ವಜನಿಕ ವಲಯದ ಸುಧಾರಣೆಗಳ ಪ್ರಶ್ನೆಯಾಗಿರಬಹುದು**. ಪಕ್ಷ ಮತ್ತು ಎಡಶಕ್ತಿಗಳು ಇವೆಲ್ಲದರ ಬಗ್ಗೆ ತಮ್ಮ ನಿಲುವನ್ನು ಮುಂದಿಟ್ಟಿವೆ. ಪರ್ಯಾಯ ನೀತಿಗಳಿಗೆ ಬೆಂಬಲ ಗಳಿಸಲು ಇವನ್ನೆಲ್ಲಾ ಬಳಸಬೇಕು.

ದೇಶದ ಅತಿ ದೊಡ್ಡ ಎಡಶಕ್ತಿಯಾದ ಸಿಪಿಐ(ಎಂ)ನ ಮಹಾಧಿವೇಶನ ಅತ್ಯುತ್ತಮ ಐಕ್ಯತೆಯನ್ನು ಹಾಗೂ ಈ ಘಟ್ಟದಲ್ಲಿ ತನ್ನ ಚಾರಿತ್ರಿಕ ಜವಾಬ್ದಾರಿಗಳನ್ನು ನಿರ್ವಹಿಸಬಲ್ಲೆವೆಂಬ ಆತ್ಮವಿಶ್ವಾಸವನ್ನು ಪ್ರದರ್ಶಿಸಿದೆ. ❍



ಸ್ಫೋಟದ ಅಂಚಿನಲ್ಲಿ ನಿರುದ್ಯೋಗ

90ರ ದಶಕದ ಆರಂಭದಲ್ಲಿ ನವ ಉದಾರವಾದಿ ವಿಮರ್ಶಕರು, ಮಿಶ್ರ ಆರ್ಥಿಕ ವ್ಯವಸ್ಥೆ - ಯೋಜನಾ ಬದ್ಧ ಅಭಿವೃದ್ಧಿಯ ವಿಧಾನವೇ ನಿರುದ್ಯೋಗಕ್ಕೆ ಕಾರಣ ನಿರುದ್ಯೋಗ ನಿವಾರಣೆಗೆ ಮುಕ್ತ ಆರ್ಥಿಕ ವ್ಯವಸ್ಥೆ, ಮಾರುಕಟ್ಟೆ ಆರ್ಥಿಕತೆ ಪರಿಹಾರ ಎಂದು ಬೊಬ್ಬೆ ಹಾಕುತ್ತಿದ್ದರು ಇಂದಿಗೂ ಅದೇ ವಾದವನ್ನು ಮುಂದಿಡುತ್ತಿದ್ದಾರೆ. ಆದರೆ ಮುಕ್ತ ಮಾರುಕಟ್ಟೆ ಎಡೆಗೆ ನಡೆದ ಹಾದಿಯನ್ನು ಭಾರತವು ಅನುಸರಿಸಲು ಆರಂಭಿಸಿ ಈಗಾಗಲೇ 15 ವರ್ಷಗಳೇ ಪೂರ್ಣ ಗೊಳ್ಳುತ್ತಿವೆ. ಆದರೆ ನಿರುದ್ಯೋಗ ನಿವಾರಣೆ ಆಗುವ ಬದಲು ಹೆಚ್ಚುತ್ತಲೆ ಇದೆ.' ಇದ್ದ ಉದ್ಯೋಗವು ಇಲ್ಲವಾಗುವ, ಉದ್ಯೋಗಸ್ಥರೇ ನಿರುದ್ಯೋಗಿಗಳಾಗುವ ಕಾಲಘಟ್ಟವನ್ನು ಇಂದು ಭಾರತ ತಲುಪುತ್ತಿದೆ. ಮಾತ್ರವಲ್ಲ, ಒಟ್ಟಾರೆ ಜಾಗತಿಕ ನಿರುದ್ಯೋಗ ಹೆಚ್ಚುತ್ತಿರುವಂತೆ, ಭಾರತದಲ್ಲೂ ನಿರುದ್ಯೋಗ ಹೆಚ್ಚುತ್ತಿದ್ದು

ಇದ್ದ ಉದ್ಯೋಗವು ಇಲ್ಲವಾಗುವ, ಉದ್ಯೋಗಸ್ಥರೇ ನಿರುದ್ಯೋಗಿಗಳಾಗುವ ಕಾಲಘಟ್ಟವನ್ನು ಇಂದು ಭಾರತ ತಲುಪುತ್ತಿದೆ. ಮಾತ್ರವಲ್ಲ, ಒಟ್ಟಾರೆ ಜಾಗತಿಕ ನಿರುದ್ಯೋಗ ಹೆಚ್ಚುತ್ತಿರುವಂತೆ, ಭಾರತದಲ್ಲೂ ನಿರುದ್ಯೋಗ ಹೆಚ್ಚುತ್ತಿದ್ದು ಸ್ಫೋಟಿಸುವ ಹಂತ ತಲುಪುತ್ತಿದೆ.

ಕೆ.ಎನ್.ಉಮೇಶ್

ಸ್ಫೋಟಿಸುವ ಹಂತ ತಲುಪುತ್ತಿದೆ.

1991ರಿಂದ ಆರಂಭವಾದ ಆರ್ಥಿಕ ಸುಧಾರಣೆಗಳ ಕಾಲ ಘಟ್ಟವನ್ನು ಉದ್ಯೋಗ ರಹಿತ ಬೆಳವಣಿಗೆ ಎಂದು ಬಣ್ಣಿಸಲಾಗಿತ್ತು. ಆದರೆ ಇಂದು 2ನೇ ತಲೆ ಮಾರಿನ ಸುಧಾರಣೆಗಳು ಜಾರಿಗೆ ಬರುತ್ತಿರುವ ಸುಧಾರಣೆಗಳಿಗಾಗಿ ದಶಕದ ನಂತರದ ಹಂತ ಉದ್ಯೋಗ ನಾಶದ ಹಂತವಾಗಿ ಪರಿಣಮಿಸುತ್ತಿದೆ. ಒಟ್ಟಾರೆ ಸಾಮ್ರಾಜ್ಯಶಾಹಿ ಜಾಗತೀಕರಣ ಆಧಾರಿತ ಉದಾರೀಕರಣ-ಖಾಸಗೀಕರಣ ಜಾಗತೀಕರಣ (ಎಲ್.ಪಿ.ಜಿ.) ನೀತಿಗಳು ಭಾರತದ ಆರ್ಥಿಕ ಬೆಳವಣಿಗೆಯನ್ನು ಉದ್ಯೋಗರಹಿತ ಬೆಳವಣಿಗೆಯಿಂದ ಉದ್ಯೋಗ ನಾಶದ ಬೆಳವಣಿಗೆ ಹಂತಕ್ಕೆ ತಂದು ನಿಲ್ಲಿವೆ. (jobless growth jobloss growth) ಪರಿಣಾಮವಾಗಿ ನಿರುದ್ಯೋಗ ಪ್ರಮಾಣ ಹೆಚ್ಚುತ್ತಲೆ ಇದೆ.

1990ರಲ್ಲಿ 3.46 ಕೋಟಿಯಷ್ಟಿದ್ದ ನೋಂದಾಯಿತ ನಿರುದ್ಯೋಗಿಗಳ ಸಂಖ್ಯೆ ಭಾರತದಲ್ಲಿ 1999ರಲ್ಲಿ 4.03 ಕೋಟಿಗೆ ಮುಟ್ಟಿತ್ತು. ಪ್ರಸ್ತುತ ಇನ್ನಷ್ಟು ಜಾಸ್ತಿಯಾಗಿದೆ. ಇದು ವಿದ್ಯಾವಂತ ನಿರುದ್ಯೋಗಿಗಳು, ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿ ಕೊಂಡಿರುವವರ ಸಂಖ್ಯೆ ಈ ಸಂಖ್ಯೆಯಲ್ಲಿ ಗ್ರಾಮೀಣ ನಿರುದ್ಯೋಗ ಒಳಪಡದು, ನೋಂದಾಯಿಸಿ ಕೊಳ್ಳುವವರು, ಅರೆ ಉದ್ಯೋಗಿಗಳು, ವರ್ಷದಲ್ಲಿ ಕೆಲವು ದಿನಗಳ ಉದ್ಯೋಗ ಪಡೆವವರು (seasnal employed) ಇದರೊಳಗೆ ಬರುವುದಿಲ್ಲ. ಒಂದು ಅಂದಾಜಿನಂತೆ ಒಟ್ಟಾರೆ 12 ಕೋಟಿಯಷ್ಟು, ದುಡಿಯಲು ಅರ್ಹರಿರುವವರು ಇಂದು ಭಾರತದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಅಂದರೆ ಆರ್ಥಿಕವಾಗಿ ಕ್ರಿಯಾ ಶೀಲವಾಗಿರುವ ವಯಸ್ಸಿನ ಜನಸಂಖ್ಯೆಯ ಶೇ.25ರಷ್ಟು ಜನ ಇಂದು ನಿರುದ್ಯೋಗಿಗಳಾಗಿದ್ದಾರೆ.

ಸುಧಾರಣೆಗಳ ಕಾಲದಲ್ಲಿ ತೀವ್ರಗೊಂಡ ನಿರುದ್ಯೋಗ :

2001ರ ಜನಗಣತಿಯೊಂದಿಗೆ 1999-2000ದ 55ನೇ ಸುತ್ತಿನ ರಾಷ್ಟ್ರೀಯ ಸ್ಯಾಂಪಲ್ ಸರ್ವೆ (ಎನ್ ಎಸ್ ಎಸ್) ಮೂಲಕ ಹೊರಹೊಮ್ಮಿರುವ ಅಂಶಗಳನ್ನು ಜೋಡಿಸಿ ನೋಡಿದರೆ ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಉದ್ಯೋಗ ಬೆಳವಣಿಗೆ ವಾರ್ಷಿಕ ಶೇಕಡವಾರು ಕುಸಿಯುತ್ತಿರುವುದನ್ನು ಗಮನಿಸಬಹುದು. 1983ರಿಂದ 1987-88ರ ನಡುವೆ

ಶೇ.1.36ರಷ್ಟು ಬೆಳವಣಿಗೆ ಪ್ರಮಾಣದಲ್ಲಿದ್ದ ಗ್ರಾಮೀಣ ಪ್ರದೇಶದಲ್ಲಿನ ಉದ್ಯೋಗ ಸೃಷ್ಟಿ ನಡುವೆ ಶೇ. 2.03ಕ್ಕೆ ಏರಿ 93-94ರಿಂದ 99-2000ದ ನಡುವೆ ಶೇ.0.6ಕ್ಕೆ ಕುಸಿದಿದೆ. ಅಂತೆಯೆ ನಗರ ಪ್ರದೇಶದಲ್ಲಿ ಶೇ. 2.77ರಿಂದ ನಡುವೆ ಶೇ. 3.39ಕ್ಕೆ ಏರಿದ್ದದ್ದು ನಂತರ ಶೇ. 2.27ಕ್ಕೆ ಕುಸಿದಿದೆ.


ಸುಧಾರಣೆಗಳು ಭಾರತದಲ್ಲಿ ಉದ್ಯೋಗ ಸೃಷ್ಟಿ ಮಾಡಿಲ್ಲ ಮಾತ್ರವಲ್ಲ ಇದ್ದ ಉದ್ಯೋಗಗಳನ್ನು ನಾಶಮಾಡಿವೆ ಎಂಬುದಕ್ಕೆ ಇದಕ್ಕಿಂದ ದೊಡ್ಡ ಉದಾಹರಣೆ ಬೇಕಿಲ್ಲವಲ್ಲವೇ? ಉದ್ಯೋಗ ಸೃಷ್ಟಿ ಕುಸಿದರೆ ನಿರುದ್ಯೋಗ ನಿವಾರಣೆ ಎಲ್ಲಿಂದ ಸಾಧ್ಯ?


ಉದ್ಯೋಗದ ಬೆಳವಣಿಗೆ ಪ್ರಮಾಣ
(ವಾರ್ಷಿಕ ಶೇಕಡವಾರು ಬದಲಾವಣೆ)

	ಗ್ರಾಮೀಣ	ನಗರ
1983ರಿಂದ 1987-88	1.36	2.77
1987-88 ರಿಂದ 1993-94	2.03	3.39
1993-94 ರಿಂದ 1999-2000	0.66	2.27

ವರ್ಷಕ್ಕೆ ಒಂದು ಕೋಟಿ ಉದ್ಯೋಗದ ಭರವಸೆ ನೀಡಿದ್ದ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅದಕ್ಕೆಂದು ರಚಿಸಿದ್ದ ಎಸ್.ಪಿ.ಗುಪ್ತಾ ನೇತೃತ್ವದ ವಿಶೇಷ ತಂಡದ (ಸ್ಪೆಷಲ್ ಗ್ರೂಪ್) ಮಾತುಗಳಲ್ಲೆ ಹೇಳುವುದಾದರೆ "10ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ, ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಪ್ರಮಾಣ (ಜಿಡಿಪಿ) ಶೇ.8ರಷ್ಟು ಬೆಳವಣಿಗೆ ಪ್ರಮಾಣ ಗಳಿಸಿದಲ್ಲಿ ಸರಾಸರಿ ವಾರ್ಷಿಕ 60 ಲಕ್ಷ ಕೆಲಸ ಸೃಷ್ಟಿಸಬಹುದು" ಎಂಬುದಾಗಿತ್ತು. ಒಂದು ಅಂದಾಜಿನ ಪ್ರಕಾರ ವಾರ್ಷಿಕ 30 ಲಕ್ಷ ಕೆಲಸಗಳು ಮಾತ್ರ 1994-2000ದ ನಡುವೆ ಸೃಷ್ಟಿಯಾಗಿವೆ. ಅವರ ಮಾತಲ್ಲೆ ಹೇಳಬೇಕೆಂದರೆ '90ರ ದಶಕದ ಅನುಭವಗಳೇನಾದರೂ ಮರುಕಳಿಸಿದಲ್ಲಿ ಭಾರತವು ಮತ್ತಷ್ಟು ನಿರುದ್ಯೋಗವನ್ನು ಎದುರಿಸಬೇಕಾಗುತ್ತದೆ" ಎಂಬುದು. ಆದರೆ 10ನೇ ಪಂಚವಾರ್ಷಿಕ ಯೋಜನೆಯ ರೂಪಣೆಯ ಭಾಗವಾಗಿ ರಚಿಸಲಾಗಿದ್ದ ಮಾಂಟೆಕ್ ಸಿಂಗ್ ಅಹಲುವಾಲಿಯ ನೇತೃತ್ವದ ಕಾರ್ಯಪಡೆ ಇದಕ್ಕೆ ವ್ಯತಿರಿಕ್ತವಾಗಿ ಉದ್ಯೋಗ ಸೃಷ್ಟಿಸಲು ಕಾರ್ಮಿಕ ಕಾನೂನುಗಳ, ಜಟಿಲತೆಯನ್ನು ಸಡಿಲಗೊಳಿಸಿ, ಮಾಲಿಕರಿಗೆ ಹೆಚ್ಚು ಅಧಿಕಾರ ನೀಡಬೇಕು, ನಿಯಂತ್ರಣ ಕಡಿಮೆ ಮಾಡಬೇಕು. "ಹೈರ್ ಅಂಡ್ ಫೈರ್"ಗೆ ಅವಕಾಶ ಕಲ್ಪಿಸಬೇಕೆಂಬ ಶಿಫಾರಸ್ಸನ್ನು ಸುಧಾರಣೆಗಳ ಪರವಾಗಿನೀಡಿದೆ. ಅದರಿಂದ ವಿದೇಶಿ ನೇರಬಂಡವಾಳ (ಎಫ್.ಡಿ.ಐ.) ಹರಿದು ಬರಲಿದೆ, ಉದ್ಯೋಗ ಸೃಷ್ಟಿಯಾಗಲಿದೆ ಎಂಬುದು ಅವರ ವಾದ.

ಆದರೆ ಶೇ.75ರಷ್ಟು ಎಫ್‌ಡಿಐ ಇದ್ದ ಕಾರ್ಖಾನೆಗಳನ್ನು ವಶಪಡಿಸಿಕೊಳ್ಳಲು ಅಥವಾ ಅವನ್ನು ತನ್ನೊಳಗೆ ಮಾಡಿಕೊಳ್ಳಲೊ (Merger and Acquistion-M&A) ಬರುತ್ತಿದೆ ಎಂಬುದನ್ನು ಅಹಲುವಾಲಿಯಾ ಸಾಹೇಬರು ಗಮನಿಸಬೇಕು. ಈ ಎಲ್ಲಾ M&A ಗಳಲ್ಲೂ ಕಾರ್ಮಿಕರನ್ನು ಕಡಿತ ಮಾಡುವ, ಉನ್ನತ ತಂತ್ರಜ್ಞಾನ ಅಳವಡಿಸುವ, ವಿಆರ್‌ಎಸ್(ಸ್ವಯಂ ನಿವೃತ್ತಿ), ಇ.ಆರ್.ಎಸ್ (ಮುಂಚಿತವಾಗಿ ನಿವೃತ್ತಿ), ಇಎಸ್‌ಎಸ್ (ಮುಂಚಿತ ಬೇರ್ಪಡಿಸುವಿಕೆ) ಯೋಜನೆಗಳಿಂದಲೆ





ಉದ್ಯೋಗಾಕಾಂಕ್ಷಿಗಳ ಸಾಲು

ಆರಂಭವಾಗುವುದು. 93-94ರಿಂದ 300 ಎಂ ಮತ್ತು ಎ ಪ್ರಕರಣಗಳು ಭಾರತದಲ್ಲಿ ನಡೆದಿವೆ. ಆ ಎಲ್ಲಾದರಲ್ಲೂ ಇದೇ ಹಾದಿ ಅನುಸರಿಸಲಾಗಿದೆ. ಪರಿಣಾಮ ಉದ್ಯೋಗ ನಷ್ಟವೇ ವಿನಹಃ ಉದ್ಯೋಗ ಸೃಷ್ಟಿಯಲ್ಲ!


ಜಾಗತಿಕ ನಿರುದ್ಯೋಗ

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ಯ 2001ರ ವಿಶ್ವ ಉದ್ಯೋಗ ವರದಿಯ ಪ್ರಕಾರ ಜಗತ್ತಿನ ದುಡಿಯಲು ಅರ್ಹರಿರುವವರಲ್ಲಿನ ಮೂರನೇ ಒಂದರಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ. ಅಥವಾ ಅರೆ ಉದ್ಯೋಗಿಗಳಾಗಿದ್ದಾರೆ. ಉದ್ಯೋಗ ರಹಿತ ಬೆಳವಣಿಗೆ ಬಗ್ಗೆ ಹೇಳಿರುವ ವರದಿಯು "ಜಾಗತಿಕವಾಗಿ 2010ರೊಳಗೆ ಅಗತ್ಯವಿರುವ ಹೊಸ 50 ಕೋಟಿ ಉದ್ಯೋಗವನ್ನು ಸೃಷ್ಟಿಸಿ ಜಾಗತಿಕ ನಿರುದ್ಯೋಗವನ್ನು ಅರ್ಧಕ್ಕೆ ಇಳಿಸಲು ಇಂದಿನ ಬೆಳವಣಿಗೆ ವಿಧಾನ ಒಂದರಿಂದಲೇ ಸಾಧ್ಯವಾಗದು" ಎಂದು ಎಚ್ಚರಿಸಿದೆ. ಈ ವರದಿಯ ಪ್ರಕಾರವೇ 2000 ಮತ್ತು 2002ರ ನಡುವೆ ಕೈಗಾರಿಕಾ ರಾಷ್ಟ್ರಗಳಲ್ಲೆ ನಿರುದ್ಯೋಗವು ಶೇ. 6.4ರಷ್ಟು ಹೆಚ್ಚಿದೆ.

ಅಮೇರಿಕಾ ಪರಿಸ್ಥಿತಿಯೇನು ಭಿನ್ನವಲ್ಲ!

ವಾಷಿಂಗ್‌ಟನ್‌ನ ಅಂಕಣಕಾರರ ಪ್ರಕಾರ 2002 ಡಿಸೆಂಬರ್ ಒಂದರಲ್ಲೇ ಅಮೇರಿಕಾದಲ್ಲಿ 1,01,000 ಉದ್ಯೋಗಸ್ಥರು - ಉದ್ಯೋಗ ಕಳೆದು ಕೊಂಡಿದ್ದಾರೆ. ನಿರುದ್ಯೋಗ ಪ್ರಮಾಣ ಶೇ.6ಕ್ಕೆ ಏರಿದೆ. 2000-2001ರ ನಡುವೆ

16 ಲಕ್ಷ ಉದ್ಯೋಗಗಳು ಇಲ್ಲದಾಗಿವೆ. 1990-91ರಲ್ಲಿ ಉದ್ಯೋಗ ಕಡಿತದ ಮಾಸಿಕ ಸರಾಸರಿ 26,000 ವಾಗಿದ್ದರೆ, 2002ರಲ್ಲಿ ಅದು 1,40,000ವಾಗಿದೆ. ಅಮೇರಿಕಾ ಕಂಪನಿಗಳು 2003ರ ಆಗಸ್ಟ್ ತಿಂಗಳೊಂದರಲ್ಲೆ 93,000 ಉದ್ಯೋಗ ಗಳನ್ನು ಕಡಿತ ಮಾಡಿವೆ. 2003ರ ಮೊದಲ ಏಳು ತಿಂಗಳಲ್ಲಿ, ಒಟ್ಟು 5,95,000 ಉದ್ಯೋಗಗಳು ಕಡಿತಗೊಂಡಿವೆ, ಅಮೇರಿಕಾ ಮಾದರಿ ಎನ್ನುವವರಿಗೆ ಉದ್ಯೋಗ ನಷ್ಟದ ಬೆಳವಣಿಗೆಯೇ ಅದರ ಮಾದರಿಯಾದೀತು!



ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಘಟಕಗಳು - ಉದ್ಯೋಗ (1999-2000 ರಿಂದ 2002-03)				
ಸೂಚಕ	1999-2000	2000-01	20001-02	2002-03
ನೊಂದಾಯಿತ ಸಣ್ಣ ಕೈಗಾರಿಕಾ ಘಟಕಗಳು	18935 (ಶೇ.18.7)	16564 (ಶೇ.3.80)	11964 (ಶೇ. 2.45)	12029 (-29.09)
ಉದ್ಯೋಗ	88279 (ಶೇ. 26.9)	85792 (ಶೇ. -2.80)	73195 (ಶೇ. -14.68)	57371 (ಶೇ. -21.62)
(ಆವರಣದಲ್ಲಿರುವುದು ಶೇಕಡವಾರು ಪ್ರಮಾಣ)				



ಅಂಗೈ ಹುಣ್ಣಿಗೆ ಕನ್ನಡಿ ಬೇಕೆ... ಎಂಬಂತಿದೆ ಕರ್ನಾಟಕದ ಪರಿಸ್ಥಿತಿ

ಕರ್ನಾಟಕದಲ್ಲಿನ ನಿರುದ್ಯೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಗ್ರಾಮೀಣ ಹಾಗು ನಗರಗಳೆರಡರಲ್ಲೂ ನಿರುದ್ಯೋಗ ತೀವ್ರವಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಕಾರ್ಷಿಕ ಬಿಕ್ಕಟ್ಟು ಅಲ್ಲಿನ ಯುವಜನರಲ್ಲಿ ವಲಸೆ, ಹತಾಶೆಗೆ ಉತ್ತೇಜನ ನೀಡಿದೆ. ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೊಂದಾಯಿಸಿ ಕೊಂಡಿರುವವರ ಸಂಖ್ಯೆ 2003-04ರಲ್ಲಿ 17,43,092ರಷ್ಟಿದೆ. ಆದರೆ ಉದ್ಯೋಗ ವಿನಿಮಯ ಕೇಂದ್ರಗಳಿಂದ ನೌಕರಿ ದೊರೆತ ಸಂಖ್ಯೆ ಮಾತ್ರ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಪರಿಣಾಮವಾಗಿ ನೊಂದಾಯಿಸಿಕೊಳ್ಳುವವರ ಸಂಖ್ಯೆಯು ಕಡಿಮೆಯಾಗುತ್ತಿದೆ. ಇದರ ಜೊತೆಗೆ ಉದ್ಯೋಗ ವಿನಿಮಯ ಕೇಂದ್ರಗಳನ್ನೆ ಸರ್ಕಾರ ಮುಚ್ಚಬೇಕೆಂಬ ಉದ್ದೇಶದಿಂದ ಕಂಪು ಯೋಜನೆ (Computer Aided Manpower Placement Utility Services-CAMPU)ಯನ್ನು ಖಾಸಗಿಯವರಿಗೆ ನೀಡಿದೆ, ಮಾತ್ರವಲ್ಲದೆ 'ಉದ್ಯೋಗ ಪಾರ್ಕ್'ಗಳನ್ನು ತೆರೆಯಲು ಮುಂದಾಗಿ, ಇಲಾಖೆಯನ್ನು ನಿರುಪಯುಕ್ತಗೊಳಿಸಲು ಯೋಜಿಸಿದೆ. ಈ ಎಲ್ಲದರ ಪರಿಣಾಮವಾಗಿ ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗಿದೆ. ಆದರೆ ಸುಧಾರಣೆಗಳ ವಕ್ತಾರರು ಸಂಖ್ಯೆ ಕಡಿಮೆಯಾಗಲು ನೌಕರಿ ದೊರೆತಿರುವುದು ಕಾರಣ ಎಂದು ಹೇಳುತ್ತಾ, ಸುಳ್ಳನ್ನು ಸತ್ಯ ಮಾಡಲು ಮುಂದಾಗಿದ್ದಾರೆ.


ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು		
	2001-02	2002-03
ಅನುಮೋದಿತ ಕೈಗಾರಿಕೆಗಳು	20 (ಶೇ.-71.27)	7 (ಶೇ.-11.00)
ಉದ್ಯೋಗ	30625 (ಶೇ.72.18)	9532 (-68.94)

ಉದಾರೀಕರಣದ ಉರುಳಿಗೆ ರಾಜ್ಯದ ಕೈಗಾರಿಕೆ. ಕೃಷಿಯಲ್ಲಿನ ಉದ್ಯೋಗಗಳು ವ್ಯಾಪಕವಾಗಿ ಬಲಿಯಾಗಿವೆ. 1999-2000ದಲ್ಲಿ ಕೇವಲ 11.5ಲಕ್ಷ ಜನರಿಗೆ ಸೀಮಿತಗೊಂಡಿದೆ. ದೊಡ್ಡ ಪ್ರಮಾಣದ ಉದ್ಯೋಗ ಒದಗಿಸುತ್ತಿದ್ದ ಸಣ್ಣ ಕೈಗಾರಿಕೆಗಳು ವಾರ್ಷಿಕ ಬೆಳವಣಿಗೆ ಪ್ರಮಾಣ ಮತ್ತು ಉದ್ಯೋಗ ಸೃಷ್ಟಿಯ ಪ್ರಮಾಣ ಶೇಕಡವಾರು ಕಡಿಮೆಯಾಗುತ್ತಿದೆ ಮಾತ್ರವಲ್ಲದೆ ನಕಾರಾತ್ಮಕ ಬೆಳವಣಿಗೆ ಕಾಣುತ್ತಿದೆ.

ಬಂಡವಾಳ ಹರಿದು ಬರುತ್ತಿದೆ. ಆಕರ್ಷಣೆಯ ಕೇಂದ್ರ ಕರ್ನಾಟಕ ಎಂಬೆಲ್ಲಾ ಆರ್ಭಟಗಳ ನಡುವೆಯು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ಉದ್ಯೋಗಗಳ ಶೇಕಡವಾರು ವಾರ್ಷಿಕ ಬೆಳವಣಿಗೆ ಪ್ರಮಾಣ ಮಾತ್ರ ನಕಾರಾತ್ಮಕವಾಗಿದೆ.

ಖಾಲಿಯಿರುವ ಹುದ್ದೆಗಳನ್ನು ಕೇಂದ್ರ-ರಾಜ್ಯ ಸಕಾರಗಳು ಭರ್ತಿ ಮಾಡಿಲ್ಲ. ಮಾತ್ರವಲ್ಲದೆ ಇರುವ ಹುದ್ದೆಗಳನ್ನು ಸಂಪೂರ್ಣ ಕಡಿತ ಮಾಡುವ (ಡೌನ್ ಸೈಜಿಂಗ್) ಕಾಯಕವನ್ನು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಸಂರಚನಾತ್ಮಕ ಹೊಂದಾಣಿಕೆಯ (Structural Adjustment Programme) ಭಾಗವಾಗಿ ಮಾಡುತ್ತಿವೆ. ರಾಜ್ಯದ 'ಹಾರ್ನಳ್ಳಿ ರಾಮಸ್ವಾಮಿ ಆಡಳಿತ ಸುಧಾರಣಾ ಆಯೋಗ'ದ ವರದಿಯು ಅದನ್ನೆ ಶಿಫಾರಸ್ಸು ಮಾಡಿದೆ.

ಮುಕ್ತ ಆಮದು ನೀತಿ, ಪ್ರಮಾಣಾತ್ಮಕ ನಿರ್ಬಂಧ (ಜಿಆರ್ಎಸ್) ರದ್ಧತಿ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಮುಂತಾದ ನೀತಿಗಳಂತೆ ಇದ್ದ



ಉದ್ದಿಮೆಗಳನ್ನು - ಕೃಷಿಯನ್ನು ನಾಶ ಮಾಡುತ್ತಾ - ಬದುಕನ್ನು ಕಸಿಯುತ್ತಿವೆ. ಲಾಭಗಳಿಕೆ- ಪೈಪೋಟಿಯ ಬೆನ್ನೇರಿ ಖಾಯಂ ಉದ್ಯೋಗದ ಬದಲು ಗುತ್ತಿಗೆ ಉದ್ಯೋಗ-(Contractualisation) ವ್ಯಾಪಕವಾಗುತ್ತಿದೆ. ವಿಶ್ವವ್ಯಾಪಾರ ಸಂಘಟನೆ (ಡಬ್ಲ್ಯು.ಟಿ.ಒ.) ಒಪ್ಪಂದದ ಹಾಗೂ ವಿಶ್ವಬ್ಯಾಂಕು - ಐಎಂಎಫ್‌ನ ಶರತ್ತುಗಳು ಇವುಗಳನ್ನು ಮತ್ತಷ್ಟು ಮುಕ್ತಗೊಳಿಸುತ್ತಿವೆ.

ಸ್ವಯಂ ಉದ್ಯೋಗಕ್ಕೆಂದು ಸರ್ಕಾರದ ಸಾಲವು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಸ್ವರ್ಣಜಯಂತಿ ಗ್ರಾಮೀಣ ಸ್ವರೋಜಗಾರ ಯೋಜನೆಯಡಿ ರಾಜ್ಯದಲ್ಲಿ 1998ರಲ್ಲಿ 94,690 ಜನರಿಗೆ ಸಾಲ ನೀಡಲಾಗಿದ್ದರೆ 2003ರಲ್ಲಿ ಕೇವಲ 37,120 ಜನರಿಗೆ ಸಾಲ ನೀಡಲಾಗಿದೆ ಎಂಬುದು ಸರ್ಕಾರದ ಅಂಕಿ ಅಂಶಗಳಿಂದ ಗೊತ್ತಾಗುವ ಅಂಶ. ಸಂಘಟಿತ ವಲಯದಲ್ಲಿನ ಉದ್ಯೋಗ ಕಡಿತ, ಕಾರ್ಖಾನೆ ಮುಚ್ಚುವಿಕೆಯಿಂದಾಗಿ ಉದ್ಯೋಗಸ್ಥರು ಅಸಂಘಟಿತ ವಲಯಕ್ಕೆ ದೂಡಲ್ಪಡುತ್ತಿದ್ದಾರೆ. ಸಮರ್ಪಕ ಉದ್ಯೋಗ (Decent Job) ಎನ್ನುವುದು ಇಲ್ಲವಾಗುತ್ತಿದೆ. ಉದ್ಯೋಗ ಕಡಿತವನ್ನೆ ಜನಪ್ರಿಯಗೊಳಿಸುವ ಕೆಲಸವನ್ನು ಮಾಡಲಾಗುತ್ತಿದೆ. ಉದಾ: ಕಂಡಕ್ಟರ್ ರಹಿತ ಬಸ್‌ಗಳ ಹೆಸರು ಜನಪ್ರಿಯಗೊಳಿಸುವುದು.

ಬಂಡವಾಳ ಹಾಗೂ ಬಂಡವಾಳಶಾಹಿ ವ್ಯವಸ್ಥೆ ಲಾಭಕ್ಕಾಗಿ, ಕಡಿಮೆ ಕೂಲಿಗೆ ದುಡಿಮೆಗೆ ಹಚ್ಚುವ ಸಲುವಾಗಿ ನಿರುದ್ಯೋಗಿ ಸೈನ್ಯವನ್ನು ನಿರ್ಮಿಸಿಟ್ಟುಕೊಳ್ಳುತ್ತದೆ ಎಂಬ ವೈಜ್ಞಾನಿಕ ಸತ್ಯ ಹೆಚ್ಚೆಚ್ಚು ದೃಢಗೊಳ್ಳುತ್ತಿರುವ ಕಾಲ ಸಾಮ್ರಾಜ್ಯಶಾಹಿ ಜಾಗತೀಕರಣದ ಇಂದಿನ ಕಾಲ. ಇಂತಹ ನಿರುದ್ಯೋಗದ ವಿರುದ್ಧದ, ಸಂಘಟಿತ ಹೋರಾಟ ಇಂದಿಗೆ ಅಗತ್ಯ.

ಕಳೆದ 2004ರ ಮೇ ಚುನಾವಣೆಗಳಲ್ಲಿ ಮತ ಚಲಾಯಿಸಿದ ಅರ್ಧಕ್ಕೂ ಹೆಚ್ಚು ಮತದಾರರು ಯುವಜನತೆ, ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಉದ್ಯೋಗ ರಹಿತ ಬೆಳವಣಿಗೆಯನ್ನು ಉದ್ಯೋಗ ನಾಶದ ಬೆಳವಣಿಗೆಯಾಗಿ ಮಾರ್ಪಾಟಾಗುವುದಕ್ಕೆ ಅನುವುಗೊಳಿಸಿದ ಕಾರಣ, ಯುವಜನತೆಗೆ ನಿರುದ್ಯೋಗ ದೊಡ್ಡ ಪ್ರಶ್ನೆಯೂ ಆಗಿದ್ದ ಕಾರಣ, ಆ ಸರ್ಕಾರವನ್ನು, ಅಂದರೆ ಇಂತಹ ನೀತಿಗಳನ್ನೆ ಅನುಸರಿಸಿದ ಎಲ್ಲಾ ಸರ್ಕಾರಗಳನ್ನು ಸೋಲಿಸಿದ್ದಾರೆ. ಪರಿಣಾಮವಾಗಿ ಬಂದಿರುವ ನೂತನ ಸರ್ಕಾರಗಳು ಉದ್ಯೋಗ ಸೃಷ್ಟಿ ಆಧಾರಿತ ಬೆಳವಣಿಗೆಗೆ ಒತ್ತು ನೀಡಬೇಕಿದೆ. ಈ ನಿಟ್ಟಿನಲ್ಲಿ ಉದ್ಯೋಗ ಸೃಷ್ಟಿಸುವ ಯೋಜನೆಗಳನ್ನು ವ್ಯಾಪಕಗೊಳಿಸುವ ಹೊಣೆಗಾರಿಕೆ ಆಳುವ ಸರ್ಕಾರಗಳ ಮೇಲಿದೆ. ಇಂತಹ ನೀತಿಗಳಿಗಾಗಿ ಬೃಹತ್ ಆಂದೋಲನ ನಡೆಸಬೇಕಾದ ಚಾರಿತ್ರಿಕ ಹೊಣೆಗಾರಿಕೆ ಜನರ ಮೇಲೆ, ವಿಶೇಷವಾಗಿ ಯುವಜನರ ಮೇಲಿದೆ.

ಯುಗ ಚೇತನ, ರಸಋಷಿ
ಕುವೆಂಪುರವರ ಸಾಹಿತ್ಯ ಸತ್ವ
ಎಂಥದ್ದು, ಅವರ ಸಾಹಿತ್ಯದ ಒಟ್ಟಂದ
– ದನಿ – ನೆಲೆ ಏನು ಎಂದು
ವಿಶ್ಲೇಷಿಸುವ ಮಹತ್ವದ ಲೇಖನ
ಖ್ಯಾತ ಬಂಡಾಯ ಸಾಹಿತಿಗಳು ಮತ್ತು
ವಿಮರ್ಶಕರೂ ಆದ
ಡಾ. ಆರ್.ವಿ.ಭಂಡಾರಿಯವರಿಂದ



ನವೋದಯದ ತುಮುಲದ ರನ್ನಗನ್ನಡಿ
ಕುವೆಂಪು

'ಕಾನೂರು ಹೆಗ್ಗಡತಿ' ಕಾದಂಬರಿಯ ಹಳತು ಹೊಸತು ಸೇರಿದರೆ' ಎಂಬ ಅಧ್ಯಾಯದಲ್ಲಿ 'ಹೆಗ್ಗಡತಿ'ಯ ಕಥಾನಾಯಕ ಹೂವಯ್ಯ ಅಗ್ರಹಾರದ ಜೋಯಿಸರ ಮಧ್ಯೆ ನಡೆದ ಚಿಕ್ಕ ಸಂಭಾಷಣೆ ಒಂದು ಪ್ರಾತಿನಿಧಿಕ ಪ್ರಸಂಗವಾಗಿದ್ದು, ನವೋದಯುದ ಕಾಲಘಟ್ಟದ ಸುಧಾರಣಾವಾದಿ ಸಿದ್ಧಾಂತದ ಒಟ್ಟಂದದ ಚಿತ್ರವನ್ನು ಹಿಡಿದುಕೊಡುತ್ತದೆ. ಆನೆಯನ್ನು ಕನ್ನಡಿಯಲ್ಲಿ ಹಿಡಿದಂತೆ.

ಮೈಸೂರಿನಿಂದ ಮನೆಗೆ ಕಾನೂರಿಗೆ ಹೊರಟ ಹೂವಯ್ಯ ಗಾಡಿ (ಎತ್ತಿನಬಂಡಿ) ಕೆಳಗೆ ಬಿದ್ದು ಬೆನ್ನು ನೋವಾಗಿ ಮುತ್ತಳ್ಳಿಯ ಸಿಂಗಪ್ಪಗೌಡರಲ್ಲಿ ಇರಬೇಕಾಗುತ್ತದೆ. ಅಲ್ಲಿಗೆ ಬೇರೆ ಕಾರಣ ನಿಮಿತ್ತ ಅಗ್ರಹಾರದ ಜೋಯಿಸರು ಬರುತ್ತಾರೆ. ಅವರಿಗೆ ಜಗಲಿಯು ಮೇಲೆ ಮಲಗಿದ ಹೂವಯ್ಯನನ್ನು ನೋಡಿದೊಡನೆ ಜಿಗುಪ್ಸೆಯಾಗುತ್ತದೆ. ಯಾಕೆಂದರೆ ಅವರ ಪೌರೋಹಿತ್ಯದ ಮೌಢ್ಯಕ್ಕೆ ಆತ ವಿರೋಧಿಯಾಗಿದ್ದನು. ಅಲ್ಲದೆ ಉಪನಿಷತ್-ಭಗವದ್ಗೀತೆಗಳು ತಮಗಿಂತ ಆತನಿಗೇ ಚೆನ್ನಾಗಿ ತಿಳಿದಿದ್ದವು ಎಂಬ ಈರ್ಷೆ ಅವರದ್ದು. ಅವರು ಪ್ರಸಾದ ನೀಡಿ, ನೋವು ಕಡಿಮೆಯಾಗಲು ಮಂತ್ರಮಾಡಿ, ತಾಯಿತ ಕಟ್ಟಿ, ಗ್ರಹಗತಿಯನ್ನು ಬದಲು ಮಾಡಿ ಗುಣಪಡಿಸುವುದಾಗಿ ಹೇಳಿದರು. ಹೂವಯ್ಯನು ನಕ್ಕು ಹಾಸ್ಯಮಾಡಿಬಿಟ್ಟನು. ಜೋಯಿಸರಿಗೂ ಅವನಿಗೂ ನಾಲ್ಕು ಮಾತಾಯಿತು.

ಜೋಯಿಸ : " ಹೂವಯ್ಯ ನಿನಗೆ ಈ ಬುದ್ಧಿ ಒಳ್ಳೆಯದಲ್ಲ. ಹಿಂದಿನಿಂದ ನಡೆದುಬಂದ ಆಚಾರ, ದೇವರು, ವೇದಶಾಸ್ತ್ರಗಳನ್ನು ಅಲ್ಲಗಳೆಯುವ ನಿನಗೆ ಕೇಡು ತಪ್ಪಿದ್ದಲ್ಲ."

ಹೂವಯ್ಯ : "ನೀವು ತಿಳಿದಿರುವವರೆಂದುಕೊಂಡು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ. ನೋವಾದರೆ ಔಷದಿ ಮಾಡಿಸಿ ಎಂದು ಹೇಳುವ ಬದಲು

ಡಾ. ಆರ್.ವಿ.ಭಂಡಾರಿ

ಮಂತ್ರ ಹಾಕಿಸಿ ಎಂದು ಹೇಳುತ್ತಿದ್ದರಲ್ಲಾ!"

ಜೋಯಿಸ : "ಏನಯ್ಯಾ, ನಿನ್ನ ತಂದೆ ಎಷ್ಟು ಗೌರವದಿಂದ ನೋಡಿಕೊಳ್ಳುತ್ತಿದ್ದನು. ಅವನಿಗೆ ದೇವರಲ್ಲಿ ಎಷ್ಟೊಂದು ಭಯ, ಭಕ್ತಿ! ನೀನು ಚಿಕ್ಕವನಿದ್ದಾಗ ನಾನೇ ಎಷ್ಟೋ ಸಾರಿ ಚೀಟಿ, ವಿಭೂತಿ ಕೊಟ್ಟಿದ್ದೇನೆ"

ಹೂವಯ್ಯ : "ಜೋಯಿಸರೇ, ದಯವಿಟ್ಟು ಕ್ಷಮಿಸಿ, ನಾನು ಮಾತಾಡಿದ್ದು ನಿಮ್ಮ ಮೇಲಿನ ಅಗೌರವದಿಂದಲ್ಲ. ನಿಮ್ಮ ತತ್ವಗಳಿಂದ ಜನರಿಗೆಷ್ಟು ಹಾನಿಯಾಗುತ್ತದೆ ಎಂದು ಹೇಳಿದೆನಷ್ಟೆ. ನಿಮ್ಮ ಮನಸ್ಸಿನಲ್ಲಿ ಕೃತ್ರಿಮತೆ ಇಲ್ಲದ ಮಾತ್ರಕ್ಕೆ ನೀವು ಹೇಳುವುದೆಲ್ಲ ಸತ್ಯವಾಗಲಾರದು. ನಮ್ಮ ತಂದೆ ಶ್ಲೇಷ್ಮ ಜ್ವರದಿಂದ ನರಳುತ್ತಿದ್ದಾಗ ನಿಮ್ಮ ಪೂಜೆ, ಮಂತ್ರ ತಂತ್ರಗಳಿಗೋಸ್ಕರ ವಾಗಿಯಲ್ಲವೇ ಅವರು ಅಂಗಳಕ್ಕಿಳಿದು ಬಂದು ತುಳಸೀ ಪೀಠದ ಮುಂದೆ ಕುಳಿತು ತಣ್ಣೀರು, ತಂಗಾಳಿಗಳ ಸೋಂಕಾಗಿ ರೋಗ ಮತ್ತೂ ವಿಷಮವಾಗಿ ಕಡೆಗೆ ತೀರಿಕೊಂಡಿದ್ದು! ಆಸ್ಪತ್ರೆಯಲ್ಲಿ ಅಂತಹ ರೋಗಿಯನ್ನು ಅಲುಗಾಡುವುದಕ್ಕೆ ಬಿಡುತ್ತಾರೆಯೇ?..... ದಯವಿಟ್ಟು ಕ್ಷಮಿಸಿ ನಮ್ಮ ತಂದೆ ಗೌರವಿಸಿದ ನಿಮ್ಮನ್ನು ನಾನೂ ಗೌರವಿಸುತ್ತೇನೆ".

ಈ ಪ್ರಸಂಗ ಧಾರ್ಮಿಕ ಸುಧಾರಣಾವಾದಿ ಮನೋಭಾವದ ತೀವ್ರತೆಯನ್ನು, ಮಿತಿಯನ್ನು ಮಂತ್ರ, ಪೂಜೆ ಇತ್ಯಾದಿ ಮತ್ತು ಅದಕ್ಕೆ ಇದಿರಾಗಿ ಆಸ್ಪತ್ರೆ, ಔಷಧ ಸೂಚಿಸಿದರೆ ಪರಂಪರೆಯ ಸಾತತ್ಯವನ್ನು ನಾನೂ ನಿಮ್ಮನ್ನು ಗೌರವಿಸುತ್ತೇನೆ ಎಂಬುದು ತಿಳಿಸುತ್ತದೆ.

ಬಂಗಾಲದಲ್ಲಿ ಒಂದು ಕಾಲೇಜನ್ನು ಸ್ಥಾಪಿಸಬೇಕೆಂದು ವಸಾಹತುಶಾಹಿ ಸರಕಾರ ನಿರ್ಣಯಿಸಿದಾಗ, ಹತ್ತು ಹನ್ನೆರಡು ವರ್ಷ ವ್ಯಾಕರಣ ಕಲಿಯುವುದರಲ್ಲೇ ವ್ಯರ್ಥ ಮಾಡಿಕೊಳ್ಳಬೇಕಾದ ಸಂಸ್ಕೃತ ವಿದ್ಯೆಗಿಂತ ಇಂಗ್ಲಿಷ್ ವಿದ್ಯೆ, ವಿಜ್ಞಾನ ಸದ್ಯಕ್ಕೆ ಅವಶ್ಯ

ಎಂದು ರಾಜಾರಾಂ ಮೋಹನರಾಯರು ಒತ್ತಾಯಿಸುತ್ತಾರೆ. ಮುಂದೆ ಅದು ಆಧುನಿಕತೆಯು ನವಜನಾಂಗವನ್ನು ರೂಪಿಸುವಲ್ಲಿ ಮುಖ್ಯ ಶಕ್ತಿಯಾಗುತ್ತದೆ. ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ಅಕ್ಷಯಕುಮಾರದತ್ತ, ಕೇಶವಚಂದ್ರ, ಮೊದಲಾದವರು ಇದನ್ನು ಎತ್ತಿಹಿಡಿದರು. ಒಟ್ಟಾರೆಯಾಗಿ ಹೇಳುವುದಾದರೆ ``the nineteenth century intellectuals were firm believers in t?e efficaly of enlightenment as a panacea. they traced the source of all ill in indian society, including religious superstition and social obscurantism to the general ignorance of the people. the dissemination of knowledge, therefore, occupied a central place in their programme of reform" (19ನೆಯ ಶತಮಾನದ ಬುದ್ಧಿಜೀವಿಗಳು ಭಾರತದ ಧಾರ್ಮಿಕ ಮೂಢನಂಬಿಕೆಗೆ, ಸಮಾಜವನ್ನು ಮುತ್ತಿದ ಕತ್ತಲೆಗೆ ಜ್ಞಾನಪರ್ವವೇ ರಾಮಬಾಣವೆಂದು ಅಚಲವಾಗಿ ನಂಬಿದರು. ಆದ್ದರಿಂದ ಅವರ ಸುಧಾರಣಾ ಕಾರ್ಯಕ್ರಮದಲ್ಲಿ ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಸ್ಥಾನ ಸಿಕ್ಕಿತು.


(K.N.Panikkar, Culture, Ideology, Hegemony 1998, 8)

ಇವೆಲ್ಲದರ ಪರಿಣಾಮವಾಗಿ, ಇಂಗ್ಲಿಷ್ ಶಿಕ್ಷಣದ ಬಳಿವಿಡಿದು ವಿಜ್ಞಾನ, ಆಧುನಿಕತೆಯ ಇತರ ಪ್ರಭಾವ ಸಾರ್ವತ್ರಿಕವಾಯಿತು. ಇಲ್ಲಿಯವರೆಗೆ ಶಿಕ್ಷಣಕ್ಕೆ ಬಹಿಷ್ಕೃತರಾಗೇ ಇದ್ದ ಶೂದ್ರ-ದಲಿತ ಸಮಾಜಕ್ಕೆ ಇಂಗ್ಲಿಷ್ ಶಿಕ್ಷಣ ದೊರಕುವಂತಾಗಿ ಎಲ್ಲ ಜಾತಿ-ವರ್ಗಗಳಲ್ಲಿ ಸ್ವಾಭಿಮಾನ ಜಾಗೃತಿಯಾಯಿತು.



'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬೆಟ್ಟಳ್ಳಿಯ ಕಲ್ಲಯ್ಯಗೌಡರ ಮನೆಯ ಹೆಂಗಸರು, ಮಕ್ಕಳುಗಳೆಲ್ಲ ಊರಿನ ದೇವಸ್ಥಾನಕ್ಕೆ ಹೋಗಿರುತ್ತಾರೆ. ಅಲ್ಲಿಯ ಪೂಜಾರಿ ಮಂಜಭಟ್ಟ, ಅವರಿಗೂ ದೇವಯ್ಯನಿಗೂ ನಡೆದ ಒಂದು ಸಂವಾದ ಶೂದ್ರರಲ್ಲಿಯ ಸ್ವಾಭಿಮಾನ ಜಾಗೃತಿಗೆ ಹಿಡಿದ ಕನ್ನಡಿಯಾಗಿದೆ.

ಕೆದರು ಕ್ರಾಪಿನ ತಲೆ, ಹರಳೊಂಟಿ ಹೊಳೆವ ಕಿವಿ, ಕರಿಯ ಕುಡಿಮೀಸೆ, ಹೊನ್ನುಂಗರದ ಬೆರಳು, ನಶ್ಯದ ಬಣ್ಣದ



ಕೋಟು, ಬಿಳಿಮಲ್ಲಿನ ಕಚ್ಚೆಪಂಚೆ, ಹೆಗಲ ಮೇಲಿದ್ದ ಹೊಸ ತೋಟಾ ಕೋವಿ, ಎತ್ತರದ ಬಲಿಷ್ಠಭಂಗಿ, ಕ್ರಿಸ್ತಪಾದ್ರಿಗಳ ಮೂಲಕ ಆಗತಾನೇ ಮೆಲ್ಲನೆ ಪ್ರವೇಶಿಸುತ್ತಿದ್ದ ನವ ನಾಗರಿಕತೆಯ ಸ್ಥೂಲರುಚಿಯ ಲಕ್ಷಣಗಳಿಂದ ಸಮನ್ವಿತರಾಗಿದ್ದ ದೇವಯ್ಯಗೌಡರನ್ನು ನೋಡಿ ನೆರೆದಿದ್ದವರೆಲ್ಲರು, ಹೆಂಗಸರು, ಗಂಡಸರು, ಎಲ್ಲರೂ ಬೆರಗಾದರು, ಕೆಲವರಲ್ಲಿ ಕರುಬೂ ತಲೆಹಾಕಿತ್ತು. ಹಲವರಲ್ಲಿ, ಬ್ರಾಹ್ಮಣ ದ್ವೇಷಿಯೆಂದು ಹೆಸರಾಗಿದ್ದ ಮೇಲೆ, ತಿರಸ್ಕಾರ ಭಾವವೂ ಸುಳಿಯದಿರಲಿಲ್ಲ."

ಇಂಥ ದೇವಯ್ಯನನ್ನು ನೋಡಿ ಮಂಜಭಟ್ಟ ''ಓಹೊಹೋ! ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಲ್ಲಾ! ಕಲ್ಲಯ್ಯ ಬಂದಿಲ್ಲೇನೊ? ಹುಷಾರಾಗಿದ್ದಾನಷ್ಟೆ?" ಎಂದರು.

"ಬ್ರಾಹ್ಮಣರಾದ ಅವರು ಶೂದ್ರನಾದ ತನ್ನನ್ನು 'ದೇವಯ್ಯ' ಎಂದು ಸಂಬೋಧಿಸುವುದಕ್ಕೆ ಬದಲಾಗಿ ತಮ್ಮ ಮೇಲುತನವನ್ನು ಹೆಚ್ಚುಗಾರಿಕೆಯನ್ನು ತಿಕ್ಕಿ ಉಜ್ಜಿ ತನ್ನ ಮನಸ್ಸಿಗೆ ತರುವ ಉದ್ದೇಶದಿಂದಲೇ ಕೀಳು ಜನರನ್ನು ಕರೆಯುವ ರೀತಿಯಲ್ಲಿ ದ್ಯಾವಣ್ಣ ಎಂಬುದನ್ನು, ಆ ಪ್ರಾಂತದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿತರಾಗಿದ್ದು, ಹೆಚ್ಚು ಕಡಿಮೆ ಅವರಷ್ಟೆ ವಯಸ್ಕರಾಗಿದ್ದ ತನ್ನ ತಂದೆಯನ್ನು ಗೌರವಸೂಚಕ ಬಹುವಚನದಿಂದ 'ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೇ?' ಎನ್ನದೆ 'ಕಲ್ಲಯ್ಯ ಹುಷಾರಾಗಿದ್ದಾನೆಯೇ?' ಎಂದು ಏಕವಚನದಿಂದಲೆ ಮಾತನಾಡಿಸುದುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆದುನಿಂತು 'ಸುಳ್ಳಾದರೂ ಚಿಂತೆಯಿಲ್ಲ ಈ ಹಾರುವನಿಗೆ ಸರಿಯಾಗಿಯೇ ಉತ್ತರ ಹೇಳುತ್ತೇನೆ' ಎಂದು ನಿಶ್ಚಯಿಸಿ ಲಗುವಾಗಿ ನಗುತ್ತ ಹೇಳಿದನು "ಯಾರು ಹಳೆಪೈಕದ ಕಲ್ಲನಾ? ಅಂವ ಕಳ್ಳಬಗನಿ ಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು".

"ಅಲ್ಲ ಮಾರಾಯಾ, ನಿನ್ನ ಅಪ್ಪಯ್ಯ ಕಲ್ಲಯ್ಯ ಗೌಡರು ಹುಷಾರಾಗಿದ್ದಾರೆಯೇ ಎಂದು"

"ಅಪ್ಪಯ್ಯನಾ, ನಾನು ಏನೋ ಅಂತಿದ್ದೆ! ತಪ್ಪಾಯ್ತು, ಅವರೂ ಮೇಗರೊಳ್ಳಿ ಮಿಶನ್ ಸ್ಕೂಲಿಗೆ ಹೋದರು- ರೆವರೆಂಟ್ ಲೇಕ್‌ಹಿಲ್ ದೊಡ್ಡಪಾದ್ರಿ ಬರ್ತಾರಂತೆ, ಉಪದೇಶಿ ಜೀವರತ್ನಯ್ಯ ಹೇಳಿದ್ದರು 'ಬ್ರಾಹ್ಮಣ ಕೂಣೆಯಲ್ಲಿ ಶೂದ್ರಮೀನು ಅಂತಾ ಹರಿಕಥೆ ಮಾಡ್ತಾರಂತೆ'' ಎನ್ನುತ್ತಾನೆ.(2003, ಪುಟ 43)

ಭಾವಾತ್ಮಕವಾಗಿ ಕುವೆಂಪು ಈ ತಲೆಮಾರಿನವರು ಎಂದು ಗ್ರಹಿಸಬೇಕು.

ಕುವೆಂಪು ಮೈಸೂರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಾರೆ. ಅಲ್ಲಿ ಅವರ ಕೈಗೆ ಸಿಕ್ಕುವ ಪುಸ್ತಕ ವಿವೇಕಾನಂದರದು.


ವಿವೇಕಾನಂದರು ಅದ್ವೈತ ವೇದಾಂತಿಯಾಗಿದ್ದರು. ಅಲ್ಲದೆ ಅವರು ಶೂದ್ರ ವೇದಾಂತಿಯಾಗಿದ್ದರು. ಇತಿಹಾಸ ಪುಟದಲ್ಲಿ ಇದು ಅಭೂತಪೂರ್ವ ವಾದುದು. ಹಿಂದೂ ಧರ್ಮದ

ಪುನರುಜ್ಜೀವನದಲ್ಲಿ ರಾಮಕೃಷ್ಣ ಮಿಶನ್ ಪ್ರಭಾವ ಅಧಿಕವಾದುದು ದೀರ್ಘವಾದುದು ಆಗಿದೆ.

ವಿವೇಕಾನಂದ ಹಿಂದೂ ಜಾತಿಯತೆ, ಅಸ್ಪೃಶ್ಯತೆ, ಸನ್ಯಾಸ ಮೊದಲಾದ ಸಂಗತಿಗಳನ್ನು ತೀಕ್ಷ್ಣವಾದ ವಿಮರ್ಶೆಗೆ ಒಳಪಡಿಸಿದವರು.

ಅವರೆನ್ನುತ್ತಾರೆ "ಬ್ರಾಹ್ಮಣರು ತಾವು ದಲಿತರಿಗಿಂತ ಉಚ್ಚಶ್ರೇಣಿಯವರಾಗಿ ವಿದ್ಯಾಭ್ಯಾಸ ತಮಗೆ ಅನುವಂಶಿಕ ಎಂದು ಹೇಳುವುದಾದರೆ ಅವರ ವಿದ್ಯಾಭ್ಯಾಸಕ್ಕಾಗಿ ಹಣ ವ್ಯಯಿಸಬೇಡಿ. ಅವೆಲ್ಲವನ್ನು ದಲಿತರ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಿ. ದುರ್ಬಲರಾದ ಅವರಿಗೆ ಅವಶ್ಯವಾದ ಎಲ್ಲ ಕಾಣಿಕೆಯನ್ನು ಸಲ್ಲಿಸಿ, ಆ ಶೋಷಿತರ ಬೇಕು ಬೇಡಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯತೆಯಿದೆ." "ನೀವು ಎಷ್ಟೇ ನಿಮ್ಮ ಆರ್ಯಕುಲದ ಹೆಚ್ಚಳವನ್ನು ಹೇಳಿಕೊಳ್ಳಿ, ಪ್ರಾಚೀನ ಭಾರತದ ವೈಭವವನ್ನು ಹೊಗಳಿಕೊಳ್ಳಿ, ಉಚ್ಚವರ್ಣದವರಾದ ನೀವು ನಿಮ್ಮ ಹುಟ್ಟನ್ನು ಹೊಗಳಿಕೊಳ್ಳಿ. ಆದರೆ ನೀವು ಬದುಕಿದ್ದೀರೆಂದು ತಿಳಿದುಕೊಂಡಿದ್ದೀರಾ? ನೀವು ಹತ್ತು ಸಾವಿರ ವರ್ಷಗಳ ಹಿಂದಿನ ಪಳೆಯುಳಿಕೆಗಳಾಗಿದ್ದೀರಿ. ನೀವು ತಿರುಗಾಡುವ ಹೆಣವಾಗಿದ್ದೀರಿ. ಆದರೆ ಭಾರತದ ಜೀವವೆಂದರೆ ಇಲ್ಲಿಯ ಲಕ್ಷಾಂತರ ಬಡವರು, ಕೆಳವರ್ಗದವರೇ ಆಗಿದ್ದಾರೆ. (ಬಿನೊಯ್ ಕೆ.ರೋಯ್ Socio-Political Views of Vivekanada - 1983... ಪುಟ 30) ಹಾಗೆಯೇ "ಬಾಹ್ಯ ಮತ್ತು ಆಂತರಿಕ ಶಕ್ತಿ ಪರಸ್ಪರ ಪ್ರಚೋದಿಸುತ್ತವೆ. ಒಂದನ್ನೊಂದು ಸಂಲಗ್ನವಾಗುತ್ತದೆ. ಆದ್ದರಿಂದ ಭೌತವಸ್ತು ಮತ್ತು ಮನಸ್ಸು ಬೇರೆಬೇರೆಯಲ್ಲ ಮನಸ್ಸು ವಸ್ತುವಾಗಿ, ವಸ್ತು ಮನಸ್ಸಾಗಿ (ಚೇತನ) ಬದಲಾಗುತ್ತದೆ. ಅವೆಲ್ಲದರ ಮೂಲ ಪ್ರಕೃತಿಯೇ, ಅದು ಪ್ರಕಟವಾಗುವ ಪ್ರಮಾಣದಲ್ಲಿ ವ್ಯತ್ಯಾಸವಿದೆಯೇ ಹೊರತು ಮೂಲದಲ್ಲಲ್ಲ' ಎಂದು ಅಭಿಪ್ರಾಯಪಡುತ್ತಾರೆ. (W.Brodov - Indian Philosopy in Modern Times 1984: 214)

ಇದು ಭಾರತೀಯ ತತ್ವಜ್ಞಾನ (ವೇದಾಂತ)ವನ್ನು ವೈಜ್ಞಾನಿಕರಿಸುವಂತೆ ತೋರಬಹುದಾದರೂ ಇದು ಮಾಡುವ ವೈಚಾರಿಕ ಪ್ರಭಾವ ಸಣ್ಣದಲ್ಲ. ಹಾಗೆ ಕೇಳಿದರೆ ಚೈತನ್ಯವಾದ -ಭಾವನಾವಾದ ಭೌತವಾದದ ಕಡೆ ಹೆಜ್ಜೆಯಿಟ್ಟ ಬಗೆ ಎಂದರೂ ಸಲ್ಲುತ್ತದೆ. ತತ್ವಜ್ಞಾನದ ಈ ಸಿದ್ಧಾಂತದ ಪ್ರಭಾವ ಕುವೆಂಪು ಅವರ ಮೇಲೆ ಬಲವಾಗೇ ಆಗಿದೆ. ಅವರ ಅನೇಕ



ಕವನಗಳ ಅಭಿವ್ಯಕ್ತಿಯುಲ್ಲಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗಾಗಿ 'ಶರತ್ಕಾಲದ ಸೂರ್ಯೋದಯ' ಕವಿತೆ ಅಂತ್ಯವಾಗುವುದು.

ಹಾಸಿಗೆಯಂದದಿ ಬಯಲನು ತಬ್ಬಿ
ಹಚ್ಚನೆ ಹಸುರದು ಹಸಿಹಸಿ ಹಬ್ಬಿ
ಪಚ್ಚೆಯ ವೇದಿಕೆಯಾಗಿತ್ತು
ಹುಲ್ಲಿನ ಮೇಗಡೆ ಇಬ್ಬನಿ ರಾಶಿ
ಶಿಶುರವಿ ರುಚಿಯಲಿ ನಗನಗ ಸೂಸಿ
'ಉರಿಕಿಡಿ' 'ಕಿಡಿಉರಿ' ಆಗಿತ್ತು.

'ಕಲಾ ತಪಸ್ವಿ' ಕವನದಲ್ಲಿ ಜಡವೇ ಚೇತನವಾಗಿ ಬೆಳೆಯುವ ಬಗೆ ಮೈದಳೆದಿದೆ. "ಎಲ್ಲಾ ಜಡತೆಯ ಬಯಕೆ ಚೈತನ್ಯ ಸಿದ್ಧಿಯೈ" ಎನ್ನುತ್ತದೆ ಅದು. ಹಾಗೆಂದರೂ ಅಲ್ಲಿ ಭಾವನಾವಾದದ ನಿಲುವು ಕಳೆದುಹೋಗುವುದಿಲ್ಲ. ಇವೆಲ್ಲಕ್ಕೂ ಮೇಲೆ ನಾನು ಎನ್ನುವುದು ಇದ್ದುಬಿಡುತ್ತದೆ.

ಈ ಭೌತ ಮತ್ತು ಆಧ್ಯಾತ್ಮಕತೆಯ ಕುರಿತು ಕುವೆಂಪು it is regular confusion (ಸಮಗ್ರ ಸಂಪುಟ -2, 2003 ಪುಟ 1042) ಹೇಳಿರುವುದು ಸಾಕ್ಷಿಯಾಗಿದೆ. ಇದಕ್ಕೆ ಜ್ವಲಂತ ಸಾಕ್ಷಿಯಾಗಿ ಅವರ 'ಜನನಿಗೆ' ಕವನ ನೋಡಬೇಕು.


ಸಂದರ್ಭ ಹೇಗಿದೆ. ಅವರ ತಾಯಿ ಸತ್ತಾಗ ಅವರು ತಾಯಿಯ ಕೊನೆಯನ್ನು ನೋಡಲು ಸಹ ಹೋಗುವುದಿಲ್ಲ. ಯಾಕೆಂದರೆ ಆತ್ಮ ಅವಿನಾಶಿ. ದೇಹ ಮಾತ್ರ ಬದಲಾಗುವುದು ಎಂಬ ಆಧ್ಯಾತ್ಮವಾದವನ್ನು ನಂಬಿ ಬೀಗಿಕೊಂಡಿದ್ದರು. ಇದಾದ ಬಹುಕಾಲದ ನಂತರ ಅವರು ಸತ್ತ ತಾಯಿಯನ್ನು ನೆನೆಸಿಕೊಂಡು ಬರೆಯುವ ಕವನದಲ್ಲಿ,

ಜನನಿಯೇ ವರುಷವೇಳರ ಹಿಂದೆ ನೀನಗಲಿ
ಹೋದೆ; ಕಣ್ಮರೆಯಾದೆ............
ನೀನು ಮಡಿದಂದು ನಾನದ್ವೈತ ದರ್ಶನದ
ಮದಿರೆಯಲಿ ಮುಳುಗಿದ್ದೆ ನನ್ನ ಕಿರುಬಾಳಿನಲಿ
ನನ್ನದಲ್ಲದ ಶಕ್ತಿಯೊಂದಿರುತ್ತಿತ್ತು........

ಇಲ್ಲಿ 'ನಾನದ್ವೈತದರ್ಶನದ ಮದಿರೆಯಲಿ ಮುಳುಗಿದ್ದೆ' ಎಂಬುದನ್ನು ಗಮನಿಸಬೇಕು. ಅಂತಿಮವಾಗಿ ಆಧ್ಯಾತ್ಮವೆನ್ನುವುದು ಅಫೀಮಿನ ಹಾಗೆ' ಎಂಬ ಕಾರ್ಲ್‌ಮಾರ್ಕ್ಸ್‌ನ ಮಾತು ಅವರಿಗೆ ಅಪರಿಚಿತವಾದುದಲ್ಲ. ಅಂದರೆ ಪರಿಚಯವಿದ್ದು ಅದೇ ಶಬ್ದವನ್ನು ಬಳಸಿರುವುದು ಬಹಳ ಮಹತ್ವದ ಸಂಗತಿ ಎಂಬುದನ್ನು ಮರೆಯಬಾರದು.

ಕುವೆಂಪು ಅವರ ಮೇಲೆ ಆದ ಮತ್ತೊಂದು ಮಹತ್ವದ ಪ್ರಭಾವವೆಂದರೆ ಸಮಾಜವಾದಿ ಇತಿಹಾಸದಲ್ಲೆ ಒಂದು ಅಭೂತಪೂರ್ವ ರಾಜಕೀಯ ವಿದ್ಯಮಾನ ಪ್ರಕಟಗೊಂಡಿತು. ಇದರಿಂದ ಸ್ಫೂರ್ತಿಗೊಂಡ ಅವರ ಕವನಗಳು ನಮ್ಮ ಮುಂದಿವೆ.

'ಲೆನಿನ್' ಎಂಬ ಅಷ್ಟಷಟ್ಪದಿ ಈ ಪ್ರಭಾವದ ಉಜ್ವಲ ಪ್ರತೀಕವಾಗಿದೆ. ಈ ಕವನದ ಯಾವ ಸಾಲನ್ನು ಉದ್ಧರಣೆ ಮಾಡಬೇಕು ಎಂಬ ಆಯ್ಕೆಯೇ ಅಸಾಧ್ಯವಾಗುವಷ್ಟು ಮಗ್ನವಾಗಿದೆ.



ಧಮನಿಯಲಿ ಬಿಸಿನೆತ್ತರುಕ್ಕದ

ನೆನೆಯಲಾರೆ
ನಿನ್ನಂ, ಲೆನಿನ್! ನಿನ್ನ ಹೆಸರದು ಸಿಡಿಲ್ ಸದ್ದು
ದೊರೆಗಿವಿಗೆ;

ಪ್ರಭುತ್ವವನ್ನೇ ಬದಲಿಸಿದ ಹೆಸರೇ ಲೆನಿನ್ ಅಂತೆಯೇ ಲೆನಿನ್‌ನ ಹೆಸರು ದೊರೆಯ ಕಿವಿಗೆ ಸಿಡಿಲಂತೆ. ಅಂತೆಯೇ ಅದು ದೊರೆತನ ಎಂಬ ಒಂದು ರಾಜಕೀಯ ಪರಂಪರೆಗೆ ಅದು ಸಿಡಿಲ್ ಸಿಡಿತವಾಗಿದೆ. ಆದ್ದರಿಂದ ಲೆನಿನ್ ಒಬ್ಬ ಕ್ರಾಂತಿಕಾರಿ ವ್ಯಕ್ತಿಮಾತ್ರವಲ್ಲ. ಸಮಾಜದ ಪುನರ್ಘಟನೆಯ ಅದ್ಭುತ ಕ್ರಿಯೆಗೆ ಪ್ರತಿಮೆ ಆಗುತ್ತಾನೆ.

ಜಮದಗ್ನಿ, ಸುತನಂತೆ ನೀನು ಪಾರ್ಥಿವ ಕುಲಕೆ ಬಡವಾಗ್ನಿ
ದುಡಿವ ದೀನರ ದೈವವನ್ಯರ್ಗೆ ಯಮದಂಡ?.....
ರಕ್ತದ ಗಂಗೆ
ಸಿರಿನಾಳದಿಂ ಮರಳಿ ಬಡತನದೊಣಗು ಮೈಗೆ
ಹರಿದಕ್ಕೆ ಕೂಲಿರೈತರ ಕೈಗೆ!

ಲೆನಿನ್ ಎಸಗಿದ ಕ್ರಾಂತಿ ರಕ್ತಕ್ರಾಂತಿ ಎಂಬುದನ್ನು ಗಮನಿಸಬೇಕು. ಆ ಕ್ರಾಂತಿಯಿಂದ ಬಡವರ ಒಣಗಿದ ಮೈಗೆ ಸಿರಿವಂತರ ನಾಳದಿಂದ ಹರಿದುಬಂದಿದೆ. ಇದನ್ನು ಕವಿ ರಕ್ತದ ಗಂಗೆ ಎಂದು ಬಣ್ಣಿಸುತ್ತಾನೆ. 'ಗಂಗೆ' ಎನ್ನುವುದು ದೇವನದಿ. ಅದು ಪವಿತ್ರವಾದುದು. ಸ್ವರ್ಗದಿಂದ ಭೂಮಿಗೆ ಧುಮುಕುತ್ತಿದ್ದು, ಹಾಗೆ ಅದು ಧುಮುಕಿದ್ದು ಭಗೀರಥನ ದೀರ್ಘತಪಸ್ಸಿನಿಂದಾಗಿ, ದುರ್ಮರಣ ಹೊಂದಿದವರನ್ನು ಉದ್ಧರಿಸಲಿಕ್ಕೆ. ಇಲ್ಲಿ ಲೆನಿನ್ ಉದ್ಧಾರಕವಾದ ಕ್ರಾಂತಿಗೆ ಒಂದು ದಿವ್ಯ ಪ್ರತೀಕವಾಗುತ್ತಾನೆ.

ಸಮಾಜವಾದಿ ಜೀವನ ರೀತಿಯನ್ನು 'ಹೊಸಬಾಳಿನ ಗೀತೆ'ಯಲ್ಲಿ

ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು'
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!'

ಎನ್ನುತ್ತಾರೆ. 'ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು' ಎಂಬುದು ಎಲ್ಲರ ನಾಲಿಗೆಯ ಮೇಲೆ ಕುಣಿಯುವ ನುಡಿನಾಣ್ಯವಾಗಿದೆ. ಅಲ್ಲಿ ಮನುಷ್ಯರ ಕ್ರಿಯಾಪರ್ವವನ್ನು



ಎತ್ತಿಹಿಡಿಯುತ್ತ 'ದೇವರನ್ಯಾಯವನ್ನು ಮಾನವರೆ ತಿದ್ದಿ!'ಎನ್ನುತ್ತಾರೆ. ದೇವರ ಅನ್ಯಾಯ ಎಂದರೆ ನಮ್ಮ ಬಡತನಕ್ಕೆ, ಮೇಲು-ಕೀಳು ಜಾತಿ ವಿಭಜನೆಗೆ ಬೆನ್ನೆಲುಬಾದ ಕರ್ಮಸಿದ್ಧಾಂತವಾಗಿದೆ. ಕರ್ಮಸಿದ್ಧಾಂತಕ್ಕೆ ದೈವತ್ವದ ಬೆಂಬಲವಿದೆ. ಇದನ್ನು ಮನುಷ್ಯರು ತಿದ್ದಿದ್ದಾರೆ. ಅಂದರೆ ಮನುಷ್ಯ ತನ್ನ ಹಣೆಬರಹವನು ತಾನೇ ತಿದ್ದುಕೊಳ್ಳುವ ಬಗೆಯಿದು. ಇದರ ಪರಿಣಾಮ.

"ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು" ಎನ್ನುತ್ತಾರೆ. ಇಲ್ಲಿ 'ರಕ್ತದಬಿಂದು' ಎಂಬುದನ್ನು ಸಮಾಜದ



ಪುನರ್ಘಟನೆಗೆ ಸಾಧನವಾಗುವ ಕ್ರಿಯೆ ಎಂದು ಅರ್ಥಮಾಡಬೇಕು. ಯಾಕೆಂದರೆ ರಕ್ತದ ಬಿಂದು ಇರುವಲ್ಲೆಲ್ಲ ಕ್ರಾಂತಿ ಆಗಿಬಿಡುವುದಿಲ್ಲ. ಕ್ರಾಂತಿ ಎಂಬುದು ಪ್ರಸ್ತುತ ಸಂದರ್ಭದಲ್ಲಿ ಸಮಾಜವಾದಿ ಕ್ರಾಂತಿ' ಎಂದರ್ಥ. ಅದು ರಕ್ತಹರಿಸುವ ಮೂಲಕವೇ ಆಗಬೇಕೆಂದು ಕವಿಯ ಹಟವೂ ಅಲ್ಲ; ಅವರ ಮೂಲ ಮಾನವನಾದ ಕಾರ್ಲ್‌ಮಾರ್ಕ್ಸ್‌ನ ಹಟವೂ ಅಲ್ಲ. ಕ್ರಾಂತಿ ತೆಗೆದುಕೊಳ್ಳುವ ವಿಧಾನ ಒಂದು ಚಾರಿತ್ರಿಕ ಸಂದರ್ಭವನ್ನು ಅವಲಂಬಿಸಿರುತ್ತದೆ ಎಂಬುದನ್ನು ಮರೆಯಬಾರದು. ಜನರ ಸಮ್ಮತಿ ಪಡೆದು ರಕ್ತರಹಿತವಾಗಿ ಕ್ರಾಂತಿ ಸಂಭವಿಸುವುದೇ ಪ್ರಜಾಪ್ರಭುತ್ವದ ಬಗೆ ಎಂದು ಡಾ.ಅಂಬೇಡ್ಕರ್ ಹೇಳುವರು. ಆದರೆ ಅದಾಗದಿದ್ದರೆ ಜನ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಾರು ಎಂಬ ಎಚ್ಚರಿಕೆಯನ್ನು ಅವರೇ ಕೊಟ್ಟಿದ್ದಾರೆ.

ಆದ್ದರಿಂದಲೇ ಅವರು ತರುಣರಿಗೆ ಕ್ರಿಯಾಶೀಲತೆಯ ಒಸಗೆಯನ್ನು ಕೊಡುತ್ತಾರೆ.
ಹೋಗುತಿದೆ ಹಳೆಗಾಲ ಹೊಸಕಾಲ ಬರುತಲಿದೆ' ಎನ್ನುತ್ತಾ
ಮೊನ್ನೆ ಮೊನ್ನೆಯವರೆಗೂ ಪಶ್ಚಿಮದ ಹೊಲಗೇರಿ
ಇಂದು ನಂದನವಾಗಿ ನಗುತಲಿದೆ ರಷ್ಯಾ
ಗರ್ಜಿಸಲು ತೊಡಗಿಹುದು ಕೇಸರಂಗಳ ಕೆದರಿ
ಇದುವರೆಗೆ ಮಲಗಿ ನಿದ್ರಿಸುತ್ತಿದ್ದ ಏಷ್ಯಾ
ತರುಣರಿರ, ಎದ್ದೇಳಿ, ಎಚ್ಚರಗೊಳ್ಳಿ! ಕೇಳಿ!

ಎನ್ನುತ್ತಾರೆ.

ಇದು ಭಾರತದ ಸ್ವಾತಂತ್ರ್ಯದ ಕರೆ ಕೂಡ ಹೌದೆಂಬುದನ್ನು ಮರೆಯಬಾರದು. ಅದರಂತೆ ರಾಜಕೀಯ ಹೋರಾಟ ಅಥವಾ ಸ್ವಾತಂತ್ರ್ಯ ಹೋರಾಟಕ್ಕೂ ಸಮಾಜದ ಆಂತರಿಕ ನಡತೆಗೂ ಅವಿನಾ ಸಂಬಂಧವಿದೆ ಎಂಬುದನ್ನು ಮರೆಯಬಾರದು.

ಹೀಗೆ ಹೇಳಿದೊಡನೆ ರಷ್ಯಾದಲ್ಲಿ ಆದುದನ್ನೆಲ್ಲ ಒಪ್ಪಿಕೊಂಡುಬಿಡಬೇಕು. ಅದೇ ಮನುಷ್ಯಕುಲಕ್ಕೆ ಆದರ್ಶ ಎಂಬ ಕುರುಡು ನಂಬಿಕೆಯೇನೂ ಕುವೆಂಪು ಅವರದ್ದಲ್ಲ. ಕ್ರಾಂತಿಯ ನಂತರದ ರಷ್ಯಾದ ಎಲ್ಲ ಘಟನೆಗಳನ್ನು ಕುವೆಂಪು ಎತ್ತಿಹಿಡಿಯುತ್ತಿಲ್ಲ.

'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಎಂಬ ಕವನದಲ್ಲಿ ಕ್ರಾಂತಿ ನಂತರದ ಕ್ರಿಯೆಯನ್ನು ಬೆಚ್ಚಿಬೀಳುವಂತೆ ವ್ಯಂಗ್ಯಕ್ಕೆ ಒಳಪಡಿಸುತ್ತಾರೆ. ಕವಿ ಸ್ವಪ್ನದಲ್ಲಿ ರಷ್ಯಾಕ್ಕೆ ಹೋಗಿದ್ದಾರೆ. ಅಲ್ಲಿ ಯಂತ್ರ ನಾಗರೀಕತೆ ಎಲ್ಲೆಂದರಲ್ಲಿ ಹರಡಿತ್ತು.

'ಪ್ರತಿಯೊಂದು ಮಾನವನು ಯಂತ್ರದಂತಿದ್ದಾನೆ" ಎಂದು ಹೇಳುತ್ತಾರೆ. ಮುಂದೆ ಒಂದು ಕರಡಿ ಕಪಿಗಳ ಹಿಂಡು ಕಾಣುತ್ತದೆ. ಅದೇನೆಂದು ಮಾರ್ಗದರ್ಶಿಯನ್ನು ಕವಿ ಕೇಳುತ್ತಾರೆ.

"ಹೇಳಿದನು ಅವನು ಕನಿಕರದ ನಗೆಗೂಡಿ
ಪೆಚ್ಚಾದ ನನ್ನ ಮೋರೆಯ ತಿವಿದು ನೋಡಿ
'ನರರಾದರೇನಂತೆ ಮೃಗವಾದರೇನಂತೆ?
ರಷ್ಯದಲಿ ಸೋಮಾರಿಗೆಡೆಯಿಲ್ಲ, ಕೂಳಿಲ್ಲ;
ಪ್ರಾಣಿಗಳಿಗೂ ಇಲ್ಲಿ ಸಾಮ್ಯವಾದದ ಚಿಂತೆ!
ಬಾಳೆಂಬುದೊಂದು ನಿಷ್ಕರುಣಮಿಲ್ಲ.!

ಮುಂದೆ ಕವಿಗೆ ಒಂದು ಕೋಗಿಲೆಯ

ನರಳು ಸದ್ದು ಕೇಳುತ್ತದೆ. ಅವರಲ್ಲಿ ಸಂಭಾಷಣೆ ನಡೆಯುತ್ತದೆ. ಕೋಗಿಲೆ ತನ್ನ ಗೋಳನ್ನು ತೋಡಿಕೊಳ್ಳುತ್ತದೆ. ಅಲ್ಲಿ ಕೋಗಿಲೆಯೊಂದು ಕರ್ರಗೆ ಹುದುಗಿ ಕೂತಿತ್ತು ಕ:ಪದಾರ್ಥವದಾಗಿ.

"ಕವಿವರ್ಯ ಇದುವರೆಗೆ ಸಂಸಾರ ಕಷ್ಟಗಳನಳಿದು
ಸುಖಗಳನೆ ಮಾತ್ರ ತಿಳಿದು
ವನವನವ ಸಂಚರಿಸಿ ಹಾರಾಡಿ ಹಾಡಿ
ಹಣ್ಣು ಹಂಪಲ ತಿಂದು ಬೇಟದಲಿ ಜತೆಗೂಡಿ,
ಕಾಗೆಗಳ ಗೂಡಿನಲಿ ಮೋಸದಿಂ ಮೊಟ್ಟೆಯಿಟ್ಟು
ಮರಿಗಳಾರೈಕೆಯನು ಅವುಗಳಿಗೆ ಬಿಟ್ಟು
ನಲಿದಿದ್ದೆ ಕವಿಸ್ತುತಿಯ ಸೂರೆ ಮಾಡಿ

ಎಂದು ಬದಲಾದ ಸ್ಥಿತಿಯನ್ನು ಹೇಳುತ್ತ.

ಕಾಗೆಗಳೊ, (ಬುದ್ಧಿಯಿಲ್ಲದ ಪೆದ್ದ ಪ್ರೊಲೆಟೇರಿಯಟ್ಟು!)
ಚೈತ್ರದಲಿ ರಟ್ಟಾಗುವನ್ನೆಗಂ ಗುಟ್ಟು
ತಮ್ಮ ಮರಿಗಳ ಕೂಳನನ್ಯರ್ಗೆ ಗುಟುಕುಕೊಟ್ಟು
ಕೋಳುಹೋಗುತ್ತಿದ್ದವೆಂದು ಜ್ಹಾರ್ ಇದ್ದಯುಗದಲ್ಲಿ!"ಎನ್ನುತ್ತದೆ.

ಕೊನೆಗೆ ಅದು ತನ್ನ ಮೊಟ್ಟೆಯೊಂದನ್ನು ಕೊಟ್ಟು ನಿಮ್ಮೂರಿಗೆ ಒಯ್ಯಿ ಎಂದು ಕೊಡುತ್ತದೆ. ಆದರೆ ಮಾರ್ಗದರ್ಶಿಯಿಂದ ಬೀಳ್ಕೊಂಡು ಬರುವಾಗ ಮೊಟ್ಟೆ ನೆಲಕ್ಕೆ ಬಿದ್ದು ಚೂರಾಯಿತು. ಆದರೆ ಅಲ್ಲಿ ಪಿಕಶಿಶುವಿರಲಿಲ್ಲ. ಬದಲಾಗಿ ಗೂಢಾಚಾರ.

"ಕೋಗಿಲೆಯ ಮೊಟ್ಟೆಯೊಳಗೂ ಕೂಡ ಸಾಮ್ಯವಾದದ ಪ್ರಚಾರ!" ಎಂದು ಕವಿತೆ ಕೊನೆಯಾಗುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಇದು ತನ್ನಿಂದ ತಾನೆ ಸೋವಿಯತ್ ಕ್ರಾಂತಿಯ ನಿರಾಕರಣೆಯಾಗುವುದಿಲ್ಲ. ಯಾಕೆಂದರೆ ಕ್ರಾಂತಿ ನಂತರದ ಸಾಮ್ಯವಾದಿ ಕಾರ್ಯಾಚರಣೆ ಕಟಕಿಗೆ ಗುರಿ ಮಾಡಿದ್ದರೂ ಕೋಗಿಲೆಯ ಜ್ಹಾರ್ ಕಾಲದ ಕತೆ ಹೆಚ್ಚು ಕಣ್ಣಿಗೆ ಕಟ್ಟುತ್ತದೆ. "ತನ್ನ ಮರಿಗಳ ಕೂಳನನ್ಯರ್ಗೆ ಗುಟುಕು ಕೊಟ್ಟು" ಮೋಸ ಹೋಗುವ ಕಾಗೆಗಳ ಕತೆ ಹೆಚ್ಚು ಪ್ರಭಾವಶಾಲಿಯಾಗಿದೆ. ಇದು ಸಾಮ್ಯವಾದದ ನಿರಾಕರಣೆಯಾಗಿರದೆ ಅತಿರೇಕದ ಕಡೆ ಮಾತ್ರ ಬೊಟ್ಟುಮಾಡಿದೆ.

ಆದ್ದರಿಂದಲೋ ಎಂಬಂತೆ ಅವರು "ಯಾವಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯುದನಿಗೂ ಮಿಗಿಲು ಶಾಸ್ತ್ರವಿಹುದೇನು? ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ನಿನ್ನೆದೆಯದನಿಯೆ ಋಷಿ. ಮನು ನಿನಗೆ ನೀನು"


ಎಂಬ ಸಾಕ್ಷಿಪ್ರಜ್ಞೆಯನ್ನು ಎಚ್ಚರಗೊಳಿಸುತ್ತಾರೆ. ಹಾಗೆಯೇ

ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈ ತನ್ನಿ
ವಿಜ್ಞಾನ ದೀವಿಗೆಯ ಹಿಡಿಯಬನ್ನಿ
ಓ ಬನ್ನಿ ಸೋದರರೇ ಬೇಗ ಬನ್ನಿ......
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ ವಿಶ್ವಪಥಕೆ!

ಕುವೆಂಪು ಅವರನ್ನು ಆಧ್ಯಾತ್ಮ ಕವಿಯೆಂದೂ, ವಿಜ್ಞಾನದ ಕವಿಯೆಂದೂ, ಸಮಾಜವಾದಿ ಕವಿಯೆಂದೂ ನಮ್ಮ ಅಭಿಪ್ರಾಯದ ಮುದ್ರೆಯನ್ನು ಒತ್ತುವ ಬದಲು ಅವರು 'ನವೋದಯ' ಆಶೋತ್ತರದ ರನ್ನಗನ್ನಡಿಯಾಗಿದ್ದರೆಂದು ಗುರುತಿಸುವುದೇ ಹೆಚ್ಚು ಸೂಕ್ತವಾದುದು. ○

ಮಾರ್ಕ್ಸ್‌ವಾದ ತತ್ವಶಾಸ್ತ್ರವಾಗಿ ಉಳಿಯುತ್ತದೆ

ತಮಿಳು ಕಥೆಗಾರ, ಜ್ಞಾನಪೀಠ ಪ್ರಶಸ್ತಿ ವಿಜೇತ ಜಯಕಾಂತನ್



ತಮಿಳಿನ ಪ್ರಸಿದ್ಧ ಕಥೆಗಾರ ಜಯಕಾಂತನ್‌ರಿಗೆ ಈ ಬಾರಿಯ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಎರಡನೇ ತಮಿಳು ಲೇಖಕ ಜಯಕಾಂತನ್. ಕನ್ನಡದಲ್ಲಿ ನಿರಂಜನರಂತೆ ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿ ತಮಿಳುನಾಡಿನಲ್ಲಿ ದೇಶಪ್ರೇಮಿ ಪ್ರಗತಿಶೀಲ ಕಥಾಸಾಹಿತ್ಯದಲ್ಲಿ ಪ್ರಮುಖ ಜನಪ್ರಿಯ ಲೇಖಕರಾದ ಜಯಕಾಂತನ್ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದರು ಹಲವು ವರ್ಷಗಳ ಕಾಲ. ಹೈಸ್ಕೂಲಿನಲ್ಲಿರುವಾಗಲೇ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಿ, ಚೆನ್ನೈಗೆ ಓಡಿಹೋದ ಜಯಕಾಂತನ್ ಕಥೆಗಾರನಾಗಿ ರೂಪು ಪಡೆದದ್ದು, ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ವಾಸಿಸುತ್ತಿದ್ದ 'ಕಮ್ಯೂನ್'ನಲ್ಲಿ. ಜಯಕಾಂತನ್‌ರ ಒಂದು ಕಿರು ಪರಿಚಯ

ಶರತ್ ಚಂದ್ರ

ಕಥಾ ಸಾಹಿತ್ಯ ಪ್ರಕಾರದಲ್ಲಿ ಜಯಕಾಂತನ್‌ರದ್ದು ದೊಡ್ಡ ಹೆಸರು- ತಮಿಳಿನಲ್ಲಿ ಮಾತ್ರವಲ್ಲ, ದೇಶದಲ್ಲೂ ಕೂಡಾ. ಕನ್ನಡದಲ್ಲಿ ಸೇರಿದಂತೆ ಇತರ ಭಾರತೀಯ ಭಾಷೆಗಳಲ್ಲಿ, ತಮಿಳು ಕಥೆಯೆಂದರೆ ಜಯಕಾಂತನ್‌ರ ಹೆಸರೇ ನೆನಪಿಗೆ ಬರುವುದು. ಇಪ್ಪತ್ತು ವರ್ಷ ಆಗುವ ಮೊದಲೇ ಕಥೆಗಾರರಾಗಿ ಹೊಮ್ಮಿದ್ದ ಜಯಕಾಂತನ್ ಕಳೆದ ಐದು ದಶಕಗಳಲ್ಲಿ ಶ್ರೇಷ್ಠಮಟ್ಟದ ಸಾಹಿತ್ಯ ರಚನೆ ಮಾಡಿದರು. 200ಕ್ಕೂ ಹೆಚ್ಚು ಕಥೆಗಳಿದ್ದ 15 ಕಥಾಸಂಕಲನಗಳು, 30ಕ್ಕೂ ಹೆಚ್ಚು ಕಾದಂಬರಿಗಳು, 15 ಪ್ರಬಂಧ ಸಂಕಲನಗಳು ಹೀಗೆ. ಅತ್ಯಂತ ಜನಪ್ರಿಯ ತಮಿಳು ಕಥೆಗಾರರಾಗಿದ್ದ ಜಯಕಾಂತನ್‌ಗೆ ಪ್ರಶಸ್ತಿ ಹೊಸದಲ್ಲ. 1972ರಲ್ಲಿ 'ಸಿಲಾ ನೇರುಗಲಿಲ್ ಸಿಲಾ ಮನಿತರಮಗಲ್' ಎಂಬ ಅವರ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತ್ತು. ತಂಜಾವೂರ್ ತಮಿಳು ವಿಶ್ವವಿದ್ಯಾಲಯದ ರಾಜರಾಜ ಚೋಳನ್ ಪ್ರಶಸ್ತಿ 80ರ ದಶಕದಲ್ಲಿ ಬಂದಿತ್ತು. 1996 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಫೆಲೋ' ಆಗಿ ಆಯ್ಕೆಯಾಗಿದ್ದರು.

'ಕಮ್ಯೂನ್‌ನಲ್ಲಿ' ಜಯಕಾಂತನ್

1934ರಲ್ಲಿ ಕುಡ್ಡಲೂರಿನಲ್ಲಿ ಜಯಕಾಂತನ್ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದರು. ಅವರ ಕುಟುಂಬದ ಹಲವರು ಆಗಲೇ ಸಕ್ರಿಯ ರಾಜಕೀಯದಲ್ಲಿ ತೊಡಗಿದ್ದು, ಅವರ ಒಲವು ಎಳೆವಯಸ್ಸಿನಲ್ಲೇ ಅತ್ತ ತಿರುಗಿತು. ಆಗಲೇ ಬಾಲಕ ಜಯಕಾಂತನ್ ಸುಬ್ರಹ್ಮಣ್ಯ ಭಾರತಿ ಅವರ ದೇಶಪ್ರೇಮಿ ಹಾಡುಗಳನ್ನು ಸಣ್ಣ ಗುಂಪುಗಳಲ್ಲಿ ಹಾಡುತ್ತಿದ್ದ. ಬಾಲಕನಾಗಿರುವಾಗಲೇ ಜಯಕಾಂತನ್ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರ ಕೆಲಸಗಳಿಂದ ಸ್ಫೂರ್ತಿ ಪಡೆದಿದ್ದ. ಸ್ಕೂಲು ಓದು ತನ್ನ ರಾಜಕೀಯ ಚಟುವಟಿಕೆಗೆ ತೊಡಕು ಎಂದುಕೊಂಡ ಜಯಕಾಂತನ್ ಊರು ಬಿಟ್ಟು ಚೆನ್ನೈಗೆ ಓಡಿಹೋದ. ಸಣ್ಣಪುಟ್ಟ ಕೆಲಸ ಮಾಡಿ ತಿರುಗುತ್ತಿದ್ದ ಜಯಕಾಂತನ್ ಕಮ್ಯೂನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುತ್ತಿದ್ದ ಕೆಲವರ ಆಶ್ರಯಕ್ಕೆ ಹೋದ. ಸಿಪಿಐನ ಪ್ರಿಂಟಿಂಗ್ ಪ್ರೆಸ್‌ನಲ್ಲಿ 'ಪ್ರೂಫ್ ರೀಡರ್' ಆಗಿ ಸೇರಿ, ಆಗ ಎಲ್ಲಾ ಪಾರ್ಟಿ ಕಾರ್ಯಕರ್ತರು ಸಾಮೂಹಿಕವಾಗಿ ವಾಸಿಸುತ್ತಿದ್ದ 'ಕಮ್ಯೂನ್'ನಲ್ಲಿ ಇರಲಾರಂಭಿಸಿದರು. ಕಮ್ಯೂನಿಸ್ಟ್ ಪಾರ್ಟಿಯ ತಮಿಳುನಾಡು ಪ್ರಾಂತ್ಯ ಮುಖ್ಯ ಕಚೇರಿಯಾದ್ದರಿಂದ ಅಲ್ಲಿ ಪಾರ್ಟಿಯ ಪ್ರಜ್ಞಾವಂತ ನಾಯಕರು, ಕಾರ್ಯಕರ್ತರು ಮತ್ತು ಬುದ್ಧಿಜೀವಿಗಳ ಪಡೆಯೇ 'ಕಮ್ಯೂನ್'ನಲ್ಲಿ ಇರುತ್ತಿತ್ತು. ಇವರೆಲ್ಲ ತನಗೆ 'ಜೀವಂತ ವಿಶ್ವವಿದ್ಯಾಲಯದಲ್ಲಿ' ಶಿಕ್ಷಣ ಕೊಟ್ಟರು ಎಂದಿದ್ದಾರೆ ಜಯಕಾಂತನ್ ಒಂದೆಡೆ. ತಮ್ಮೆಲ್ಲ ಸಂಪತ್ತು ಹೆಸರು ಸಮಯ ಮತ್ತು ದುಡಿಮೆಯನ್ನು ಪಾರ್ಟಿಗೆ ಮತ್ತು ನವಯುಗದ ಹುಟ್ಟಿಗೆ ಮೀಸಲಾಗಿಟ್ಟಿದ್ದ ಇವರೆಲ್ಲರಿಂದ ಪ್ರಭಾವಿತನಾದೆ ಎನ್ನುತ್ತಾರೆ. ಅವರ ಪ್ರೋತ್ಸಾಹ, ಮಾರ್ಗದರ್ಶನದಲ್ಲಿ ಜಯಕಾಂತನ್ ಸಾಹಿತ್ಯಾಭ್ಯಾಸ ಆರಂಭಿಸಿದರು.


ದಟ್ಟದರಿದ್ರರಬದುಕಿನ ಕಥೆ

ಪಕ್ಷದ ಬೆಂಬಲಿಗರು, ಕಾರ್ಯಕರ್ತರಾಗಿದ್ದ ಹಲವು ಲೇಖಕರು -ಎಸ್.ರಾಮಕೃಷ್ಣನ್, ಪಿ.ಜೀವಾನಂದಂ, ಆರ್.ಕೆ.ಕಣ್ಣನ್, ವಿಂದನ್, ತಮಿಳ್ ಒಲಿ ಮತ್ತು ಇಸ್ಮತ್ ಭಾಷಾ - ಜಯಕಾಂತನ್‌ರನ್ನು ಬರೆಯುವಂತೆ ಹುರಿದುಂಬಿಸಿದರು. ಜಯಕಾಂತನ್‌ರ

ಮೊದಲ ಕಥೆಗಳು ಪಕ್ಷದ ಪತ್ರಿಕೆ ಜನಶಕ್ತಿ ಮತ್ತು ಸರಸ್ವತಿ, ತಮರೈ, ಸಾಂಥಿ, ಮನಿತನ್, ಸಕ್ತಿ, ಸಮರಸ್ ಮುಂತಾದ ಸಣ್ಣ ಪತ್ರಿಕೆಗಳಲ್ಲಿ ಪ್ರಕಟವಾದವು. ಅವರ ಕಥೆಗಳಲ್ಲಿ ಪಾರ್ಟಿ ಆಫೀಸು ಸುತ್ತಮುತ್ತಲ ಕೊಳೆಗೇರಿಗಳಲ್ಲಿದ್ದ ದಟ್ಟದರಿದ್ರದ ದಾರುಣ ಬದುಕು ಸಶಕ್ತವಾಗಿ ದಟ್ಟವಾಗಿ ಮೂಡಿಬಂತು. ಜಯಕಾಂತನ್‌ರು ತಮಿಳಿನಲ್ಲಿ ಕೊಳೆಗೇರಿಗಳಲ್ಲಿ ಬದುಕುವ ದಟ್ಟದರಿತ್ರರ ಬವಣೆಯನ್ನು ಕತೆಗಳಲ್ಲಿ ತರುವಲ್ಲಿ ಮೊದಲಿಗರು ಎನ್ನಬಹುದು. ಇವೆಲ್ಲ ಕೆಲವು ಮಧ್ಯಮ ವರ್ಗದ ಓದುಗರಿಗೆ ಎಷ್ಟು ಹೊಸದು, ಅಪರಿಚಿತವಾಗಿದ್ದವೆಂದರೆ ಅವರನ್ನು ದಂಗುಬಡಿಸಿದವು. ಪುರುಮೈಪಿತನ್ ಎಂಬ ಇನ್ನೊಬ್ಬ ಕಥೆಗಾರರೂ ಇಂತಹ ವಿಷಯಗಳನ್ನು ಕೈಗೆತ್ತಿಕೊಂಡರು. ಆದರೆ ಜಯಕಾಂತನ್‌ರ ಕಥೆಗಳಲ್ಲಿ ಇವು ಹೆಚ್ಚು ಪ್ರಭಾವಕಾರಿಯಾಗಿ ಬಂದವು. ಇಬ್ಬರೂ ಮಾನವತಾವಾದದ ಆಶಯಗಳಿಂದ ಬರೆದರೂ ಮಾರ್ಕ್ಸ್‌ವಾದಿ ತಿಳುವಳಿಕೆ ಕೊಟ್ಟ ಆಳ ಮತ್ತು ಉತ್ತಮ ಪಾತ್ರ ಚಿತ್ರಣದಿಂದ ಜಯಕಾಂತನ್ ಮಿಂಚಿದರು ಎನ್ನುತ್ತಾರೆ. ಹಲವು ತಮಿಳು ವಿಮರ್ಶಕರು. 'ಒರು ಪಿಡಿ ಸೂರು', 'ತ್ರಿದಲ್', 'ತಾಂಪಕ್ಕಂ, 'ದೇವನ್ ಏರುವರಾ?' 'ಯಾರುಕ್ಕಾಗ್ ಆಳಂದನ್' ಮತ್ತು 'ಸುಮೈತಾಂಗಿ- ಅವರ ಕಥೆ ಮತ್ತು ಸಣ್ಣ ಕಾದಂಬರಿಗಳಲ್ಲಿ ಉತ್ತಮವೆನಿಸಿಕೊಂಡವು.

ಎರಡನೆ ಹಂತ

ತಮ್ಮ ಕಥೆಗಳಿಂದ ಬಹಳ ಜನಪ್ರಿಯರಾದ ಜಯಕಾಂತನ್‌ರ ಕಥೆಗಳನ್ನು ಆಗಿನ ಪ್ರತಿಷ್ಠಿತ ದೊಡ್ಡ ಪತ್ರಿಕೆಗಳಾದ ಆನಂದ ವಿಕಟನ್, ಕುಮುದಂ ಮತ್ತು ದಿನಮಣಿ ಕದಿರ್‌ಗಳೂ ಪ್ರಕಟಿಸಲಾರಂಭಿಸಿದವು. ಇದರ ಜತೆಗೆ ಜಯಕಾಂತನ್ ಸಾಹಿತ್ಯ ಜೀವನದಲ್ಲಿ ಹೊಸ ಹಂತ ಆರಂಭವಾಯಿತು. ಈ ಪತ್ರಿಕೆಗಳ ಬೇರೆ ತರಹದ ಓದುಗರು, ಧಾರಾವಾಹಿಯಾಗಿ ಪ್ರಕಟವಾಗುವ ನೀಳ್ಗತೆ/ಕಾದಂಬರಿಗಳ ರೂಪವನ್ನು ಶೋಧಿಸ ತೊಡಗಿದರು. ಜಯಕಾಂತನ್ ಕಥೆಗಳ ವಿಷಯ, ಶೈಲಿ, ಬಾಷೆಗಳಲ್ಲಿ, ತೀವ್ರ ಬದಲಾವಣೆಗಳಾದವು. ಹೆಚ್ಚೆಚ್ಚು ಮಧ್ಯಮ ವರ್ಗದ ಜೀವನದ ಬಗ್ಗೆ, ಅಲ್ಲೂ ಮದುವೆ ಸಂಬಂಧ, ಲಿಂಗ ತಾರತಮ್ಯದ ಹೊಸ ಪ್ರಶ್ನೆಗಳನ್ನು ಎಬ್ಬಿಸಿದರು. ಮಧ್ಯಮ ವರ್ಗದ ಹಲವು ನಂಬಿಕೆಗಳನ್ನು ಪ್ರಶ್ನಿಸಿ, ನಾಶ ಮಾಡಿದರು. ಅಲ್ಲೂ ಮಾನವತಾವಾದವನ್ನು ಮರೆದು, ಇನ್ನೊಂದು ಹಂತಕ್ಕೆ ಒಯ್ದರು. 'ಆದುಂ ನಾರ್ಕಾಲಿಗಲ್', 'ಆದುಗಿಂದ್ರನ'



"ನಾನು ಈಗಲೂ ಕಮ್ಯೂನಿಸ್ಟ್...

ಜಯಕಾಂತನ್‌ರ ಫ್ರಂಟ್‌ಲೈನ್ ಸಂದರ್ಶನದ ಆಯ್ದ ಭಾಗಗಳು

ಪ್ರಶ್ನೆ : ನೀವು ಕಮ್ಯೂನಿಸ್ಟ್ ಲೇಖಕರಾಗಿ ಸಾಹಿತ್ಯ ಜೀವನ ಆರಂಭಿಸಿದಿರಿ. ಆ ಮೇಲಿನ ನಿಮ್ಮ ಕೆಲವು ಕಥೆಗಳು ಆಧ್ಯಾತ್ಮದತ್ತ ಒಲಿದಿವೆ. ಇತ್ತೀಚಿನ ಸಂದರ್ಭವೊಂದರಲ್ಲಿ 'ನಾನು ಇನ್ನೂ ಮಾರ್ಕ್ಸ್‌ವಾದಿ' ಎಂದು ಹೇಳಿ ಕೊಂಡಿದ್ದೀರಿ. ಸೋವಿಯತ್ ಒಕ್ಕೂಟದ ಪತನದ ಕೆಲವು ತಿಂಗಳು ಮೊದಲು ಒಂದು ಪುಸ್ತಿಕೆ 'ಕಮ್ಯೂನಿಸ್ಟ್ ಸೋಲುವುದೆ?' ಎಂಬ ಪುಸ್ತಕ ಬರೆದಿದ್ದಿರಿ.

ಜಯಕಾಂತನ್: ಜಗತ್ತಿನಲ್ಲಿ ಸೋವಿಯತ್ ಒಕ್ಕೂಟ ಕಮ್ಯೂನಿಸಂನ ಏಕಮಾತ್ರ ಪ್ರತಿನಿಧಿ ಆಗಿರಲಿಲ್ಲ. ಸೋವಿಯಟ್ ಒಕ್ಕೂಟದಲ್ಲಿ ಆಗಿದ್ದು ಒಂದು ದೇಶದ ಏಳು-ಬೀಳು ಅಥವಾ ಪುನರ್ರಚನೆ ಮಾತ್ರ. ಕಮ್ಯುನಿಸಂ ತತ್ವಗಳಿಗೂ ಅದಕ್ಕೂ ಏನೂ ಸಂಬಂಧ ವಿರಲಿಲ್ಲ. ಒಂದು ತತ್ವಶಾಸ್ತ್ರವಾಗಿ ಮಾರ್ಕ್ಸ್‌ವಾದ ಉಳಿಯುತ್ತದೆ.

ಕಮ್ಯುನಿಸಂನ ಸತ್ವ ಏನು ಎಂಬುದು ನಿಮಗೆ ಗೊತ್ತೇ? ನಾವು ಇತ್ತೀಚಿಗೆ ಸದ್ದಾಂ ಹುಸೇನರನ್ನು ಅವಮಾನ ಮಾಡಿ ಚಿತ್ರಹಿಂಸೆ ಕೊಟ್ಟಿದ್ದು ನೋಡಿದೆವು. ಅಮೇರಿಕನ್ ಇರಾಕ್ ಅತಿಕ್ರಮಣದ ನೈತಿಕ ಆಧಾರದ ಬಗ್ಗೆ ಇನ್ನೂ ಚರ್ಚೆ ನಡೆಯುತ್ತಿದೆ. ಆದರೆ ಅಮೇರಿಕಕ್ಕೆ ಫಿಡೆಲ್ ಕ್ಯಾಸ್ಟ್ರೊ ಮೇಲೆ ಈ ರೀತಿ ದಾಳಿ ಮಾಡಲು ಸಾಧ್ಯವೇ? ಅಮೇರಿಕನ್ನರಿಗೆ ಅದು ಸಾಧ್ಯವೇ? ವಿಯೆಟ್ನಾಂ ಜತೆ ಅಮೇರಿಕ ಕ್ಷಮೆ ಕೇಳಬೇಕಾಯಿತಲ್ಲ? ಚೀನಾವನ್ನು ಮುಟ್ಟಲು ಅವರಿಗೆ ಧೈರ್ಯ ಬಂದೀತೆ? ಇದು ಕಮ್ಯೂನಿಸ್ಟ್ ಸರ್ಕಾರಗಳ ದೇಶಗಳ ನೈತಿಕ ಬಲ...

ನಾವು ಮಾರ್ಕ್ಸ್‌ವಾದ ಮತ್ತು ಸಮಾಜವಾದವನ್ನು ಭಾರತೀಯ ತತ್ವಶಾಸ್ತ್ರದ ದೃಷ್ಟಿಯಿಂದ ನೋಡಿದೆವು. 1917ರಲ್ಲಿ ಅಕ್ಟೋಬರ್ ಕ್ರಾಂತಿ ಆಗುವ ಮೊದಲೇ, (ಸುಬ್ರಹ್ಮಣ್ಯ) ಭಾರತಿಯವರು ಭಾರತದ 30 ಕೋಟಿ ಜನರ ಒಳಿತಿಗೆ ಕಮ್ಯುನಿಸಂ ಬೇಕು ಎಂದು ಅರಿತಿದ್ದರು. ಅದು ಭಾರತದ ತತ್ವಶಾಸ್ತ್ರದ ಮೂಲಗಳಿಂದ ಬಂತು.


ಪ್ರಶ್ನೆ : ಮಾರ್ಕ್ಸ್‌ವಾದ ಮತ್ತು ಆಧ್ಯಾತ್ಮವಾದದ ನಡುವೆ ನಿಮಗೆ ಏನೂ ವೈರುದ್ಯ ಕಾಣುವುದಿಲ್ಲವೇ?

ಜಯಕಾಂತನ್ : ಭಾರತದ ತತ್ವಶಾಸ್ತ್ರದ ದೃಷ್ಟಿಯಿಂದ ಮತ್ತು ಹಿಂದೂ ಅರ್ಥದಲ್ಲಿ ಕಾರ್ಲ್‌ಮಾರ್ಕ್ಸ್ ಸ್ವತಃ ಒಬ್ಬ ಆಧ್ಯಾತ್ಮ ವಾದಿ. ಮಾರ್ಕ್ಸ್‌ವಾದದಂತೆ ಆಧ್ಯಾತ್ಮವಾದ ಸಹ ಮಾನವತಾವಾದದ ಪರಮ ಹಂತ. ಎರಡೂ ಜನರ ಒಳಿತಿಗೆ ಇರುವುದು. ನಾನು ಯಾವುದೇ ಪಕ್ಷದ ಸದಸ್ಯನಲ್ಲದಿರಬಹುದು. ಆದರೆ ನಾನು ಈಗಲೂ ಕಮ್ಯುನಿಸ್ಟ್. ಕೆಲವು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯ ದಿಂದಾಗಿ ನಾನು ಪಕ್ಷ ಬಿಡಬೇಕಾಯಿತು ಅಷ್ಟೆ.

'ಗೊಕಿಲ ಎನ್ನ ಸೇತು ವಿಟಲ್', 'ಅಗ್ನಿಪಿರವೇಸಂ' 'ಬುದಮೂಲಂ', 'ವಿಳ್ತಗಳ್' 'ನಿಲನೆರಗಾಲಿಲ್ ನಿಲ ಮನಿತರಗಲ್', 'ಪಾಂಸುಕ್ಕುವೊ' ಮತ್ತು 'ಗಂಗೈ ಎಂಗೆ ಪೊಂಗಿರಲ್' ಈ ಹಂತದ ಉತ್ತಮ ಕಥೆ/ಕಾದಂಬರಿಗಳು. ಇವು ಜಯಕಾಂತನ್ ಯಾವುದೇ ವಿಷಯದ ಮೇಲೆ ಕಲಾತ್ಮಕತೆ, ಸಾಮಾಜಿಕ ಜವಾಬ್ದಾರಿಯಿಂದ ಬರೆಯಬಲ್ಲರು ಎಂದು ತೋರಿಸಿತು. 'ಒರು ಮನಿಷನ್, ಒರು ವೀಡು, ಒರು ಉಲಗಂ' -ಸಾಂಸ್ಕೃತಿಕವಾಗಿ ಶ್ರೀಮಂತವಾದ ಕಾದಂಬರಿ ತಮಿಳ್ ಗ್ರಾಮೀಣ ಜೀವನದ ಸೊಗಡನ್ನು ಸೊಗಸಾಗಿ ಬಿಂಬಿಸಿತು. ಇದು ಇಂಗ್ಲಿಷ್‌ಗೆ ಭಾಷಾಂತರವಾಗಿದೆ.

ಪ್ರಖರ ಮಾನವತಾವಾದಿ

ಆದರೆ ಕೆಲವು ವಿಮರ್ಶಕರು, ಮೊದಲ ಹಂತದ ಕಥೆಗಳ ಅಭಿಮಾನಿಗಳು ಕೆಲವರಿಗೆ ಈ ಹಂತ ಮೆಚ್ಚಿಗೆಯಾಗಲಿಲ್ಲ. ಈ ಹಂತದಲ್ಲಿ ಅವರು 'ದಟ್ಟದರಿದ್ರರ' ವಿಷಯದಿಂದ 'ಪ್ರತಿಷ್ಠಿತ'ರಿಗೆ ಪ್ರಿಯವಾಗುವ ವಿಷಯಗಳಿಗೆ ಸರಿದರು. ಅಲ್ಲೂ ಅವರು ಸಾಂಪ್ರದಾಯಕತೆ ವಿರುದ್ಧ ದನಿ ಎತ್ತಿದರು. ಅವರ ಪ್ರಗತಿಪರ ಧೋರಣೆ ಬಿಟ್ಟುಕೊಡಲಿಲ್ಲ ಎಂದು ಅವರ ಅಭಿಮಾನಿಗಳ ಮತ. ಕಮ್ಯುನಿಸ್ಟ್ ಪಕ್ಷವನ್ನು ಅವರು ಬಿಟ್ಟಿದ್ದು, ಕಾಂಗ್ರೆಸ್ ಬೆಂಬಲಿಗರಾಗಿದ್ದು 60ರ ದಶಕದಲ್ಲಿ. ದೇಶದಲ್ಲಿ ಆದ ರಾಜಕೀಯ-ಸಾಮಾಜಿಕ ಪಲ್ಲಟಗಳು ಅವರನ್ನು ದಿಕ್ಕುತಪ್ಪಿಸಿದವು ಎಂದು ಕೆಲವು ಟೀಕಾಕಾರರ ಅಭಿಪ್ರಾಯ. ಆಗಲೂ ಆಮೇಲೂ ಜಯಕಾಂತನ್ ತಮ್ಮ ಮಾನವತಾವಾದ ಪ್ರಖರವಾಗಿರುವ ಉತ್ತಮ ಕೃತಿಗಳನ್ನು ನೀಡಿದರು. ಇತ್ತೀಚೆಗೆ ಅವರು ಆಧ್ಯಾತ್ಮದತ್ತಲೂ ಒಲಿದಿದ್ದಾರೆ. ಅವರ ಇತ್ತೀಚಿನ ಕಥೆಯೊಂದರಲ್ಲಿ ಕಂಚಿ ಶಂಕರಾಚಾರ್ಯರ 'ಸಮರ್ಥನೆ' ಸಹ ಇದೆ ಎಂದು ಹಲವರ ಅಭಿಪ್ರಾಯ. ಜಯಕಾಂತನ್ ಮಾತ್ರ ತಾನು ಈಗಲೂ ಮಾರ್ಕ್ಸ್‌ವಾದಿ ಮತ್ತು ಆಧ್ಯಾತ್ಮವಾದಿ. ಎರಡಕ್ಕೂ ಮಾನವತಾವಾದವೇ ಆಧಾರ ಎನ್ನುತ್ತಾರಂತೆ. ಅದು ಏನೇ ಇರಲಿ



ಜಯಕಾಂತನ್ ತಮಿಳು, ದೇಶದ ಅತ್ಯಂತ ಪ್ರಭಾವಿ ಕಥೆಗಾರರು ಎಂಬುದರಲ್ಲಿ ಸಂಶಯವಿಲ್ಲ. ಮಾರ್ಕ್ಸ್‌ವಾದ- ಆಧ್ಯಾತ್ಮದ ನಡುವಿನ ಅವರ ಗೊಂದಲ ಕಥೆಗಾರರಿಗೆ ಜಯಕಾಂತನ್‌ರ ಮಹಾನತೆ ಕಡಿಮೆ ಮಾಡುವುದಿಲ್ಲ.

ಶುಭಾಶಯಗಳೊಂದಿಗೆ



ಪ್ರವೀಣ ಆಕಾಶಿ

ವಿಜಾಪುರ

PRB DECR 319-79/79 AIKYARANGA WEEKLY
Reg. No. 17015/64 CPM(G)/ KA /BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.